ದೇವರ ವಾಕ್ಯ ಅದ್ಭುತದ ಬೀಜ



ದೇವರ ಅಸಾಧಾರಣವಾದ ಶಕ್ತಿಯನ್ನು ಆತನ ವಾಕ್ಯದ ಮೂಲಕ ಅನುಭವಿಸುವುದು

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2026

ಸಂಪರ್ಕ ಮಾಹಿತಿ
All Peoples Church & World Outreach,
319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ವಿತರಣೆಯು ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು-ಜೆ.ವಿ-ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

ಉಚಿತ ವಿತರಣೆಗಾಗಿ
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ "ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ" ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್ಗಳು
ಪ್ರಸಂಗಗಳು: apcwo.org/sermons | **ಪುಸ್ತಕಗಳು:** apcwo.org/books
ಚರ್ಚ್ ಆಪ್: apcwo.org/app | **ಸತ್ಯವೇದ ಕಾಲೇಜು:** apcbiblecollege.org
ಇ-ಕಲಿಕೆ: apcbiblecollege.org/elearn | **ಸಲಹಾ ಸೇವೆ:** chrysalislife.org
ಸಂಗೀತ: apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
ಏಪಿಸಿ ಪ್ರಪಂಚ ಸೇವೆಗಳು: apcworldmissions.org
ವಿಶ್ವಾಸಿಗಳ ಸತ್ಯವೇದ ವ್ಯಾಖ್ಯಾನ: believersbiblecommentary.com

(Kannada—God's Word-The Miracle Seed)

ದೇವರ ವಾಕ್ಯ ಅದ್ಭುತದ ಬೀಜ

ದೇವರ ಅಸಾಧಾರಣವಾದ ಶಕ್ತಿಯನ್ನು ಆತನ ವಾಕ್ಯದ ಮೂಲಕ ಅನುಭವಿಸುವುದು

ಪರಿವಿಡಿ

ಪರಿಚಯ

1. ದೇವರ ವಾಕ್ಯ: ನಮ್ಮ ನಂಬಿಕೆಯ ಅಡಿಪಾಯ 1
2. ದೇವರ ವಾಕ್ಯ: ಅದರ ಶುದ್ಧತೆ ಮತ್ತು ಶಕ್ತಿ 10
3. ದೇವರ ವಾಕ್ಯ: ಅದ್ಭುತದ ಬೀಜ 22
4. ಬೀಜವೆಂದರೆ ದೇವರ ವಾಕ್ಯ 26
5. ಬೀಜವನ್ನು ಹೃದಯದೊಳಗೆ ಬಿತ್ತಬೇಕು 32
6. ದೇವರ ವಾಕ್ಯವನ್ನು ಧ್ಯಾನಿಸುವದು 38
7. ಬೀಜವನ್ನು ಕಾಪಾಡಬೇಕು ಮತ್ತು ಪೋಷಿಸಬೇಕು 66
8. ಪ್ರಕಟನೆ: ಆತ್ಮೀಕ ತಿಳುವಳಿಕೆಯನ್ನು ಹೊಂದುವದು 71
9. ಸುಗ್ಗಿಗೆ ತೊಡಕುಗಳು: ವಾಕ್ಯಕ್ಕೆ ವಿರೋಧ 76
10. ಸುಗ್ಗಿಗೆ ತೊಡಕುಗಳು: ವಾಕ್ಯವನ್ನು ಅಡಗಿಸುವ ಮುಳ್ಳುಗಳು 79
11. ಮೂರು ಕೀಲಿಗಳು: ತಿಳುಕೊಳ್ಳುವದು, ಕೈಗೊಳ್ಳುವದು, ಇಟ್ಟುಕೊಳ್ಳುವದು 82
12. ವಾಕ್ಯದ ಬೀಜಗಳು 88

ಪರಿಚಯ

ನಾವೆಲ್ಲರೂ ನಮ್ಮ ಜೀವಿತಗಳಲ್ಲಿ ದೇವರ ವಾಕ್ಯವನ್ನು ಅನುಭವಿಸಲು ಬಯಸುತ್ತೇವೆ. ವೈಯಕ್ತಿಕವಾಗಿ ಮತ್ತು ಇತರರಿಗಾಗಿ ದೇವರ ಶಕ್ತಿಯು ರಕ್ಷಿಸಬೇಕು, ಗುಣಪಡಿಸಬೇಕು, ಬಿಡುಗಡೆಗೊಳಿಸಬೇಕು ಮತ್ತು ಅದ್ಭುತಗಳನ್ನು ಮಾಡಬೇಕು ಎಂದು ನಾವು ಬಯಸುತ್ತೇವೆ. ಸಾಮಾನ್ಯವಾಗಿ, ನಾವು "ಅಬ್ಬಬ್ಬಾ" ಎಂದು ಹೇಳುವಂಥಹ ದೇವರ ಶಕ್ತಿಯ ಭವ್ಯವಾದ ಪ್ರದರ್ಶನವನ್ನು ನಿರೀಕ್ಷಿಸುತ್ತೇವೆ. ದೇವರು, ಪವಿತ್ರಾತ್ಮನ ಶಕ್ತಿಯಿಂದ ತನ್ನ ಕಾರ್ಯವನ್ನು ಭವ್ಯವಾದ ರೀತಿಯಲ್ಲಿ ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳಿಂದ ಪ್ರದರ್ಶಿಸುತ್ತಾನಾದರೂ, ದೇವರು ತನ್ನ ವಾಕ್ಯದ ಮೂಲಕವೂ ಕಾರ್ಯಮಾಡುತ್ತಾನೆ ಎಂಬದನ್ನು ನಾವು ಮರೆಯಬಾರದು. ದೇವರಾತ್ಮನು ತನ್ನ ಶಕ್ತಿಯನ್ನು ದೇವರ ವಾಕ್ಯದ ಮೂಲಕ ಬಿಡುಗಡೆ ಮಾಡುತ್ತಾನೆ. ದೇವರ ವಾಕ್ಯವನ್ನು ಓದುವ, ಧ್ಯಾನ ಮಾಡುವ ಮತ್ತು ನಮ್ಮ ಜೀವಿತಗಳಲ್ಲಿ ಅಂಗೀಕರಿಸಿಕೊಳ್ಳುವ ಪ್ರಕ್ರಿಯೆಯು ಭವ್ಯವಾಗಿ ಕಾಣಿಸದೆ ಹೋದರೂ, ಅದು ಅಲೌಕಿಕ ಕಾರ್ಯಕ್ಕಿಂತ ಕಡಿಮೆಯೇನೂ ಅಲ್ಲ ಯಾಕಂದರೆ ಅದೂ ಕೂಡ ದೇವರ ವಾಕ್ಯದ ಕಾರ್ಯವೇ ಆಗಿದೆ. ಬಹಳಷ್ಟು ವಿಶ್ವಾಸಿಗಳು ದೇವರು ಅವರ ಅನುದಿನದ ಜೀವಿತದಲ್ಲಿ ತನ್ನ ವಾಕ್ಯದ ಮೂಲಕ ಬಿಡುಗಡೆಗೊಳಿಸಲು ಬಯಸುವ ಅಸಾಧಾರಣವಾದ ಕಾರ್ಯಗಳನ್ನು ತಪ್ಪಿಸಿಕೊಳ್ಳುತ್ತಾ ಇದ್ದಾರೆ ಯಾಕಂದರೆ ಅವರು ಬರೀ ಭವ್ಯವಾದ ಕಾರ್ಯಗಳನ್ನೇ ಎದುರುನೋಡುವವರಾಗಿದ್ದಾರೆ.

ಮತ್ತೊಂದುಸಾಮಾನ್ಯವಾದಸಮಸ್ಯೆಏನೆಂದರೆಬಹಳಷ್ಟುವಿಶ್ವಾಸಿಗಳು ತಮ್ಮನ್ನು ದೇವರ ಶಕ್ತಿಯಲ್ಲಿ ನಡೆಸಲು ಅಭಿಷಿಕ್ತರಾದ ದೈವೀಕ ಪುರುಷರನ್ನು ಅಥವಾ ಸ್ತ್ರೀಯರನ್ನು ಎದುರುನೋಡುತ್ತಾರೆ. ದೇವರು ತನ್ನ ಆತ್ಮನ ಮೂಲಕ ಜನರ ಸೇವೆಮಾಡುವ ಸೇವಕರನ್ನು ಅಭಿಷೇಕಿಸಿದ್ದಾನಾದರೂ, ಕ್ರಮೇಣವಾಗಿ, ಪ್ರತಿಯೊಬ್ಬ ವಿಶ್ವಾಸಿಯು ದೇವರಿಂದ ಆತನ ವಾಕ್ಯ ಮತ್ತು ಆತನ ಆತ್ಮನ ಮೂಲಕ ಹೊಂದಿಕೊಳ್ಳುವದನ್ನು ಕಲಿತುಕೊಳ್ಳುವ ಸ್ಥಾನಕ್ಕೆ ಬರಬೇಕು. ಯೇಸು ಕ್ರಿಸ್ತನು ನಮ್ಮೆಲ್ಲರನ್ನು, ಆತನಲ್ಲಿ ತಿನ್ನಲು

ಮತ್ತು ಕುಡಿಯಲು ನೇರವಾಗಿ ತನ್ನ ಬಳಿಗೆ ಆಹ್ವಾನಿಸಿದ್ದಾನೆ; ಹೀಗೆ ನಾವು ಪ್ರತಿಯೊಬ್ಬರೂ ಆತನ ಕೃಪೆಯನ್ನು ಇತರರಿಗೆ ವಿತರಿಸುವವರಾಗಿದ್ದು ಅವರನ್ನು ಯೇಸುವಿನ ಬಳಿಗೆ ಕರೆದುಕೊಂಡು ಬರುವಾಗ ಅವರೂ ಆತನ ಬಳಿಯಲ್ಲಿ ತಿನ್ನಲು ಹಾಗೂ ಕುಡಿಯಲು ಸಾಧ್ಯವಾಗುತ್ತದೆ. ನಾವು ಮಧ್ಯವರ್ತಿಗಳ ಮೇಲೆ ಆತುಕೊಳ್ಳುವವರಾಗಬಾರದು.

ದೇವರು ತನ್ನ ವಾಕ್ಯದ ಮೂಲಕ ಕಾರ್ಯಮಾಡುತ್ತಾನೆ ಎಂಬದು ನಮಗೆ ಗೊತ್ತಿದೆ. ಆತನು ಎಲ್ಲವನ್ನು ಹೀಗೆಯೇ ಉಂಟುಮಾಡಿದನು—ತನ್ನ ವಾಕ್ಯದಿಂದ ಶಕ್ತಿಯನ್ನು ಬಿಡುಗಡೆಗೊಳಿಸುವ ಮೂಲಕ ಉಂಟುಮಾಡಿದನು. ದೇವರ ವಾಕ್ಯವು ದೇವರ ಜೀವ ಮತ್ತು ಶಕ್ತಿಯನ್ನು ಹೊತ್ತುಕೊಂಡಿದ್ದು ನಮ್ಮ ಜೀವಿತದ ಪ್ರತಿಯೊಂದು ಕಾರ್ಯದ ಮೇಲೆಯೂ ಪ್ರಭಾವ ಬೀರುತ್ತದೆ. ದೇವರು ನಮಗೆ ತನ್ನ ವಾಕ್ಯವನ್ನು ಕೊಟ್ಟಿದ್ದಾನೆ ಮತ್ತು ತನ್ನ ವಾಕ್ಯದ ಶಕ್ತಿಯ ಮೂಲಕ ನಮ್ಮಲ್ಲಿ ಕಾರ್ಯಮಾಡಲು ಬಯಸುತ್ತಾನೆ. ಇದಲ್ಲದೆ ಆತನ ವಾಕ್ಯವನ್ನು ಹೊಂದಿಕೊಳ್ಳುವದು ಹೇಗೆ ಎಂಬದನ್ನೂ ಆತನು ನಮಗೆ ಪ್ರಕಟಪಡಿಸಿದ್ದಾನೆ ಆದ್ದರಿಂದ ಆತನ ವಾಕ್ಯದಲ್ಲಿರುವ ಜೀವ ಮತ್ತು ಶಕ್ತಿ ಆತನ ಅಸಾಧಾರಣವಾದ ಕಾರ್ಯವು ನಮ್ಮಲ್ಲಿ ಉಂಟಾಗುವಂತೆ ಬಿಡುಗಡೆಯಾಗುತ್ತದೆ.

ದೇವರ ವಾಕ್ಯದ ಧ್ಯಾನವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ದೇವರ ವಾಕ್ಯವು ನಮ್ಮ ಹೃದಯಗಳಲ್ಲಿ ನೆಲೆಯಾಗುತ್ತದೆ. ದೇವರ ವಾಕ್ಯದ ಧ್ಯಾನವು ಚಿಂತನೆ, ದೃಶ್ಯೀಕರಣ ಮತ್ತು ಅರಿಕೆಯನ್ನು ಒಳಗೊಂಡಿರುತ್ತದೆ. ದೇವರ ವಾಕ್ಯದ ಧ್ಯಾನ ಅಭ್ಯಾಸ ಮಾಡುವದು ಹೇಗೆ ಎಂಬದನ್ನು ನೀವು ಕಲಿತುಕೊಳ್ಳುವಿರಿ ಆದ್ದರಿಂದ ದೇವರ ವಾಕ್ಯದ ಅದ್ಭುತ ಬೀಜವು ನಿಮ್ಮ ಜೀವಿತದಲ್ಲಿ ಉಂಟಾಗುತ್ತದೆ. ಈ ಪುಸ್ತಕವು ಅನಾವರಣಗೊಳಿಸುವ ಸರಳವಾದ ಸತ್ಯಗಳು ಅದ್ಭುತವಾದ ಬೀಜವಾಗಿರುವ ದೇವರ ವಾಕ್ಯದ ಮೂಲಕ ಆತನ ಅಸಾಧಾರಣವಾದ ಶಕ್ತಿಯನ್ನು ಹೊಂದಿಕೊಳ್ಳಲು ಮತ್ತು ಅನುಭವಿಸಲು ನಮಗೆ ಸಹಾಯ ಮಾಡುತ್ತವೆ.

ದೇವರು ಆಶೀರ್ವದಿಸಲಿ!

ಆಶಿಷ್ ರಾಯ್‌ಚೂರ್

1

ದೇವರ ವಾಕ್ಯ: ನಮ್ಮ ನಂಬಿಕೆಯ ಅಡಿಪಾಯ

ನಮ್ಮ ಕ್ರೈಸ್ತ ನಡಿಗೆಯಲ್ಲಿ ಒಂದು ಪ್ರಾಮುಖ್ಯವಾದ ಅಂಶವಿದೆ, ಅದು ಎಷ್ಟು ಅವಶ್ಯಕವಾಗಿದೆ ಎಂದರೆ ನಮ್ಮ ಇಡೀ ಕ್ರೈಸ್ತೀಯ ಅನುಭವದ ಗುಣಮಟ್ಟವನ್ನು ದೃಢಪಡಿಸುವದು ಅದುವೇ ಆಗಿದೆ. ಅದು ದೇವರ ವಾಕ್ಯವಾಗಿದೆ. ದೇವರಲ್ಲಿ ನಾವು ಯಾವ ಹಂತದ ಪರಿಪಕ್ವತೆಗೆ ಬೆಳೆಯುತ್ತೇವೆ ಮತ್ತು ಆಳಕ್ಕೆ ಹೋಗುತ್ತೇವೆ ಎಂಬದು ನಮ್ಮ ಜೀವಿತಗಳಲ್ಲಿ ನಾವು ಆತನ ವಾಕ್ಯಕ್ಕೆ ಯಾವ ಸ್ಥಾನವನ್ನು ಕೊಡುತ್ತೇವೆ ಎಂಬದರ ಮೇಲೆ ನಿರ್ಧಾರವಾಗುತ್ತದೆ. ನಾವು ಜಯದಲ್ಲಿ ಜೀವಿಸುತ್ತಿರಬಹುದು ಅಥವಾ ಇಲ್ಲದಿರಬಹುದು ಮತ್ತು ನಾವು ಅನುಭವಿಸುವ ಆಶೀರ್ವಾದಗಳ ಅಳತೆಯು ನಾವು ದೇವರ ವಾಕ್ಯವನ್ನು ಹೊಂದಿಕೊಳ್ಳಲು ಮತ್ತು ಅದನ್ನು ನಮ್ಮ ಅನುದಿನದ ಜೀವಿತದಲ್ಲಿ ಸ್ಥಿರವಾಗಿ ಅಭ್ಯಾಸ ಮಾಡಲು ಮುಂದಾಗುವ ಅಳತೆಯ ಮೇರೆಗೆ ದೊಡ್ಡ ಪ್ರಭಾವಕ್ಕೆ ಒಳಗಾಗುತ್ತದೆ.

ಆದರೂ, ಭವ್ಯವಾದ ಕಾರ್ಯಗಳನ್ನೇ ಎದುರುನೋಡುವ "ವಿದ್ಯಮಾನಕ್ಕೆ" ಒಳಗಾಗಿರುವ ಲೋಕದಲ್ಲಿ, "ಪ್ರಾಚೀನ ಪುಸ್ತಕದ" ವಿಷಯಗಳಿಗೆ ಗಮನ ಕೊಡಲು ಬಹಳಷ್ಟು ಮಂದಿ ಇನ್ನೂ ಸಿದ್ಧರಾಗಿಲ್ಲ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ನೈತಿಕವಾಗಿ ಅಸಮಂಜಸವಾಗಿದೆ ಎಂದು ಕೆಲವರು ಹೇಳುವ ಈ ಧಾರ್ಮಿಕ ಪುಸ್ತಕದ ಮಾತುಗಳ ಅರ್ಥವನ್ನು ತಿಳಿದುಕೊಳ್ಳುವದರಲ್ಲಿ ಯಾರು ತಾನೇ ಸಮಯವನ್ನು ಕಳೆಯುತ್ತಾರೆ? ದುಃಖದ ವಿಷಯ ಎಂದರೆ, ವಿಶ್ವಾಸಿಗಳಲ್ಲಿಯೂ ಕೆಲವರು, "ಧ್ಯಾನ ಸಮಯ" ನಡೆಸುವ ಕರ್ತವ್ಯವನ್ನು ನಿಭಾಯಿಸುವದನ್ನು ಬಿಟ್ಟರೆ, ಬರೆಯಲ್ಪಟ್ಟಿರುವ ಶಾಸ್ತ್ರವಚನಗಳು ಒಬ್ಬನ ಮೇಲೆ ಬೀರಬಹುದಾದ ಪ್ರಭಾವ ಮತ್ತು ಪರಿಣಾಮದ ಅಗಾಧವಾಗಿರುವ ತಿಳುವಳಿಕೆಯನ್ನು ಇನ್ನೂ ಹೊಂದದೆ ಇದ್ದಾರೆ. ಪ್ರಾರಂಭದಲ್ಲಿ, ವಾಕ್ಯಗಳು ಜೀವವಿಲ್ಲದವುಗಳಾಗಿ, ಬಹುಶಃ, ಸಾಧಾರಣವಾಗಿ ಓದುವವನಿಗೆ ಬೇಸರಿಕೆ ತರಿಸುವಂತೆ ಅನ್ನಿಸುವದು ಸತ್ಯವೇ ಆಗಿದೆ. ಆದರೆ ಅದರ ಅಂತರ್ಗತವಾದ ಶಕ್ತಿಯ ತಿಳುವಳಿಕೆಯನ್ನು ಹೊಂದಿರುವವರು ಮತ್ತು

ತನ್ನ ಜನರ ಜೀವಿತಗಳಲ್ಲಿ ದೇವರು ತಾನೇ ತನ್ನ ವಾಕ್ಯಗಳಿಗೆ ಜಾಗವನ್ನು ಕೊಟ್ಟಿರುವದರಿಂದ, ವಾಕ್ಯವು ಸಜೀವವಾಗಿದೆ! ಅವರಿಗೆ, ವಾಕ್ಯವು ಬಲ, ಆದರಣೆ, ನಿರೀಕ್ಷೆ, ನಂಬಿಕೆ, ಸೂಚನೆ ಮತ್ತು ಜ್ಞಾನಕ್ಕೆ ಮೂಲವಾಗಿದೆ. ಅವರು ತಮ್ಮ ವರ್ತಮಾನ ಮತ್ತು ಭವಿಷ್ಯತ್ ಕಾಲವನ್ನು ವಚನಗಳು ಹೇಳುವದರ ಮೇಲೆ ನೆಲೆಯಾಗಿಸಿದ್ದಾರೆ. ಜೀವನದ ಬಿರುಗಾಳಿಗಳ ನಡುವೆ, ವಾಕ್ಯವು ಅವರಿಗೆ ಆಧಾರವಾಗಿರುತ್ತದೆ ಮತ್ತು ಅವರನ್ನು ಮೇಲೆತ್ತುತ್ತದೆ ಎಂಬದು ಅವರಿಗೆ ಗೊತ್ತಿದೆ. ಅನಾರೋಗ್ಯಗಳ ನಡುವೆ, ವಾಕ್ಯವು ಸ್ವಸ್ಥತೆ ಹಾಗೂ ಬಿಡುಗಡೆಯನ್ನು ಕೊಡುತ್ತದೆ ಎಂಬದು ಅವರಿಗೆ ಗೊತ್ತಿದೆ. ಸವಾಲುಗಳು ಮತ್ತು ಒತ್ತಡಗಳಲ್ಲಿ, ವಾಕ್ಯವು ಕೊಡುವ ವಾಗ್ದಾನಗಳಲ್ಲಿ ಅವರು ದೃಢವಾಗಿ ನಿಂತುಕೊಳ್ಳುತ್ತಾರೆ. ಅವರು ಅಸಾಧ್ಯತೆಗಳನ್ನು ನೋಡಿ ನಗುತ್ತಾರೆ ಯಾಕಂದರೆ ವಾಕ್ಯದಲ್ಲಿ ಅವರು ಸಾಧ್ಯತೆಗಳನ್ನು ನೋಡುವವರಾಗಿರುತ್ತಾರೆ. ನೋಡಲು, ಮುಟ್ಟಲು, ಕೇಳಿಸಿಕೊಳ್ಳಲು, ವಾಸನೆ ಅಥವಾ ರುಚಿ ನೋಡಲು ಆಗದೆ ಇರುವಾಗಲೂ, ಅವರಿಗೆ ಗೊತ್ತಿರುತ್ತದೆ ಯಾಕಂದರೆ ವಾಕ್ಯವು ಅವರೊಳಗೆ ಆತ್ಮವಿಶ್ವಾಸದ ಭರವಸೆ ಮತ್ತು ದೃಢವಾಗಿರುವ, ಸ್ಥಿರವಾಗಿರುವ ನಂಬಿಕೆಯನ್ನು ಉಂಟುಮಾಡಿದೆ.

ನಮ್ಮ ಹೃದಯದ ಬಯಕೆ ಏನೆಂದರೆ ಈ ಪುಸ್ತಕವನ್ನು ಓದುವ ಪ್ರತಿಯೊಬ್ಬರೂ ಕರ್ತನೊಂದಿಗಿನ ತಮ್ಮ ನಡಿಗೆಯಲ್ಲಿ ಇಂಥ ಆತ್ಮವಿಶ್ವಾಸದ ಭರವಸೆಯುಳ್ಳವರಾಗಬೇಕು. ಒಂದು ವೇಳೆ ನೀವು ಈಗಾಗಲೇ ವಾಕ್ಯದ ಬಗ್ಗೆ ತಕ್ಕ ಮಟ್ಟದ ತಿಳುವಳಿಕೆಯನ್ನು ಹೊಂದಿಕೊಂಡಿರುವದಾದರೆ, ನೀವು ಇನ್ನೂ ಹೆಚ್ಚಾಗಿ ಬಲಗೊಳ್ಳಬೇಕು ಮತ್ತು ಪ್ರೋತ್ಸಾಹಗೊಳ್ಳಬೇಕು ಎಂದು ನಾವು ಬಯಸುತ್ತೇವೆ.

ನಿತ್ಯವಾದ ವಾಕ್ಯ, ಮಾನವನಾಗಿ ಬಂದ ವಾಕ್ಯ, ಬರೆಯಲ್ಪಟ್ಟಿರುವ ವಾಕ್ಯ

ಲೂಕ 24:27

ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿದನು.

ದೇವಕುಮಾರನಾಗಿರುವ, ಯೇಸು, ನಿತ್ಯನಾದ ವಾಕ್ಯವಾಗಿದ್ದು (ಯೋಹಾನ 1:1-4), ಮಾನವನಾಗಿ ಬಂದ ವಾಕ್ಯವಾಗಿ (ಯೋಹಾನ 1:14) ಬರೆಯಲ್ಪಟ್ಟಿರುವ ವಾಕ್ಯವಾಗಿ, ಶಾಸ್ತ್ರಗಳಲ್ಲಿ ಹೇಳಿರುವ ಹಾಗೆಯೇ

ಜೀವಿಸಿದನು, ಬೋಧಿಸಿದನು ಮತ್ತು ಕಲಿಸಿದನು. ಚಿಕ್ಕ ವಯಸ್ಸಿನಿಂದಲೇ, ಯೇಸು ಕ್ರಿಸ್ತನು ಶಾಸ್ತ್ರಗಳ ಅಧ್ಯಯನ ಮತ್ತು ಕಲಿಕೆಯಲ್ಲಿ ನಿರತನಾಗಿದ್ದನು (ಲೂಕ 2:46). ಆತನು ಬರೆಯಲ್ಪಟ್ಟಿರುವ ವಾಕ್ಯದ ಮೂಲಕ ಶೋಧನೆಗಳನ್ನು ಜಯಿಸಿದನು (ಮತ್ತಾಯ 4:1-10). ಮಾನವನಾಗಿ ಜನಿಸಿ ಬಂದ ವಾಕ್ಯವೆಂಬವನು ಆತ್ಮನಿಂದ ಅಭಿಷೇಕ ಹೊಂದಿದ್ದನು ಮತ್ತು ಶಾಸ್ತ್ರಗಳನ್ನು ನೆರವೇರಿಸಲು ಯೋಗ್ಯವಾದ ರೀತಿಯಲ್ಲಿ ಜೀವಿಸಿದನು (ಲೂಕ 4:21; ಮಾರ್ಕ 14:49; ಲೂಕ 24:44). ಇದು ಅದ್ಭುತವಾದ ಸಂಗತಿಯಾಗಿದೆ ಅಲ್ಲವೇ-ನಿತ್ಯನಾದ ವಾಕ್ಯವಾಗಿರುವ, ದೇವರು ಮಾನವನಾಗಿ ಜನಿಸಿ ಬಂದು ಬರೆಯಲ್ಪಟ್ಟಿರುವ ವಾಕ್ಯವನ್ನು ಘನತೆಯೊಂದಿಗೆ ನಿಭಾಯಿಸುವದು ಅದ್ಭುತವೇ ಸರಿ. ನಾವು ಇನ್ನೆಷ್ಟು ಘನವಾಗಿ ಅದನ್ನು ನಿಭಾಯಿಸಬೇಕು?

ಹುಚ್ಚುಮಾತಿನ ಉಪದೇಶದ ಮೂಲಕ

1 ಕೊರಿಂಥದವರಿಗೆ 1:21

ಹೇಗಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೆ; ಹೀಗಾದ ಮೇಲೆ ಹುಚ್ಚು ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋಚಿತು.

ದೇವರು, ತನ್ನ ಜ್ಞಾನದಲ್ಲಿ, ನೇಮಿಸಿರುವದೇನೆಂದರೆ ಮಾನವನ ಜೀವನದ ನಿತ್ಯವಾದ ಗಮ್ಯಸ್ಥಾನವು ಸುವಾರ್ತಾ ಸಂದೇಶದ ಸರಳವಾದ ಉಪದೇಶದ ಮೂಲಕ ನಿರ್ಧಾರವಾಗುತ್ತದೆ. ಇದರ ಬಗ್ಗೆ ಆಲೋಚನೆ ಮಾಡಿರಿ! ಎಲ್ಲಾ ಮಾನವರಿಗೂ *"ರಕ್ಷಣೆಯನ್ನುಂಟುಮಾಡುವ ದೇವರ ಬಲಸ್ವರೂಪವಾಗಿರುವ"* (ರೋಮಾಪುರದವರಿಗೆ 1:16) ಕ್ರಿಸ್ತನ ಶುಭವಾರ್ತೆಯನ್ನು ಸಾರಲು ದೇವರು ದೇವದೂತರ ಸೈನ್ಯವನ್ನು ಆರಿಸಿಕೊಳ್ಳಲಿಲ್ಲ. ಬದಲಾಗಿ, ಬಹುತೇಕ "ಹುಚ್ಚುಮಾತಿನ" ಅಭ್ಯಾಸದ ಮೂಲಕ, ನಾಶನದ ಮಾರ್ಗದಲ್ಲಿರುವವರನ್ನು ಗೆಲ್ಲಲು ಮರ್ತ್ಯರಾದ, ತಪ್ಪು ಮಾಡುವವರಾದ ಪಾತ್ರೆಗಳನ್ನು ಆರಿಸಿಕೊಂಡು ನೇಮಿಸಿದ್ದಾನೆ. ಆದ್ದರಿಂದ, ಸುವಾರ್ತೆಯನ್ನು ಸಾರುವುದು ಅಥವಾ ಸಂವಹನ ಮಾಡುವದು ಬಹಳ ಪ್ರಾಮುಖ್ಯವಾಗಿದೆ. ಅಪೊಸ್ತಲನಾದ ಪೌಲನು ವಿವರಿಸಿರುವದೇನೆಂದರೆ, ಕೆಲವರು ಅದರ ಸಂದೇಶ ಮತ್ತು ಉಪದೇಶದನ್ನು ಬುದ್ಧಿಹೀನತೆಯೆಂದು ಎಣಿಸುತ್ತಾರೆ, ಆದರೆ ಕರೆಯಲ್ಪಟ್ಟವರಿಗಾದರೋ ಅದರ ಸಂದೇಶ ಮತ್ತು ಬೋಧನೆಯು, ದೇವರ ಬಲ ಮತ್ತು ಜ್ಞಾನವಾಗಿರುವ ಕ್ರಿಸ್ತನನ್ನು ಪ್ರಕಟಪಡಿಸುತ್ತದೆ (1 ಕೊರಿಂಥದವರಿಗೆ 1:24). ಇದೇ ಪ್ರಕಾರ,

ಬರೆಯಲ್ಪಟ್ಟಿರುವ ಶಾಸ್ತ್ರವು ನಮ್ಮ ಜೀವಿತಗಳಲ್ಲಿ ದೇವರ ಬಲ ಮತ್ತು ಜ್ಞಾನವನ್ನು ತರುವಂಥ ಸಾಧನವಾಗಿರಬೇಕೆಂದು ದೇವರು ಅದನ್ನು ನೇಮಿಸಿದ್ದಾನೆ. ನಾವು "ಸತ್ಯವೇದ" ಎಂದು ಕರೆಯಲ್ಪಡುವ ಪುಸ್ತಕದ ಪುಟಗಳಲ್ಲಿ ಬರೆಯಲಾಗಿರುವ ಪದಗಳ ಮೂಲಕ, ದೈವೀಕವಾದ ಬಲ ಮತ್ತು ಅಧಿಕಾರವು ನಮ್ಮ ಜೀವಿತಗಳೊಳಗೆ ಹರಡಿಕೊಳ್ಳುವದು ಬಹುತೇಕ ರಹಸ್ಯವಾಗಿ ತೋರುತ್ತದೆ. ಸಾಧಾರಣವಾದ ಮಾತುಗಳು, ನಾವು ನಮ್ಮ ಅನುದಿನದ ಜೀವನದಲ್ಲಿ ಉಪಯೋಗಿಸುವ ಮಾತುಗಳು, ಸತ್ಯವೇದದಲ್ಲಿ ಮುದ್ರಣಗೊಂಡಿದೆ ಎಂಬ ಕಾರಣಕ್ಕಾಗಿಯೇ ಅವು ತಕ್ಷಣ ದೈವೀಕ ಮೌಲ್ಯವನ್ನು ಪಡೆದುಕೊಳ್ಳಲು ಹೇಗೆ ಸಾಧ್ಯ? ಪದಗಳಂತೂ ಸಾಧಾರಣವಾಗಿವೆ ಆದರೂ, ಅವು ಪ್ರಸ್ತುತಪಡಿಸುವ ಸತ್ಯಗಳು ದೈವೀಕವಾಗಿವೆ. ಪದಗಳನ್ನು ಮಾನವನು ಸೇರಿಸಿದ್ದಾನಾದರೂ, ಪ್ರಸ್ತುತಪಡಿಸಲಾಗಿರುವ ಸತ್ಯವನ್ನು ದೇವರು ಪ್ರೇರೇಪಿಸಿದ್ದಾನೆ. ನಮ್ಮ ತಿಳುವಳಿಕೆ ಮತ್ತು ಶಾಸ್ತ್ರದ ಪದಗಳ ಮೂಲಕ ವ್ಯಕ್ತಪಡಿಸಲಾಗಿರುವ ಸತ್ಯಗಳನ್ನು ನಾವು ಅಂಗೀಕರಿಸಿಕೊಳ್ಳುವ ಮೂಲಕ ನಾವು ದೇವರ ಜ್ಞಾನ ಹಾಗೂ ಶಕ್ತಿಯೊಳಗೆ ಪ್ರವೇಶಿಸುತ್ತೇವೆ ಮತ್ತು ಅವುಗಳನ್ನು ಅನುಭವಿಸುತ್ತೇವೆ.

ಪ್ರತಿಯೊಂದು ಶಾಸ್ತ್ರವು "ದೈವ ಪ್ರೇರಿತವಾಗಿದೆ"

2 ತಿಮೊಥೆಯನಿಗೆ 3:15,16

15ಆ ಗ್ರಂಥಗಳು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿವೆ.

16ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ, ಖಂಡನೆಗೂ, ತಿದ್ದುಪಾಟಿಗೂ, ನೀತಿಶಿಕ್ಷೆಗೂ ಉಪಯುಕ್ತವಾಗಿದೆ.

ಅಪೊಸ್ತಲನಾದ ಪೌಲನು "ಪರಿಶುದ್ಧ ಗ್ರಂಥಗಳು" ಎಂದು ಸೂಚಿಸಿರುವಾಗ, ಅವನು ಬರೆಯಲ್ಪಟ್ಟಿರುವ ಶಾಸ್ತ್ರಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ. *"ಪ್ರತಿಯೊಂದು ಶಾಸ್ತ್ರವು ದೈವಪ್ರೇರಿತವಾಗಿದೆ"* (2 ತಿಮೊಥೆಯನಿಗೆ 3:16) ಎಂದು ಹೇಳುವಾಗ ಬರೆಯಲ್ಪಟ್ಟಿರುವ ಶಾಸ್ತ್ರಗಳಿಗೆ ದೈವೀಕ ಕರ್ತೃತ್ವವೇ ಕಾರಣವೆಂದು ಸೂಚಿಸಿದ್ದಾನೆ. ಮಾನವರು ಪದಗಳನ್ನು ಬರೆದಿದ್ದಾರಾದರೂ, ಸಂದೇಶದ ಮೂಲ ಮತ್ತು ಪ್ರೇರಣೆ ದೇವರೇ ಆಗಿದ್ದಾನೆ. ಅಪೊಸ್ತಲನಾದ ಪೇತ್ರನು, *"ಶಾಸ್ತ್ರದಲ್ಲಿರುವ ಯಾವ ಪ್ರವಾದನವಾಕ್ಯವೂ ಕೇವಲ ಮಾನುಷಬುದ್ಧಿಯಿಂದ ವಿವರಿಸತಕ್ಕ ಗ್ರಂಥದಲ್ಲವೆಂಬದನ್ನು ಮುಖ್ಯವಾಗಿ*

ತಿಳಿದುಕೊಳ್ಳಿರಿ. ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2 ಪೇತ್ರನು 1:20,21) ಎಂದು ಹೇಳುವಾಗ ಇದನ್ನು ಭಿನ್ನವಾದ ರೀತಿಯಲ್ಲಿ ವಿವರಿಸಿದ್ದಾನೆ. ಪ್ರತಿಯೊಂದು ಶಾಸ್ತ್ರವು ಪ್ರವಾದನೆಯಾಗಿದ್ದು ದೇವರಾತ್ಮನ ಪ್ರೇರಣೆಯಿಂದ ಉಂಟಾಗಿದೆ. ಬರೆಯಲ್ಪಟ್ಟಿರುವ ವಾಕ್ಯವು ದೈವ ಪ್ರೇರಣೆಯುಳ್ಳದ್ದಾಗಿದೆ. ನಿಮ್ಮ ಅಸ್ತಿತ್ವದ ಅಗಾಧತೆಯಲ್ಲಿ ಈ ವಾಸ್ತವವನ್ನು ನಂಬುವದು ಶಾಸ್ತ್ರಗಳ ಕುರಿತಾಗಿರುವ ನಿಮ್ಮ ದೃಷ್ಟಿಕೋನವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ಪ್ರತಿಯೊಂದು ಶಾಸ್ತ್ರವು ದೈವಪ್ರೇರಿತವಾಗಿದೆ ಎಂದು ಒಂದುವೇಳೆ ನೀವು ನಿಜವಾಗಿಯೂ ನಂಬುವದಾದರೆ, ನೀವು ನಿಮ್ಮ ಜೀವಿತದಲ್ಲಿ ದೇವರ ವಾಕ್ಯಕ್ಕೆ ಉನ್ನತವಾದ ಆದ್ಯತೆಯನ್ನು ಕೊಡುವಿರಿ. ಈ ವಿಶ್ವದ ದೇವರು ತನ್ನ ಆಲೋಚನೆಗಳನ್ನು ನಿಮಗೆ ಸಂವಹನ ಮಾಡುತ್ತಿದ್ದಾನೆಂದು ತಿಳಿದೇ ನೀವು ನಿಮ್ಮ ಸತ್ಯವೇದವನ್ನು ತೆರೆಯುವಿರಿ. ಆತನ ಅಗಾಧವಾದ ಜ್ಞಾನದಿಂದ, ಭೂಮಿಯ ಮೇಲೆ ನಮಗೆ ಯಾವುದು ಅತ್ಯವಶ್ಯಕವಾಗಿದೆ ಮತ್ತು ಸಾಕಾಗಿದೆ ಎಂದು ಆತನು ಆಲೋಚಿಸಿದನೋ ಅದನ್ನು ಮನನ ಮಾಡುವ ಆಯ್ಕೆ ಮಾಡಿಕೊಂಡಿದ್ದಾನೆ ಮತ್ತು ಅವುಗಳನ್ನು ಪುಸ್ತಕದ ಪುಟಗಳಲ್ಲಿ ಇರಿಸಿದ್ದಾನೆ. ಶಾಸ್ತ್ರಗಳು ಉಪದೇಶ (ಸಿದ್ಧಾಂತ), ಖಂಡನೆ, ತಿದ್ದುಪಾಟು (ಬುದ್ಧಿವಾದ) ಮತ್ತು ನೀತಿಶಿಕ್ಷೆಯನ್ನು ಕೊಡುತ್ತದೆ.

ಶಾಸ್ತ್ರಗಳು-ದೇವರ ಕಡೆಗಿರುವ ನಮ್ಮ ಕಿಟಕಿ

ಕೀರ್ತನೆಗಳು 119:18

ನನ್ನ ಕಣ್ಣು ತೆರೆ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು.

ಶಾಸ್ತ್ರಗಳು ಜೀವಿಸುವ ದೇವರ ಒಳನೋಟವನ್ನು ನಿಮಗೆ ಕೊಡುತ್ತವೆ. ಅವುಗಳು ದೇವರ ಸ್ವಭಾವ, ಗುಣ, ಲಕ್ಷಣಗಳು ಮತ್ತು ಹೃದಯವನ್ನು ಪ್ರಕಟಿಸುತ್ತವೆ. ಪರಿಶುದ್ಧ ಗ್ರಂಥದ ಪುಟಗಳಲ್ಲಿ, ದೇವರು ಯಾರು, ಆತನು ಏನು ಮಾಡುತ್ತಾನೆ, ಆತನ ಭಾವನೆಗಳು ಮತ್ತು ಆತನ ಬಯಕೆಗಳ ಒಳನೋಟಗಳನ್ನು ನಾವು ನೋಡುತ್ತೇವೆ. ಪರಿಣಾಮವಾಗಿ, ಶಾಸ್ತ್ರಗಳ ಮೂಲಕ ನಾವು ದೇವರನ್ನು ತಿಳಿದುಕೊಳ್ಳುತ್ತೇವೆ ಮತ್ತು ಅಲ್ಲಿಂದ, ಆತನೊಂದಿಗೆ ವೈಯಕ್ತಿಕ ಸಂಬಂಧವನ್ನು ಕಟ್ಟಿಕೊಳ್ಳುತ್ತೇವೆ. ವೈಯಕ್ತಿಕ ತಿಳುವಳಿಕೆ ಇಲ್ಲದ ಕಡೆ, ಸಂಬಂಧವೂ ಇರುವದಿಲ್ಲ. ಇದಲ್ಲದೆ,

ಸಂಪಾದಿಸಿಕೊಂಡಿರುವ ತಿಳುವಳಿಕೆ ಅಥವಾ ನಿಕಟತೆಯ ಆಳವು ಸಂಬಂಧ ಎಷ್ಟು ಆಳವಾಗಿದೆ ಎಂಬದನ್ನು ನಿರ್ಧರಿಸುತ್ತದೆ. ಆದ್ದರಿಂದ, ಜೀವಿಸುವ ದೇವರೊಂದಿಗೆ ಆಳವಾದ ಮತ್ತು ನಿಕಟವಾದ ಸಂಬಂಧ ಹೊಂದಬೇಕಾದರೆ, ಶಾಸ್ತ್ರಗಳಲ್ಲಿ ಆತನನ್ನು ಪ್ರಕಟಪಡಿಸಲಾಗಿರುವ ಹಾಗೆಯೇ ಒಬ್ಬನು ಆತನನ್ನು ನಿಕಟವಾಗಿ ಅರಿತುಕೊಳ್ಳಬೇಕು. ಸತ್ಯವೇದದ ಪುಟಗಳನ್ನು ತೆರೆಯಲು ಬಹಳ ರೋಮಾಂಚಕವಾಗಿರುತ್ತದೆ ಯಾಕಂದರೆ ಅವು ದೇವರ ಸ್ವಭಾವಗಳನ್ನು ಅರಿಯಲು ನಮಗಿರುವ ಮಾರ್ಗಗಳಾಗಿವೆ. ನಾವು ಓದುವ ಸಾಲುಗಳ "ಹಿಂದಿರುವವುಗಳನ್ನು" ನೋಡಲು ನಮ್ಮ ಕಣ್ಣುಗಳು ತೆರೆಯಲ್ಪಡುವಾಗ, ನಮ್ಮ ದೇವರ ವೈಭವ ಮತ್ತು ಘನತೆಯ ತಿಳುವಳಿಕೆಯನ್ನು ನಾವು ಸಂಪಾದಿಸಿಕೊಳ್ಳುತ್ತೇವೆ. ದೇವರ ಕುರಿತಾದ ನಮ್ಮ ತಿಳುವಳಿಕೆಯು ಬೇರೆ ಯಾವುದರ ಮೇಲಾದರೂ-ನಮ್ಮ ಅನುಭವಗಳು, ಇತರರ ಅಭಿಪ್ರಾಯಗಳು ಮತ್ತು ಇನ್ನಿತರ ಕಾರ್ಯಗಳ ಮೇಲಿರುವದಾದರೆ-ಅವು ಯಾವಾಗಲೂ ನಿಖರವಾಗಿರುವದಿಲ್ಲ. ದೇವರು ತನ್ನನ್ನು ಇತರೆ ಸ್ಥಳಗಳಲ್ಲಿ ಪ್ರಕಟಿಸಿಕೊಳ್ಳುತ್ತಾನೆ ಎಂಬದು ಸತ್ಯವಾಗಿದೆ, ಉದಾಹರಣೆಗೆ, ತನ್ನ ಸೃಷ್ಟಿ. ಆದರೂ, ಇತರೆ ಸಂಪನ್ಮೂಲಗಳಿಂದ ಏನೇ ಮಾಹಿತಿ ನಮಗೆ ದೊರೆತರೂ ಅದನ್ನು ಮೊದಲು ಬರೆಯಲ್ಪಟ್ಟಿರುವ ಶಾಸ್ತ್ರಗಳ ಬೆಳಕಿನಲ್ಲಿ ಪರೀಕ್ಷಿಸಿಕೊಳ್ಳಬೇಕು.

ಶಾಸ್ತ್ರಗಳು-ನಮ್ಮ ಮಾನದಂಡ, ನಮ್ಮ ಮಾದರಿ

ಕೀರ್ತನೆಗಳು 119:133

ನಿನ್ನ ನುಡಿಗನುಸಾರ ನನ್ನ ಹೆಜ್ಜೆಯನ್ನು ದೃಢಪಡಿಸು; ಯಾವ ಅನ್ಯಾಯವಾದರೂ ನನ್ನನ್ನು ಆಳದಂತೆ ಮಾಡು.

ಯಾವುದು ಸರಿ ಮತ್ತು ತಪ್ಪು ಎಂಬ ವಿಷಯದಲ್ಲಿ ಜನರಿಗೆ ಸ್ಪಷ್ಟವಾದ ಮಾನದಂಡ ಇಲ್ಲದೆ ಇರುವ ಲೋಕದಲ್ಲಿ, ನಾವು ದೇವರ ವಾಕ್ಯವನ್ನು ನಮ್ಮ ಮಾನದಂಡವನ್ನಾಗಿ ಮಾಡಿಕೊಳ್ಳುವ ಆಯ್ಕೆಯನ್ನು ಮಾಡಿಕೊಂಡಿದ್ದೇವೆ. ಜೀವನದ ಎಲ್ಲಾ ವಿಷಯವಾಗಿ ಶಾಸ್ತ್ರಗಳು ಹೇಳುವಂಥದ್ದು ಸತ್ಯ ಎಂದು ನಾವು ನಂಬುತ್ತೇವೆ. ದೇವರ ವಾಕ್ಯ ಏನನ್ನು ಸತ್ಯ ಮತ್ತು ಶ್ರೇಷ್ಠ ಎಂದು ಹೇಳುತ್ತದೆಯೋ, ಅದನ್ನು ನಾವು ಸರಿ ಮತ್ತು ಶ್ರೇಷ್ಠ ಎಂದು ಆಲೋಚಿಸುತ್ತೇವೆ. ದೇವರ ವಾಕ್ಯ ಏನನ್ನು ತಪ್ಪು ಎಂದು ಹೇಳುತ್ತದೆಯೋ, ಅದೇ ಪ್ರಕಾರ ನಾವು ಅದನ್ನು ತಪ್ಪು ಎಂದು ಆಲೋಚಿಸುತ್ತೇವೆ. ಶಾಸ್ತ್ರಗಳು

ನೇಮಿಸಿರುವ ಮಾನದಂಡವನ್ನು ನಾವು "ತರ್ಕಬದ್ಧವಾಗಿಸುವದಿಲ್ಲ" (ವಿಮರ್ಶಿಸುವುದಿಲ್ಲ), "ಉದಾರಗೊಳಿಸುವದಿಲ್ಲ" (ವಿಶಾಲ ಮನಸ್ಸಿನಿಂದ ನೋಡಲು ಪ್ರಯತ್ನಿಸುವದಿಲ್ಲ) ಅಥವಾ "ಸಂದರ್ಭೋಚಿತವಾಗಿಸುವದಿಲ್ಲ" (ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಸ್ತುತಪಡಿಸುವದಿಲ್ಲ). ಶಾಸ್ತ್ರಗಳಲ್ಲಿ ತಿಳಿಸಲಾಗಿರುವದಕ್ಕಿಂತ ಕಡಿಮೆಯಿರುವ ಯಾವುದಕ್ಕೂ ನಾವು ತೃಪ್ತರಾಗಲು ನಿರ್ಧರಿಸುವುದಿಲ್ಲ.

ದೇವರ ವಾಕ್ಯವು ನಮಗೆ ಮಾರ್ಗದರ್ಶಕವಾಗಿದೆ. ಶಾಸ್ತ್ರಗಳಲ್ಲಿರುವ ಸೂಚನೆಗಳಿಗನುಸಾರನಾವುನಮ್ಮಜೀವಿತಗಳನ್ನು ಕ್ರಮಪಡಿಸಿಕೊಳ್ಳುತ್ತೇವೆ. ಶಾಸ್ತ್ರಗಳು ಗಂಡಂದಿರು, ಹೆಂಡತಿಯರು, ಮಕ್ಕಳು, ತಂದೆತಾಯಿಗಳು, ಕೆಲಸಗಾರರು, ಯಜಮಾನರು, ಸೇವಕರು ಮತ್ತು ಹುದುವಾಗಿ ಎಲ್ಲಾ ವಿಶ್ವಾಸಿಗಳು ನಡೆದುಕೊಳ್ಳಬೇಕಾದ ರೀತಿಗಳನ್ನು ತಿಳಿಸುತ್ತದೆ. ನಮ್ಮ ಸ್ವಭಾವ, ನಮ್ಮ ಜೀವನಶೈಲಿಗಳು, ನಮ್ಮ ಮೌಲ್ಯಗಳು, ನಮ್ಮ ನಂಬಿಕೆಗಳು ಮತ್ತು ನಮ್ಮ ಗುರಿಗಳು ಹಾಗೂ ಆಕಾಂಕ್ಷೆಗಳನ್ನು ಶಾಸ್ತ್ರಗಳಲ್ಲಿರುವ ತತ್ವಗಳಿಗನುಸಾರ ರೂಪಿಸಿಕೊಳ್ಳಲು ಪವಿತ್ರಾತ್ಮನ ಶಕ್ತಿಯೊಂದಿಗೆ ನಾವು ಬಹಳವಾಗಿ ಪ್ರಯತ್ನಿಸುತ್ತೇವೆ. ನಾವು ನಮ್ಮ ಇಡೀ ಜೀವಿತವನ್ನು ಆತನ ವಾಕ್ಯಾನುಸಾರ ನಡೆಸುತ್ತೇವೆ.

ಶಾಸ್ತ್ರಗಳು-ನಮ್ಮ ಅಧಿಕಾರ

ಕೀರ್ತನೆಗಳು 119:101

ನಿನ್ನ ವಾಕ್ಯವನ್ನೇ ಅನುಸರಿಸಬೇಕೆಂದು ನನ್ನ ಕಾಲುಗಳನ್ನು ಯಾವ ಕೆಟ್ಟ ದಾರಿಗೂ ಹೋಗದಂತೆ ಕಾದಿದ್ದೇನೆ.

ನಮ್ಮ ಜೀವಿತಗಳಲ್ಲಿ ಶಾಸ್ತ್ರಗಳೇ ಅಂತಿಮ ಅಧಿಕಾರವೆಂದು ನಾವು ಅವುಗಳಿಗೆ ನಮ್ಮನ್ನು ಒಪ್ಪಿಸುತ್ತೇವೆ. ಮಾನವ-ನಿರ್ಮಿತ ವ್ಯವಸ್ಥೆ ಅಥವಾ ಕಾನೂನು ನಮ್ಮನ್ನು ತಿದ್ದದಿದ್ದರೂ, ದೇವರ ವಾಕ್ಯದ ತಿದ್ದುಪಾಟಿಗೆ ನಾವು ನಮ್ಮನ್ನು ಒಪ್ಪಿಸಿಕೊಡುತ್ತೇವೆ. ನಮ್ಮ ತಪ್ಪುಗಳನ್ನು ಬೇರೆಯವರು ನಮಗೆ ತಿಳಿಸುವ ತನಕ ನಾವು ಕಾಯುವದಿಲ್ಲ, ಆದರೂ, ಕೆಲವೊಮ್ಮೆ ಅದು ಅವಶ್ಯವಾಗಿರುತ್ತದೆ. ವಾಕ್ಯವು ತಪ್ಪು ಎಂದು ಹೇಳುವ ಕಾರ್ಯಗಳನ್ನು ಒಂದುವೇಳೆ ನಾವು ಮಾಡುತ್ತಾ ಇದ್ದೇವೆ ಎಂದು ನಮಗೆ ಗೊತ್ತಾದರೆ, ವಾಕ್ಯಕ್ಕೆ ವಿಧೇಯರಾಗುವ ಸಲುವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಲು ನಾವು

ಬಯಸುತ್ತೇವೆ. ವಾಕ್ಯದೊಂದಿಗೆ ಸಾಮರಸ್ಯವುಳ್ಳವರಾಗಿ ನಡೆದುಕೊಳ್ಳಲು ನಮ್ಮ ಜೀವಿತಗಳಲ್ಲಿ ಕ್ರಮಶಿಕ್ಷಣವನ್ನು ಅಭ್ಯಾಸ ಮಾಡುವ ಆಯ್ಕೆಯನ್ನು ನಾವು ಮಾಡಿಕೊಳ್ಳುತ್ತೇವೆ. ದೇವರ ವಾಕ್ಯಕ್ಕೆ ಒಪ್ಪಿಸಿಕೊಡುವದೆಂದರೆ, ನಿಜವಾಗಿಯೂ, ದೇವರಿಗೇ ಒಪ್ಪಿಸಿಕೊಡುವದಾಗಿದೆ. ಶಾಸ್ತ್ರಗಳ ಸಲಹೆಗೆ ವಿರುದ್ಧವಾಗಿ ತಿರುಗಿಬೀಳುವದು ದೇವರಿಗೇ ವಿರುದ್ಧವಾಗಿ ತಿರಿಗು ಬೀಳುವದಾಗಿದೆ. ಕರ್ತನಾದ ಯೇಸು ಹೇಳಿರುವದೇನೆಂದರೆ, *"ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪುಮಾಡುವದು"* (ಯೋಹಾನ 12:48). ದೇವರ ವಾಕ್ಯವೇ ಶಾಸನವಾಗಿದ್ದು ಅದರ ಪ್ರಕಾರವೇ ಎಲ್ಲಾ ಮಾನವರಿಗೂ ತೀರ್ಪಾಗುತ್ತದೆ.

ಬರೆಯಲ್ಪಟ್ಟಿರುವ ದೇವರ ವಾಕ್ಯದ ವಿಷಯವಾಗಿ ದೇವಜನರು ದೇವಭಕ್ತಿಯುಳ್ಳ ಭಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ಸಮಯ ಬಂದಾಗಿದೆ. ನಮ್ಮ ಜೀವಿತಗಳಲ್ಲಿ ದೇವರ ವಾಕ್ಯದ ಅಧಿಕಾರಕ್ಕೆ ನಮ್ಮನ್ನು ಒಪ್ಪಿಸಿಕೊಡದೆ ನಾವು ಆತನ "ಹಿಂಬಾಲಕರಾಗಿರಲು" ಸಾಧ್ಯವಿಲ್ಲ. ಶಾಸ್ತ್ರಗಳಿಗೆ ವಿರುದ್ಧವಾಗಿರುವವುಗಳು ನಮ್ಮ ದೇಹಕ್ಕೆ ಆಹ್ಲಾದಕರ ಅಥವಾ ನಮ್ಮ ವಿವೇಚನೆಗೆ ಅಂಗೀಕೃತವಾಗಿರುವ ಕಾರಣಕ್ಕೆ ನಾವು ಅವುಗಳಲ್ಲಿಯೇ ಮುಂದುವರೆದರೆ "ದೃಢವಾದ ವಿಶ್ವಾಸಿಗಳಾಗಿರಲು" ನಮ್ಮಿಂದ ಆಗುವದಿಲ್ಲ. ವಿಶ್ವಾಸಿಗಳಾಗಿ, ನಮ್ಮ ಭಾವನೆಗಳು ಮತ್ತು ವಿವೇಚನೆಗಳನ್ನು ವಾಕ್ಯಕ್ಕೆ ಅಧೀನಪಡಿಸುವದನ್ನು ನಾವು ಕಲಿತುಕೊಳ್ಳಬೇಕು. ನಾವು ಎಲ್ಲಾ ರೀತಿಯ ದುಷ್ಟತನಗಳನ್ನು ತ್ಯಜಿಸಿ ನಮ್ಮನ್ನೇ ಆತನ ವಾಕ್ಯದೊಂದಿಗೆ ಹೊಂದಿಸಿಕೊಳ್ಳುತ್ತೇವೆ ಯಾಕಂದರೆ ಅದುವೇ ಅಂತಿಮವಾದ ಅಧಿಕಾರವಾಗಿದೆ.

ವಾಕ್ಯವು ನಿಮ್ಮೊಳಗೆ ಸಮೃದ್ಧವಾಗಿ ವಾಸಿಸಲಿ

ಕೊಲೊಸ್ಸೆಯವರಿಗೆ 3:16

ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಬುದ್ಧಿಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ.

ದೇವರ ವಾಕ್ಯವು ನಮ್ಮ ನಂಬಿಕೆಗೆ ಅಡಿಪಾಯವಾಗಿದೆ. ಆತ್ಮೀಕ ಬೆಳವಣಿಗೆ ಮತ್ತು ಪರಿಪಕ್ವತೆಗೆ ಇದು ಅತ್ಯವಶ್ಯಕವಾದ ಸಾಮಗ್ರಿಯಾಗಿದೆ. ನಾವು ಕ್ರಿಸ್ತನಲ್ಲಿ ನೆಲೆಯಾಗಿರಬೇಕು, ಮತ್ತು ಆತನ ವಾಕ್ಯಗಳು ನಮ್ಮಲ್ಲಿ ನೆಲೆಯಾಗಿರಬೇಕು (ಯೋಹಾನ 15:7). ನಾವು ನಿಮಗೆ ಪ್ರೋತ್ಸಾಹಪಡಿಸುವದು ಏನೆಂದರೆ ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ. ಶಾಸ್ತ್ರಗಳನ್ನು ಹುಡುಕುವುದರಲ್ಲಿ, ಅಧ್ಯಯನ ಮಾಡುವದರಲ್ಲಿ ಮತ್ತು ಧ್ಯಾನಿಸುವದರಲ್ಲಿ ಹೆಚ್ಚಿನ ಸಮಯವನ್ನು ಕಳೆಯಿರಿ. ಒಳನೋಟ ಮತ್ತು ಪ್ರಕಟನೆಗಾಗಿ ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ. ಪ್ರಕಟನೆಯ ಜ್ಞಾನದ ಸಮೃದ್ಧವಾದ ಹೂಡಿಕೆಯು ನಿಮ್ಮ ಹೃದಯಗಳಲ್ಲಿ ಶೇಖರಣೆಯಾಗಲಿ. ಆಗಾಗ ನೀವು ಕಲಿತುಕೊಳ್ಳುವವುಗಳನ್ನು ವಿಮರ್ಶೆಮಾಡಿಕೊಳ್ಳಿರಿ. ದೇವರಾತ್ಮನು ನಿಮ್ಮ ತಿಳುವಳಿಕೆಗೆ ತಂದಿರುವ ಆತ್ಮೀಕ ಸತ್ಯಗಳನ್ನು ಆಗಾಗ ಜ್ಞಾಪಕ ಮಾಡಿಕೊಳ್ಳಿರಿ. ಕರ್ತನಿಗೆ ವೈಯಕ್ತಿಕವಾಗಿ ಕೀರ್ತನೆಗಳನ್ನು, ಸಂಗೀತಗಳನ್ನು ಮತ್ತು ಹಾಡುಗಳನ್ನು ಹಾಡಲು ವಾಕ್ಯವನ್ನು ಉಪಯೋಗಿಸಿಕೊಳ್ಳಿರಿ. ಇತರೆ ವಿಶ್ವಾಸಿಗಳಿಗೆ ವಾಕ್ಯದಿಂದ ಕಲಿಸಿರಿ ಮತ್ತು ಪ್ರೋತ್ಸಾಹಪಡಿಸಿರಿ. ನಿಮಗೆ ತಿಳಿಸಲಾಗಿರುವ ಎಲ್ಲಾ ಪ್ರಕಟನೆಯ ಜ್ಞಾನವನ್ನು ಅಭ್ಯಾಸ ಮಾಡಿರಿ. ಆಗ ನೀವು, ದೃಢವಾದ ಅಡಿಪಾಯವನ್ನು ಸ್ಥಾಪಿಸುವವರಾಗಿದ್ದು ಅದರ ಮೇಲೆ ನಿಮ್ಮ ಕ್ರೈಸ್ತ ಅನುಭವವನ್ನು ನೀವು ಕಟ್ಟಿಕೊಳ್ಳಬಹುದು.

ಕರ್ತನು ಹೇಳುವ ಹಾಗೆ, ವಾಕ್ಯವನ್ನು ಕೇಳಿಸಿಕೊಳ್ಳುವ ಮತ್ತು ಅಭ್ಯಾಸ ಮಾಡುವ ವ್ಯಕ್ತಿಯು, ತನ್ನ ಮನೆಯನ್ನು ಬಂಡೆಯ ನೆಲದ ಮೇಲೆ ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು (ಮತ್ತಾಯ 7:24,25).

ನೀವು ನಿಮ್ಮ ಜೀವಿತವನ್ನು ಯಾವ ಅಡಿಪಾಯದ ಮೇಲೆ ಕಟ್ಟುತ್ತಾ ಇದ್ದೀರಿ?

2
ದೇವರ ವಾಕ್ಯ: ಅದರ ಶುದ್ಧತೆ ಮತ್ತು ಶಕ್ತಿ

ಭಾರತದ, ಮಣಿಪಾಲ್ ನಲ್ಲಿದ್ದ ನಮ್ಮ ಕಾಲೇಜಿನ ನಾಲ್ಕು ಉತ್ತೇಜಕ ವರ್ಷಗಳ ಕಡೇ ದಿನಗಳಲ್ಲಿ; ಹಲವು ಅದ್ಭುತವಾದ ಕಾರ್ಯಗಳು ಸಂಭವಿಸಿದವು. ಅವುಗಳಲ್ಲಿ ಅತ್ಯಂತ ಪ್ರಾಮುಖ್ಯವಾದದ್ದು ದೇವರು ನಮ್ಮಂಥ ಕೆಲವು ಯೌವಾನಸ್ಥರನ್ನು-ಸಾಧಾರಣ ಕಾಲೇಜ್ ವಿದ್ಯಾರ್ಥಿಗಳನ್ನು-ಒಟ್ಟಾಗಿ ಕಾರ್ಯಮಾಡಲು ಮತ್ತು ವಿದ್ಯಾರ್ಥಿ ಸಮುದಾಯದ ನಡುವೆ ಕ್ರಮೇಣವಾಗಿ ಬಲವಾದ ಕ್ರೈಸ್ತೀಯ ಅನ್ಯೋನ್ಯತೆಯಾಗಿ ಬೆಳೆಯುವಂಥದ್ದಕ್ಕೆ ಅಡಿಪಾಯ ಹಾಕಲು ಬಲಪಡಿಸಿದನು. ಅದು ಶೈಕ್ಷಣಿಕ ವರ್ಷ ಮುಗಿದ ಸಮಯವಾಗಿತ್ತು ಮತ್ತು ನನ್ನ ಬಹುತೇಕ ಸ್ನೇಹಿತರು ತಮ್ಮ ಮನೆಗಳಿಗೆ ಹೋಗಿದ್ದರು. ಸಹಜವಾಗಿ ಆ ಸಮಯದಲ್ಲಿ ವಸತಿನಿಲಯದಲ್ಲಿ ಯಾವುದೇ ಗದ್ದಲ ಇರುವದಿಲ್ಲ ಎಂಬದು ಗೊತ್ತಿದ್ದ ಕಾರಣ, ಕರ್ತನೊಂದಿಗೆ ಒಂಟಿಯಾಗಿ ಸಮಯ ಕಳೆಯಲು ಕೆಲವು ದಿನಗಳು ಅಲ್ಲಿಯೇ ಉಳಿದುಕೊಳ್ಳಲು ನಾನು ತೀರ್ಮಾನಿಸಿದೆನು. ನಾನು ನಿರ್ದಿಷ್ಟವಾಗಿ ನನ್ನ ಭವಿಷ್ಯದ ಬಗ್ಗೆ ಮತ್ತು ಬಹಳಷ್ಟು ವಿಷಯಗಳು ಗೊತ್ತಿಲ್ಲದಿದ್ದರೂ ಮುಂದೇನಾಗಬಹುದು ಎಂಬದನ್ನು ತಿಳಿದುಕೊಳ್ಳಲು ಪ್ರಾರ್ಥನೆ ಮಾಡಬೇಕೆಂದಿದ್ದೆನು. ಪ್ರಾರ್ಥನೆಯ ಆ ಸಮಯದಲ್ಲಿ ಯೆಶಾಯ 45:1-3 ನನ್ನ ಆತ್ಮದೊಳಗೆ ಆಳವಾಗಿ ಬೇರೂರಿತು. ನನಗೆ, ಅವುಗಳು ಮೂಲೆಕಲ್ಲಿನ ವಾಕ್ಯಗಳಾದವು-ನನ್ನ ಹೃದಯದಲ್ಲಿ ವಿಶೇಷ ಸ್ಥಾನವನ್ನು ಪಡೆದ ವಾಕ್ಯಗಳಾದವು. ನಾನು ಅವುಗಳ ಅರ್ಥವನ್ನು ಮತ್ತು ಅವು ನನ್ನ ಜೀವಿತಕ್ಕೆ ಅನ್ವಯವಾಗುವ ರೀತಿಯನ್ನು ನಾನು ತಿಳಿದುಕೊಂಡೆನು.

ಈ ವಾಗ್ದಾನದ ಭಾಗವಾಗಿ, ಕರ್ತನು ಹೇಳಿದ್ದೇನೆಂದರೆ ಆತನು ನಮಗೆ ಮುಂದಾಗಿ ಹೋಗುವನು ಮತ್ತು ನಮಗೆ ಬಾಗಿಲುಗಳನ್ನು ತೆರೆಯುವನು, ಹಾಗೂ ಆ ಬಾಗಿಲುಗಳು ಮುಚ್ಚಲ್ಪಡುವದಿಲ್ಲ. ಆಗಿನಿಂದ, ನಾನು ಬಹಳಷ್ಟು ಸಲ ಅಸಾಧ್ಯತೆಗಳು ಮತ್ತು ಮುಚ್ಚಲ್ಪಟ್ಟಿರುವ ಬಾಗಿಲುಗಳಿಗೆ ಮುಖಾಮುಖಿಯಾಗಿ ನಿಂತಿದ್ದೇನೆ. ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಮತ್ತು ಆರ್ಥಿಕ ಸಹಾಯ ಪಡೆಯುವದರಲ್ಲಾಗಿರಬಹುದು ಅಥವಾ ಹೊರ ದೇಶಗಳಿಗೆ ಪ್ರಯಾಣಿಸಲು

ವೀಸಾ ಪಡೆಯುವದರಲ್ಲಾಗಿರಬಹುದು ಅಥವಾ ವೈಯಕ್ತಿಕವಾಗಿ ಆರ್ಥಿಕವಾದ ವಿಷಮ ಸ್ಥಿತಿಯಿಂದ ಚೇತರಿಸಿಕೊಳ್ಳುವದಾಗಿರಬಹುದು, ಮತ್ತು ಇನ್ನೂ ಅನೇಕ ಇತರೆ ಪರಿಸ್ಥಿತಿಗಳಲ್ಲಿ, ನಾನು ಈ ವಾಕ್ಯಗಳನ್ನು ಜ್ಞಾಪಕಕ್ಕೆ ತಂದುಕೊಂಡಿದ್ದೇನೆ ಹಾಗೂ ದೇವರು ವಾಗ್ದಾನ ಮಾಡಿರುವದನ್ನು ಖಂಡಿತವಾಗಿಯೂ ನೆರವೇರಿಸುವನು ಎಂಬದಾಗಿ ಆತನ ಮುಂದೆ ಒಪ್ಪಿಕೊಂಡಿದ್ದೇನೆ. ನಾನು ಶಾಸ್ತ್ರದ ಈ ವಚನಗಳನ್ನು ತೆಗೆದುಕೊಂಡಿದ್ದೇನೆ ಮತ್ತು, ಕ್ರಿಸ್ತನಲ್ಲಿ ನಮಗೆ ಕೊಡಲಾಗಿರುವ ಅಧಿಕಾರದಿಂದ, ಅವುಗಳನ್ನು ಪರಿಸ್ಥಿತಿಗಳು ಹಾಗೂ ಸಂದರ್ಭಗಳಿಗೆ ಅಳವಡಿಸಿ ಅವುಗಳು ಬದಲಾಗುವದನ್ನು ನೋಡಿದ್ದೇನೆ. ವಿಚಾರಶಕ್ತಿಯುಳ್ಳ ಮನಸ್ಸಿಗೆ ವಿಚಾರಹೀನವಾಗಿ, ಒಂದುವೇಳೆ, ಮೂರ್ಖತನವಾಗಿಯೂ ಅನ್ನಿಸುವ ಮಟ್ಟಕ್ಕೆ ಆ ವಚನಗಳ ಶುದ್ಧತೆ ಮತ್ತು ಅಧಿಕಾರದ ಮೇಲೆ ನಾನು ಆತುಕೊಂಡಿದ್ದೇನೆ. ಮತ್ತು ನಾನು ಸಂತೋಷವಾಗಿ ಸಾಕ್ಷಿ ಹೇಳುವದೇನೆಂದರೆ ದೇವರ ವಾಕ್ಯವು ಎಂದಿಗೂ ವಿಫಲವಾಗಿಲ್ಲ! ಇದೇ ಪ್ರಕಾರ, ಲೋಕದಾದ್ಯಂತವಿರುವ ಅನೇಕರು ತಮಗೆದುರಾದ ಸವಾಲುಗಳ ಸಮಯದಲ್ಲಿ ಅವರು ಯಾವ ರೀತಿ ದೋಷಾತೀತವಾದ ದೇವರ ವಾಕ್ಯದಲ್ಲಿ ಮಾತ್ರವೇ ಭರವಸೆಯನ್ನಿಟ್ಟರು ಮತ್ತು ದೇವರು ಹೇಗೆ, ತನ್ನ ವಾಕ್ಯದ ಶಕ್ತಿಯ ಮೂಲಕ, ಅವರನ್ನು ಜಯಶಾಲಿಗಳನ್ನಾಗಿ ಮಾಡಿದನು ಎಂಬದಾಗಿ ಸಾಕ್ಷಿಗಳ ಮೇಲೆ ಸಾಕ್ಷಿಗಳನ್ನು ಹೇಳುತ್ತಾರೆ!

ನಾವು ಬರಬಹುದಾದ ಒಂದು ಸ್ಥಳವಿದೆ-ಅದು ನಾವು ಅಮೂಲ್ಯವಾಗಿರುವ ದೇವರ ವಾಕ್ಯವನ್ನು ಪ್ರೀತಿಸುವ ಮತ್ತು ಗೌರವಿಸುವ ಸ್ಥಳವಾಗಿದೆ; ಅದು ನಮ್ಮ ಹೃದಯಗಳು ದೇವರ ವಾಕ್ಯದ ಯಥಾರ್ಥತೆ ಮತ್ತು ಶಕ್ತಿಯ ವಿಷಯವಾಗಿ ಪ್ರಶ್ನಾತೀತವಾದ ಭರವಸೆಯಲ್ಲಿ ನೆಲೆಗೊಳ್ಳುವ ಸ್ಥಳವಾಗಿದೆ; ಅದು ನಾವು ಉಳಿದೆಲ್ಲವುಗಳಿಗಿಂತ ಆತನ ವಾಕ್ಯವನ್ನು ಗೌರವಿಸುವ ಸ್ಥಳವಾಗಿದೆ; ಅದು ವಾಕ್ಯವು ನಮ್ಮ ಸ್ವಭಾವವನ್ನು ರೂಪಾಂತರಪಡಿಸುವ, ನಮ್ಮ ಆಲೋಚನೆಯ ಮೇಲೆ ಪ್ರಭಾವ ಬೀರುವ ಮತ್ತು ನಮ್ಮ ಕ್ರಿಯೆಗಳನ್ನು ಮುನ್ನಡೆಸುವ ಸ್ಥಳವಾಗಿದೆ; ಅದು ವಾಕ್ಯದ ಮೂಲಕ ಬರುವ ಆತ್ಮೀಕ ತಿಳುವಳಿಕೆಗಾಗಿ ನಮ್ಮ ಹೃದಯಗಳು ಹಂಬಲಿಸುವ ಮತ್ತು ಹಾತೊರೆಯುವ ಸ್ಥಳವಾಗಿದೆ; ಅದು ಶಾಸ್ತ್ರಗಳಲ್ಲಿ ಪ್ರಕಟಿಸಲಾಗಿರುವ ಪ್ರಕಾರ ಆತನ ವೈಭವವನ್ನು ನೋಡಲು ನಾವು ತವಕಿಸುವಂಥ ಸ್ಥಳವಾಗಿದೆ; ಅದು ದೇವರ ವಾಕ್ಯದಲ್ಲಿ ಶುದ್ಧವಾಗಿ ಸಂತೋಷಪಡುವ ಸ್ಥಳವಾಗಿದೆ.

ನಮ್ಮ ಪ್ರಾರ್ಥನೆ ಏನೆಂದರೆ ನಾವು ಪ್ರತಿಯೊಬ್ಬರೂ ಆ ಸ್ಥಳದಲ್ಲಿ ಯಾವಾಗಲೂ ಕಾಣಿಸಿಕೊಳ್ಳುವ ಸಂತೋಷವನ್ನು ಅನುಭವಿಸಬೇಕು ಎಂಬದೇ ಆಗಿದೆ.

ದೇವರ ಸಾರ್ವಭೌಮ ಹಸ್ತ

ರೋಮಾಪುರದವರಿಗೆ 11:33

ಆಹಾ, ದೇವರ ಐಶ್ವರ್ಯವೂ, ಜ್ಞಾನವೂ, ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!

ದೇವರ ಮಾರ್ಗಗಳನ್ನು *"ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ"* ಅಥವಾ ಮಾನವನ ತಿಳುವಳಿಕೆಗೆ ಅವು ಮೀರಿದ್ದಾಗಿವೆ. ದೇವರ ಸಾರ್ವಭೌಮ ಹಸ್ತವು ಮಾನವನ ಚರಿತ್ರೆಯಾದ್ಯಂತ ಪ್ರಾಮುಖ್ಯವಲ್ಲದ್ದಾಗಿ ಮತ್ತು ಅಸ್ಪಷ್ಟವಾಗಿ ತೋರುವಂಥ ವಿಷಯಗಳಲ್ಲಿ ಸತತವಾಗಿ ತನ್ನ ಕಾರ್ಯಗಳನ್ನು ಮುಂದುವರೆಸುತ್ತಾ ಬಂದಿದೆ. ಸಾಮಾನ್ಯವಾಗಿ, ದೇವರ ಕಾರ್ಯವು ಅತ್ಯಂತ ಪ್ರಾಪಂಚಿಕವಾಗಿ, ಅತ್ಯಂತ ಸಾಧರಣವಾಗಿ ತೋರುತ್ತದೆ ಆದರೂ, ಅವುಗಳು ದೇವರ ಭವ್ಯವಾದ ಅದ್ಭುತಗಳಿಗಿಂತ ಕಡಿಮೆಯಾದ ಆತನ ಕೈಗೆಲಸಗಳಲ್ಲ. ಮೋಶೆ ತನ್ನ ಕೋಲಿನಿಂದ ಬಂಡೆಗೆ ಹೊಡೆದಾಗ ಅದರೊಳಗಿಂದ ಕೂಡಲೇ ನೀರು ಹೊರಡುವಂತೆ ಮಾಡಿದ ದೇವರೇ ಅರಣ್ಯದಲ್ಲಿ ದೇವದರ್ಶನ ಗುಡಾರವನ್ನು ನಿರ್ಮಿಸಲು ಹಗಲಿರುಳು ಕಷ್ಟಪಟ್ಟ ಬೆಚಲೇಲನ ಮತ್ತು ಅವನ ಜೊತೆಕೆಲಸದವರ ಸಂಗಡ ಕೆಲಸ ಮಾಡಿದನು (ವಿಮೋಚನಕಾಂಡ 31:1-11). ಬೆಚಲೇಲನ ಮತ್ತು ನಯವಾದ ಕೆಲಸಗಳನ್ನು ಮಾಡುವ ಅವನ ಜೊತೆಕೆಲಸದವರ ಕಷ್ಟಕರವಾದ-ಪ್ರಯಾಸಕರ ಕಾರ್ಯವು ದೇವರು ತಾನೇ ಮಾಡುವದಾಗಿತ್ತು ಎಂಬದನ್ನು ಒಪ್ಪಿಕೊಳ್ಳಲು ಮಾನವ ಮನಸ್ಸಿಗೆ ಕಷ್ಟಕರವಾಗಬಹುದು. ಆದರೂ, ದೇವರಾತ್ಮನು ಆ ಕುಶಲಕರ್ಮಿಗಳಿಗೆ ಗುಡಾರವನ್ನು ಮಾಡಲು ಚಿನ್ನ, ಬೆಳ್ಳಿ, ತಾಮ್ರಗಳಿಂದ ಕೆಲಸ ನಡಿಸುವದಕ್ಕೆ ಜ್ಞಾನ, ವಿದ್ಯಾ, ವಿವೇಕಗಳನ್ನು, ಸಕಲಶಿಲ್ಪ ಶಾಸ್ತ್ರಜ್ಞಾನವನ್ನು ಅನುಗ್ರಹಿಸಿದನು.

ಸರಳವಾಗಿರುವ ಈ ನಿದರ್ಶನದ ವಿಸ್ತರಣೆಯಿಂದ, ದೇವರು ತನ್ನ ದೈವೀಕ ಉದ್ದೇಶಗಳನ್ನು ಸಾಧಾರಣ ಜನರ ಜೀವಿತಗಳ ಮೂಲಕ ಕಾರ್ಯಮಾಡುತ್ತಾ ಇದ್ದಾನೆ ಎಂಬದನ್ನು ನಾವು ಧೈರ್ಯವಾಗಿ ಹೇಳಬಹುದು.

ಕ್ರೈಸ್ತೀಯ ಸತ್ಯವೇದದ 66 ಪುಸ್ತಕಗಳ ಸಂಕಲನದ ಕಾರ್ಯದಲ್ಲಿಯೂ ಹೀಗೆಯೇ ಅಗಿದೆ. ಶಾಸ್ತ್ರಗಳ ಜೋಡಣೆ ಮತ್ತು ಪವಿತ್ರ ಗ್ರಂಥದ ರಚನೆಯ ಪ್ರಕ್ರಿಯೆಯಲ್ಲಿ ದೇವರ ಸಾರ್ವಭೌಮ ಹಸ್ತವು ಕಾರ್ಯಗತವಾಗಿತ್ತು. ಮಾನವ ಬುದ್ಧಿ ಇಂಥ ಹೇಳಿಕೆಯ ಅಂಗೀಕಾರಾರ್ಹತೆಯನ್ನು ಪ್ರಶ್ನಿಸಬಹುದು. ದೇವರು ತನ್ನ ಕೆಲಸವನ್ನು ಮೌನವಾಗಿ ನಡೆಸುತ್ತಾನೆ ಎಂಬದನ್ನು ಅರ್ಥಮಾಡಿಕೊಂಡಿರುವವರಿಗೆ, ಮಾನವನು ತನ್ನ ಅನುದಿನದ ಕಾರ್ಯಗಳಲ್ಲಿ ನಿರತನಾದರೂ, ಇದು ಬಗೆಹರಿದಿರುವ ವಿಷಯವಾಗಿದೆ!

ಆತನ ನಾಮಕ್ಕಿಂತಲೂ ಮೇಲಾದದ್ದು

ಕೀರ್ತನೆಗಳು 138:2

ನಿನ್ನ ಪರಿಶುದ್ಧಾಲಯದ ಕಡೆಗೆ ಅಡ್ಡ ಬೀಳುತ್ತೇನೆ; ನಿನ್ನ ಕೃಪೆ, ಸತ್ಯತೆ ಇವುಗಳಿಗೋಸ್ಕರ ನಿನ್ನ ನಾಮವನ್ನು ಕೊಂಡಾಡುತ್ತೇನೆ. ವಾಗ್ದಾನವನ್ನು ವಿಶೇಷರೀತಿಯಿಂದ ನೆರವೇರಿಸಿ ನಿನ್ನ ನಾಮಮಹತ್ತನ್ನು ಹೆಚ್ಚಿಸಿದ್ದೀ.

ದೇವರು ತನ್ನ ವಾಕ್ಯಕ್ಕೆ ತನ್ನ ಹೆಸರಿಗಿಂತಲೂ ದೊಡ್ಡ ಪ್ರಾಧಾನ್ಯತೆಯ ಸ್ಥಾನವನ್ನು ಕೊಟ್ಟಿದ್ದಾನೆ. ಆತನು ತನ್ನ ವಾಕ್ಯವನ್ನು ತನ್ನ ನಾಮಕ್ಕಿಂತ ಮೇಲೆ ಹೆಚ್ಚಿಸಿದ್ದಾನೆ. ದೇವರಿಗೆ, ಆತನು ಹೇಳಿರುವ ಆತನ ವಾಕ್ಯ, ಆತನ ನಾಮಮಹತ್ತಿಗಿಂತ ಹೆಚ್ಚು ಪ್ರಾಮುಖ್ಯವಾದದ್ದಾಗಿದೆ. ಯಾಕಂದರೆ ಆತನ ನಾಮ-ಆತನ ಮಹತ್ತು-ಆತನ ವಾಕ್ಯದಷ್ಟೇ ಉತ್ತಮವಾಗಿದೆ! ಇದರ ತಿಳುವಳಿಕೆಯನ್ನು ನಾವು ಪಡೆದುಕೊಳ್ಳಬೇಕು. ಆತನ ಮಹತ್ತು ಆತನ ವಾಕ್ಯದ ಮೇಲೆ ಆಧಾರವಾಗಿದೆ. ಆತನ ನಾಮವು ಅದರ ಮಹಿಮೆ ಮತ್ತು ಪ್ರಭಾವವನ್ನು ಆತನ ವಾಕ್ಯದಿಂದ ಪಡೆಯುತ್ತದೆ.

ಎರಡು ಪ್ರಾಮುಖ್ಯವಾದ ಪರಿಣಾಮಗಳಿವೆ.

1) ದೇವರ ಕಡೆಯಿಂದ

ಆತನು ತನ್ನ ವಾಕ್ಯವನ್ನು ತನ್ನ ನಾಮಕ್ಕಿಂತ ಮೇಲೆ ಹೆಚ್ಚಿಸಿರುವದರಿಂದ, ತಾನೇನಾಗಿದ್ದಾನೋ ಅವುಗಳ ಮೂಲಕ ತನ್ನ ವಾಕ್ಯವನ್ನು ಎತ್ತಿಹಿಡಿಯುತ್ತಾನೆ. ದೇವರ ವಾಕ್ಯವು ದೇವರ ಸರ್ಶಶಕ್ತಿ, ಸರ್ವವ್ಯಾಪ್ತಿ ಮತ್ತು ಸರ್ವಜ್ಞಾನದಿಂದ ಬೆಂಬಲಿಸಲ್ಪಡುತ್ತದೆ. ಆತನು ಹೇಳಿರುವದೇನೆಂದರೆ, *"ನನ್ನ ಮಾತನ್ನು ನೆರವೇರಿಸುವದಕ್ಕೆ ಎಚ್ಚರಗೊಂಡಿದ್ದೇನೆ"* (ಯೆರೆಮೀಯ 1:12).

2) ನಮ್ಮ ಕಡೆಯಿಂದ

ನಾವು ಕರ್ತನ ನಾಮವನ್ನು ಮಾತ್ರವಲ್ಲ ಬದಲಾಗಿ ಆತನ ವಾಕ್ಯವನ್ನು ತಿಳಿದುಕೊಳ್ಳುವ ಪ್ರಾಮುಖ್ಯತೆಯನ್ನು ಅರಿತುಕೊಳ್ಳಬೇಕು. ನಾವು ಆತನ ನಾಮವನ್ನು ಹೇಳಿಕೊಂಡು ರಕ್ಷಣೆ ಹೊಂದಿದ್ದೇವೆ (ರೋಮಾಪುರದವರಿಗೆ 10:13). ಈಗ, ನಾವು ಆತನ ವಾಕ್ಯ ತಿಳಿದುಕೊಳ್ಳುವದನ್ನು ಮುಂದುವರೆಸಬೇಕು ಯಾಕಂದರೆ ದೇವರು ತಾನೇ ತನ್ನ ವಾಕ್ಯಕ್ಕೆ ತನ್ನ ನಾಮಮಹತ್ತಿಗಿಂತಲೂ ಉನ್ನತವಾದ ಸ್ಥಾನವನ್ನು ಕೊಟ್ಟಿದ್ದಾನೆ.

ದೇವರ ವಾಕ್ಯವು ಆತನ ಸ್ವಭಾವದಷ್ಟೇ ಬಲಿಷ್ಠವಾಗಿದೆ

ಇಬ್ರಿಯರಿಗೆ 6:11-18

11 ನೀವು ಉಪಚಾರ ಮಾಡುವದರಲ್ಲಿ ಯಾವ ಆಸಕ್ತಿಯನ್ನು ತೋರಿಸಿದ್ದೀರೋ ನಿಮ್ಮ ನಿರೀಕ್ಷೆಯನ್ನು ದೃಢಮಾಡಿಕೊಂಡು ಕಡೇ ತನಕ ಹಿಡಿಯುವದರಲ್ಲಿಯೂ ನಿಮ್ಮಲ್ಲಿ ಪ್ರತಿಯೊಬ್ಬರು ಅದೇ ಆಸಕ್ತಿಯನ್ನು ತೋರಿಸಬೇಕೆಂದು ಅಪೇಕ್ಷಿಸುತ್ತೇವೆ.

12 ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ.

13 ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದಾಗ ತನಗಿಂತ ಹೆಚ್ಚಿನವನ ಆಣೆಯಿಡುವದಕ್ಕಾಗದೆ ಇದ್ದದರಿಂದ ತನ್ನಾಣೆಯಿಟ್ಟು –

14 ನಿಜವಾಗಿ ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು, ನಿನ್ನನ್ನು ಹೆಚ್ಚಿಸೇ ಹೆಚ್ಚಿಸುವೆನು ಎಂದು ಹೇಳಿದನಷ್ಟೆ.

15 ಆ ವಾಗ್ದಾನದ ಫಲಕ್ಕೋಸ್ಕರ ಅಬ್ರಹಾಮನು ಬಹು ದಿವಸ ಕಾದುಕೊಂಡಿದ್ದು ಆ ಫಲವನ್ನು ದೇವರು ಹೇಳಿದ ಹಾಗೆಯೇ ಹೊಂದಿದನು.

16 ಮನುಷ್ಯರು ತಮಗಿಂತ ಹೆಚ್ಚಿನವನ ಆಣೆಯಿಡುತ್ತಾರಷ್ಟೆ; ಮಾತಿಗೆ ಆಣೆಯಿಟ್ಟು ಸ್ಥಿರಪಡಿಸಿದ ಮೇಲೆ ಅವರೊಳಗೆ ವಿವಾದವೇನೂ ಇರುವದಿಲ್ಲ.

17 ಹಾಗೆಯೇ ದೇವರು ತನ್ನ ಸಂಕಲ್ಪವು ನಿಶ್ಚಲವಾದದ್ದೆಂಬದನ್ನು ವಾಗ್ದಾನದ ಫಲಕ್ಕೆ ಬಾಧ್ಯರಾಗುವವರಿಗೆ ಬಹು ಸ್ಪಷ್ಟವಾಗಿ ತೋರಿಸಬೇಕೆಂದು ಆಣೆಯಿಟ್ಟು ತನ್ನ ಮಾತನ್ನು ಸ್ಥಿರಪಡಿಸಿದನು.

18 ಆಶ್ರಯವನ್ನು ಹೊಂದಬೇಕೆಂದು ಓಡಿಬಂದು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡಿದುಕೊಂಡವರಾದ ನಮಗೆ ಎರಡು ನಿಶ್ಚಲವಾದ ಆಧಾರಗಳು ಇರುವ ಕಾರಣ ಬಲವಾದ ಧೈರ್ಯವುಂಟಾಯಿತು.

ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದಾಗ, ತನ್ನಾಣೆಯಿಟ್ಟು ತನ್ನ ವಾಗ್ದಾನವನ್ನು ಸ್ಥಿರಪಡಿಸಿದನು. ಆತನು ಹೇಳಿದ್ದೇನೆಂದರೆ, *"ನಾನು ನಿನ್ನನ್ನು ಆಶೀರ್ವದಿಸುವೆನು"* ಮತ್ತು *"ನಿನ್ನನ್ನು ಹೆಚ್ಚಿಸೇ ಹೆಚ್ಚಿಸುವೆನು"* (ಇಬ್ರಿಯರಿಗೆ

6:14). ದೇವರು ಅಬ್ರಹಾಮನಿಗೆ *"ಎರಡು ನಿಶ್ಚಲವಾದ ಆಧಾರಗಳನ್ನು"* ಕೊಟ್ಟನು (ಇಬ್ರಿಯರಿಗೆ 6:18) ಆತನ ವಾಗ್ದಾನ (ವಾಕ್ಯ) ಮತ್ತು ಆತನ ಪ್ರಮಾಣ. *"ನಾನು ..."* ಎಂದು ದೇವರು ಹೇಳುವಾಗಲೆಲ್ಲಾ ಆತನು ನಮಗೆ ಬದಲಾಗದ ಎರಡು ಕಾರ್ಯಗಳನ್ನು ಕೊಡುತ್ತಾ ಇದ್ದಾನೆ-ಆತನ ವಾಗ್ದಾನ (ಆತನ ವಾಕ್ಯ/ಮಾತು) ಮತ್ತು ಆತನ ಪ್ರಮಾಣ (ಪ್ರತಿಜ್ಞೆ, ಶಪಥ) ಇವು ಆತನ ವಾಗ್ದಾನವನ್ನು ಸ್ಥಿರಪಡಿಸುತ್ತವೆ. ದೇವರ ಪ್ರತಿಯೊಂದು ವಾಕ್ಯ (ವಾಗ್ದಾನ) ಆಣೆಯಿಟ್ಟ ಹೇಳಿಕೆಯಾಗಿದೆ ಮತ್ತು ಗೌರವದ ಮಾತಾಗಿದೆ ಯಾಕಂದರೆ ಅದು ಪ್ರಮಾಣ ಮತ್ತು ಪ್ರತಿಜ್ಞೆ ಎರಡೂ ಆಗಿದೆ. *"ಆತನು ತನ್ನಾಣೆಯಿಟ್ಟನು"* (ಇಬ್ರಿಯರಿಗೆ 6:13). ದೃಢೀಕರಣದ ದೇವರ ಪ್ರಮಾಣವು ಆತನ ಮೇಲೆಯೇ ಆಧಾರವಾಗಿದೆ. ಆತನ ಸ್ವಯಂ ಅಸ್ತಿತ್ವಕ್ಕಿಂತ ನಿರ್ವಿಕಾರವಾದದ್ದು ಬೇರೆ ಯಾವುದೂ ಇಲ್ಲ ಯಾಕಂದರೆ ಆತನು ಬದಲಾಗದ ಸ್ವಭಾವವುಳ್ಳ ದೇವರಾಗಿದ್ದಾನೆ. ಆತನು ಹೇಳಿರುವದೇನೆಂದರೆ, *"ಆದರೂ ಯೆಹೋವನಾದ ನಾನು ಮಾರ್ಪಟ್ಟಿಲ್ಲ"* (ಮಲಾಕಿಯ 3:6). ಆದ್ದರಿಂದ, ದೇವರ ಪ್ರತಿಯೊಂದು ವಾಕ್ಯವು ದೇವರ ಬದಲಾಗದ ಸ್ವಭಾವದಿಂದ ಸ್ಥಿರಗೊಂಡಿದೆ. ಮತ್ತು ದೇವರ ಸ್ವಭಾವದ ಒಂದು ಪ್ರಾಮುಖ್ಯವಾದ ಸಂಗತಿ ಎಂದರೆ ದೇವರು ಸುಳ್ಳು ಹೇಳುವದು ಅಸಾಧ್ಯವಾಗಿದೆ.

ಆತನು, *"ಸುಳ್ಳಾಡದ ದೇವರು"* (ತೀತನಿಗೆ 1:2). ಆತನು ಹೇಳುವ ಪ್ರತಿಯೊಂದು ಮಾತು ಸತ್ಯವಾಗಿದೆ. ಯೇಸು ಹೇಳಿರುವಂತೆ, *"ನಿನ್ನ ವಾಕ್ಯವೇ ಸತ್ಯವು"* (ಯೋಹಾನ 17:17b). ದೇವರ ಬದಲಾಗದಿರುವ ಸ್ವಭಾವದ ಈ ಅಂಶವನ್ನು ಆತುಕೊಳ್ಳುವ ಸ್ಥಾನಕ್ಕೆ ನಾವು ಬರಬೇಕು. ಆತನು ಎಂದಿಗೂ ಸುಳ್ಳು ಹೇಳುವದಿಲ್ಲ ಎಂದು ನಮಗೆ ಗೊತ್ತಿದೆ ಆದ್ದರಿಂದ, ಆತನು ಹೇಳಿರುವ ಪ್ರತಿಯೊಂದು ಮಾತು ಖಂಡಿತವಾಗಿಯೂ ಸತ್ಯವಾಗಿದೆ. *"ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ; ಮಾತು ಕೊಟ್ಟ ನಂತರ ನೆರವೇರಿಸುವದಿಲ್ಲವೋ?"* (ಅರಣ್ಯಕಾಂಡ 23:19). ನಮಗೆ ಈ ಭರವಸೆಯನ್ನು ಕೊಟ್ಟಿರುವಾಗ, ಶಾಸ್ತ್ರವು ಹೇಳುವ ಪ್ರಕಾರ, *"ನಮಗೆ ಬಲವಾದ ಧೈರ್ಯವುಂಟು"* ಅಥವಾ ಆಂಪ್ಲಿಫೈಡ್ ಬೈಬಲ್ ಕ್ಲಾಸಿಕ್ ಹೇಳುವ ಪ್ರಕಾರ, ನಮಗೆ *"ನಮ್ಮೊಳಗೆ ವಾಸಮಾಡುವ ಬಲವಾದ ಧೈರ್ಯ ಮತ್ತು ಬಲವಾದ ಪ್ರೋತ್ಸಾಹವುಂಟು"* (ಇಬ್ರಿಯರಿಗೆ 6:18, ಆಂಪ್ಲೀಫೈಡ್

ಬೈಬಲ್ ಕ್ಲಾಸಿಕ್ ಎಡಿಷನ್ ಇಂಗ್ಲೀಷ್ ಬೈಬಲ್).

ಶುದ್ಧವಾದ ಮಾತುಗಳು

ಕೀರ್ತನೆಗಳು 12:6

ಯೆಹೋವನ ಮಾತುಗಳು ಯಥಾರ್ಥವಾದವುಗಳೇ; ಅವು ಏಳು ಸಾರಿ ಪುಟಕ್ಕೆ ಹಾಕಿದ ಬೊಕ್ಕ ಬೆಳ್ಳಿಯೋಪಾದಿಯಲ್ಲಿವೆ.

ನಮ್ಮ ದೇವರು ಸತ್ಯದ ದೇವರಾಗಿದ್ದಾನೆ. ಆತನ ಮಾತುಗಳು ಸತ್ಯವಾದವುಗಳು, ಯಥಾರ್ಥವಾದ ಮಾತುಗಳಾಗಿವೆ. ದೇವರ ವಾಕ್ಯವು ಯಾವುದೇ ತಪ್ಪಿಲ್ಲದ್ದಾಗಿದೆ. *"ನಿನ್ನ ವಾಕ್ಯದ ಸಾರಾಂಶವು ಸತ್ಯವೇ,"* (ಕೀರ್ತನೆಗಳು 119:160a). *"ಆತನು ... ಮಾಡಿದ ಅತಿಶ್ರೇಷ್ಠವಾಗ್ದಾನಗಳಲ್ಲಿ ಒಂದೂ ತಪ್ಪಿಹೋಗಲಿಲ್ಲ"* (1 ಅರಸುಗಳು 8:56b). ಬಲವಾದ ಆತ್ಮವಿಶ್ವಾಸದೊಂದಿಗೆ ಅವುಗಳನ್ನು ಆತುಕೊಳ್ಳಬಹುದು. ಯಾವುದೇ ಮುಚ್ಚುಮರೆಯಿಲ್ಲದೆ ಆತನ ವಾಗ್ದಾನಗಳನ್ನು ನಂಬಬಹುದು, ಆತನ ಸೂಚನೆಗಳನ್ನು ಪೂರ್ಣಹೃದಯದಿಂದ ಅಂಗೀಕರಿಸಿಕೊಳ್ಳಬಹುದು. ದೇವರ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ (ಕೀರ್ತನೆಗಳು 119:89). ಅವುಗಳು ಬದಲಾಗುವದಿಲ್ಲ ಅಥವಾ ಮಾರ್ಪಡುವದಿಲ್ಲ ಯಾಕಂದರೆ ಆತನು ತನ್ನ ಒಡಂಬಡಿಕೆಯನ್ನು ಮುರಿಯುವದಿಲ್ಲ ಅಥವಾ ತಾನು ಹೇಳಿರುವದನ್ನು ಭಂಗಪಡಿಸುವದಿಲ್ಲ (ಕೀರ್ತನೆಗಳು 89:34). ಆತನ ವಾಕ್ಯವು ಸದಾಕಾಲ ಇರುತ್ತದೆ (1 ಪೇತ್ರನು 1:23). ಆತನ ವಾಕ್ಯವು ಬಲವಾದ ಭದ್ರತೆಯ ಸ್ಥಳವಾಗಿದೆ ಯಾಕಂದರೆ ಅದರಷ್ಟು ಯಥಾರ್ಥವಾದದ್ದು, ದೃಢವಾದದ್ದು ಮತ್ತು ಶಾಶ್ವತವಾದದ್ದು ಬೇರೆ ಯಾವುದೂ ಇಲ್ಲ.

ದೇವರ ವಾಕ್ಯವು ದೇವರ ಶಕ್ತಿಯ ವಾಹಕವಾಗಿದೆ

ಇಬ್ರಿಯರಿಗೆ 11:3

ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.

ಇಬ್ರಿಯರಿಗೆ 1:3a

ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ...

ಇಬ್ರಿಯರಿಗೆ 4:12
ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.

ಸತ್ಯವೇದವು ಕಲಿಸುವದೇನೆಂದರೆ ದೇವರು ಬರೀ ತನ್ನ ಬಾಯಿ ಮಾತಿನಿಂದ ಈ ಜಗತ್ತನ್ನು ಉಂಟುಮಾಡಿದನು. ಇದನ್ನು ನಂಬುವದು "ಬಿಗ್ ಬ್ಯಾಂಗ್" ಪ್ರತಿಪಾದಕರು ಮತ್ತು ಇತರೆ ಸಿದ್ಧಾಂತಗಳು ಹೇಳುವಂತೆ ಕಾಲಕ್ರಮೇಣ, ಕಾರ್ಯಗಳು ತಾನಾಗಿಯೇ ನಡೆದವು ಎಂಬವುಗಳನ್ನು ನಂಬುವದಕ್ಕಿಂತ ಉತ್ತಮವಾಗಿದೆ. *"ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವು"*(ಇಬ್ರಿಯರಿಗೆ 11:3) ಎಂಬದನ್ನು ನಾವು ನಂಬುತ್ತೇವೆ. ದೇವರು ಹೇಳಿದ ಮಾತುಗಳಿಂದ ಈ ಜಗತ್ತು ರಚನೆಯಾಯಿತು, ನಿರ್ಮಾಣವಾಯಿತು, ರೂಪವಾಯಿತು. *"ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲ"* (ಇಬ್ರಿಯರಿಗೆ 11:3) ಅಂದರೆ, ಕಾಣಿಸುವಂಥವುಗಳು ಕಾಣದಂಥವುಗಳಿಂದ ಉಂಟಾದವು. ಪ್ರಾಕೃತವು ಆತ್ಮೀಕತೆಯಿಂದ ಬಂದಿತು. ಇದು ನಾವು ಗ್ರಹಿಸಿಕೊಳ್ಳಬೇಕಾದ ಶಕ್ತವಾಗಿರುವ ಸತ್ಯವಾಗಿದೆ. ದೇವರ ವಾಕ್ಯವು ಅದೃಶ್ಯವಾದ, ಆತ್ಮೀಕ ಸಾಧನವಾಗಿದ್ದು ಕಣ್ಣಿಗೆ ಕಾಣುತ್ತಿರುವ ಪ್ರಾಕೃತ ಲೋಕವನ್ನು ಉಂಟುಮಾಡಿತು. ಇಬ್ರಿಯರಿಗೆ 1:3ರ ಪ್ರಕಾರ ದೇವರು ಹೇಳಿದ ಮಾತಿನಿಂದ ಎಲ್ಲವೂ ಉಂಟಾದದ್ದು ಮಾತ್ರವಲ್ಲ ಬದಲಾಗಿ ಎಲ್ಲವೂ ಆ ಮಾತಿನಿಂದಲೇ ಎತ್ತಿಹಿಡಿಯಲ್ಪಟ್ಟಿವೆ ಇಡೀ ವಿಶ್ವವು ದೇವರ ಮಾತಿನಿಂದಲೇ ಪೋಷಿಸಲ್ಪಡುತ್ತಿದೆ, ನಿಯಂತ್ರಿಸಲ್ಪಡುತ್ತಿದೆ ಮತ್ತು ಕ್ರಮಬದ್ಧವಾಗಿದೆ.

ದೇವರ ವಾಕ್ಯವು ದೇವರ ಶಕ್ತಿಯಿಂದ ತುಂಬಿದೆ ಎಂಬದನ್ನು ಅರಿತುಕೊಳ್ಳುವಾಗ ನಾವು ಸತ್ಯವನ್ನು ಅರ್ಥಮಾಡಿಕೊಳ್ಳುತ್ತೇವೆ. ಭೌತಶಾಸ್ತ್ರದಲ್ಲಿ, ಬೆಳಕಿನ ಸ್ವಭಾವವನ್ನು ವಿವರಿಸುವ ಸಿದ್ಧಾಂತಗಳಲ್ಲಿ ಒಂದು ಹೇಳುವದೇನೆಂದರೆ ಬೆಳಕು ಫೋಟಾನ್ ಗಳನ್ನು (ಶಕ್ತಿಯ ಮೂಲಗಳನ್ನು) ಹೊಂದಿದೆ. ಫೋಟಾನ್ ಗಳು ಮೂಲಭೂತ ಶಕ್ತಿಯ ಕಣಗಳಾಗಿವೆ. ಶಕ್ತಿಯ ಈ ಕಣಗಳು ಸೂಕ್ತವಾದ ಗುರಿಗಳಿಗೆ ಢಿಕ್ಕಿ ಹೊಡೆಯುವಾಗ, ತಮ್ಮ ಕೆಲವು ಶಕ್ತಿಯನ್ನು ಬಿಡುಗಡೆಗೊಳಿಸುತ್ತವೆ. ಇದೇ ಪ್ರಕಾರ, ನಾವು ನಮ್ಮ ಮನಸ್ಸಿನೊಳಗೆ ಚಿತ್ರಿಸಿಕೊಳ್ಳಬಹುದು, ಶಕ್ತಿಯ ಕಣಗಳಾಗಿರುವ ದೇವರ

ವಾಕ್ಯವು ತಮ್ಮೊಳಗೆ ಸರ್ವಶಕ್ತನಾದ ದೇವರ ಶಕ್ತಿಯ ಸರ್ವಶಕ್ತವಾದ ಬಲವನ್ನು ಹೊಂದಿವೆ. ದೇವರ ವಾಕ್ಯವು ದೈವೀಕವಾಗಿರುವ ಈ ಶಕ್ತಿಯನ್ನು ಬಿಡುಗಡೆಗೊಳಿಸುತ್ತದೆ ಮತ್ತು ದೇವರ ಕ್ರಿಯಾತ್ಮಕ ಕಾರ್ಯಗಳು ಉಂಟಾಗುವದಕ್ಕೆ ಕಾರಣವಾಗುತ್ತದೆ.

ದೇವರು ತನ್ನ ಮಾತಿನ ಶಕ್ತಿಯ ಮೂಲಕ ಇಡೀ ಜಗತ್ತನ್ನು ಉಂಟುಮಾಡಿರುವದಾದರೆ, ಈಗ ನಮ್ಮ ಜೀವಿತಗಳಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವ ಸಂಗತಿಗಳನ್ನು ಅಸ್ತಿತ್ವಕ್ಕೆ ತರಲು ಆತನಿಗೆ ಶಕ್ತಿ ಇಲ್ಲವೇ? ಅನಾರೋಗ್ಯ ಇರುವ ಕಡೆ, ದೇವರು ತನ್ನ ಮಾತಿನ ಶಕ್ತಿಯ ಮೂಲಕ ಸ್ವಸ್ಥತೆ ಹಾಗೂ ಆರೋಗ್ಯವನ್ನು ಉಂಟುಮಾಡಲು ಶಕ್ತನಾಗಿದ್ದಾನೆ. ಕೊರತೆ ಇರುವ ಕಡೆ, ತನ್ನ ವಾಕ್ಯದ ಶಕ್ತಿಯ ಮೂಲಕ ಸೌಕರ್ಯ ಮತ್ತು ಸೌಲಭ್ಯಗಳನ್ನು ಅಸ್ತಿತ್ವಕ್ಕೆ ತರಲು ದೇವರು ಶಕ್ತನಾಗಿದ್ದಾನೆ. ಆದ್ದರಿಂದ, ದೇವರ ವಾಕ್ಯವು ಈಗ ನಮ್ಮ ಜೀವಿತಗಳಲ್ಲಿ ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ದೇವರು ಮಾಡಿರುವ ವಾಗ್ದಾನದ ವಿಷಯಗಳನ್ನು ಉಂಟುಮಾಡಲು (ಅಸ್ತಿತ್ವಕ್ಕೆ ತರಲು) ಶಕ್ತವಾಗಿದೆ.

ಈ ವಿಶ್ವವನ್ನು ರಚಿಸಲು, ನಿರ್ಮಿಸಲು ಮತ್ತು ರೂಪಿಸಲು ದೇವರು ತನ್ನ ವಾಕ್ಯವನ್ನು ಉಪಯೋಗಿಸಿದನು. ಹೀಗಿರುವಾಗ, ದೇವರಿಗೆ ತನ್ನ ವಾಕ್ಯದ ಮೂಲಕ ನಮ್ಮ ವರ್ತಮಾನ ಮತ್ತು ಭವಿಷ್ಯತ್ ಕಾಲಗಳನ್ನು ರಚಿಸಲು, ನಿರ್ಮಿಸಲು ಮತ್ತು ರೂಪಿಸಲು ಆಗುವದಿಲ್ಲವೇ? ನಮ್ಮ ವರ್ತಮಾನವನ್ನು ಬದಲಾಯಿಸಿ ನಮ್ಮ ಭವಿಷ್ಯವನ್ನು ರೂಪಿಸುವ ಶಕ್ತಿ ದೇವರ ವಾಕ್ಯದಲ್ಲಿದೆ.

ಇಡೀ ವಿಶ್ವವು ದೇವರ ವಾಕ್ಯದಿಂದ ಯಾವುದೇ ತಡೆಯಿಲ್ಲದೆ ಮುಂದುವರೆಯುತ್ತಿದೆ, ನಿಯಂತ್ರಣದಲ್ಲಿದೆ ಮತ್ತು ಕ್ರಮವುಳ್ಳದ್ದಾಗಿದೆ. ನಮ್ಮ ಜೀವಿತಗಳನ್ನು ಯಾವುದೇ ತಡೆಯಿಲ್ಲದೆ ಮುಂದುವರೆಸಲು, ಸ್ಥಿರಪಡಿಸಲು ಮತ್ತು ಕ್ರಮಪಡಿಸಲು ದೇವರ ವಾಕ್ಯಗಳಿಗೆ ಆಗುವುದಿಲ್ಲವೇ? ದೇವರ ವಾಕ್ಯವು ಭೂಮಿಯ ಮೇಲೆ ನಮ್ಮ ಜೀವಿತಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮುಂದುವರೆಸಲು, ನಿಯಂತ್ರಿಸಲು ಮತ್ತು ಕ್ರಮಪಡಿಸಲು ಬೇಕಾಗುವಷ್ಟು ಹಾಗೂ ಹೆಚ್ಚಿನ ಶಕ್ತಿಯನ್ನು ಹೊಂದಿದೆ.

ವಾಗ್ದಾನಗಳ ಮೇಲೆ ನಿಲ್ಲುವದು

ರೋಮಾ 4:18

[ಅಬ್ರಹಾಮನು ... ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು ...

ವಾಕ್ಯದ ಶುದ್ಧತೆ ಮತ್ತು ಶಕ್ತಿಯನ್ನು ಅರ್ಥಮಾಡಿಕೊಳ್ಳುವದು ಅದನ್ನು ಆತುಕೊಳ್ಳಲು ಬೇಕಾದ ಬಲವಾದ ಆತ್ಮವಿಶ್ವಾಸವನ್ನು ನಮಗೆ ಕೊಡುತ್ತದೆ. ದೇವರ ವಾಕ್ಯವು ಸತ್ಯವಾಗಿದೆ ಆದ್ದರಿಂದ, ವಾಕ್ಯದಲ್ಲಿ ವಾಗ್ದಾನ ಮಾಡಲಾಗಿರುವದನ್ನು ನಾವು ನಿರೀಕ್ಷಿಸಬಹುದು. ದೇವರ ವಾಕ್ಯವು ಶಕ್ತಿಯಿಂದ ತುಂಬಿದೆ ಆದ್ದರಿಂದ, ಆತನ ವಾಕ್ಯವು ನಮ್ಮ ಜೀವಿತಗಳಲ್ಲಿ ಉಂಟುಮಾಡುತ್ತದೆ ಎಂದು ನಾವು ಆತ್ಮವಿಶ್ವಾಸವುಳ್ಳವರಾಗಿರಬಹುದು. ಒಂದುವೇಳೆ ಇದು ನಿಜವೇ ಆದರೂ, ಅಬ್ರಹಾಮನ ಹಾಗೆ, ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ, ನಾವೇನಾಗುವೆವೆಂದು ದೇವರು ಹೇಳಿದ್ದಾನೋ ಅದೆಲ್ಲವೂ ಆಗುವೆವೆಂದು ನಂಬಿಕೆಯಿಂದ ನಿರೀಕ್ಷಿಸುತ್ತೇವೆ. ನಾವು ಹೀಗೆ ಮಾಡಲು ಕಾರಣ ಏನೆಂದರೆ ನಾವು ದೇವರ ವಾಕ್ಯದ ಶುದ್ಧತೆ ಮತ್ತು ಅಧಿಕಾರವನ್ನು ಅರ್ಥಮಾಡಿಕೊಂಡಿದ್ದೇವೆ. ಆತನ ವಾಕ್ಯವು ಎಂದಿಗೂ ವಿಫಲವಾಗುವದಿಲ್ಲ ಎಂದು ನಮಗೆ ಗೊತ್ತಿದೆ.

ನಮ್ಮಲ್ಲಿ ಕೆಲವರು ಆರ್ಥಿಕವಾಗಿ ಸಂಕಷ್ಟಗಳನ್ನು ಎದುರಿಸುತ್ತಾ ಇರಬಹುದು. ನಮ್ಮ ಅನುದಿನದ ಅವಶ್ಯಕತೆಗಳ ವಿಷಯ ಬರುವಾಗ ಕಾರ್ಯಗಳು ಬದಲಾಗುತ್ತವೆಯೇ ಎಂದು ಆಶ್ಚರ್ಯಪಡುತ್ತಿರಬಹುದು. ನಮ್ಮ ಬೌತಿಕ ಅವಶ್ಯಕತೆಗಳೆಲ್ಲವೂ ಪೂರೈಕೆಯಾಗುವವು ಎಂದು ದೇವರು ವಾಗ್ದಾನ ಮಾಡಿದ್ದಾನೆ. *"ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು"* (ಫಿಲಿಪ್ಪಿಯವರಿಗೆ 4:19) ಎಂಬದಾಗಿ ಆತನು ವಾಗ್ದಾನ ಮಾಡಿದ್ದಾನೆ ಎಂದು ನಮಗೆ ಗೊತ್ತಿದೆ. *"ನಾವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಿಸಿದರೆ"* ಭೂಮಿಯ ಮೇಲೆ ನಮ್ಮ ಜೀವಿತಕ್ಕೆ ನಮಗೆ ಅವಶ್ಯವಾಗಿರುವ ಎಲ್ಲವೂ ಸಿಗುತ್ತವೆ ಎಂದು ನಮಗೆ ಗೊತ್ತಿದೆ (ಮತ್ತಾಯ 6:33). ನಮಗಿರುವವುಗಳಿಂದ ದೇವರನ್ನು ಸನ್ಮಾನಿಸಿದರೆ, ನಾವು ಅಭಿವೃದ್ಧಿಯಾಗುವಂತೆ ಆತನು ಮಾಡುತ್ತಾನೆ ಎಂದು ನಮಗೆ ಗೊತ್ತಿದೆ (ಜ್ಞಾನೋಕ್ತಿಗಳು 3:9,10; ಮಲಾಕಿಯ 3:9-11). ಈ ವಾಗ್ದಾನಗಳೆಲ್ಲವೂ ಶುದ್ಧವೂ ದೈವೀಕ ಶಕ್ತಿಯಿಂದ

ತುಂಬಿದವುಗಳೂ ಆಗಿವೆ ಎಂಬದನ್ನು ತಿಳಿದುಕೊಂಡಿರುವದರಿಂದ, ನಂಬಿಕೆಯಿಂದ ನಾವು ಇವುಗಳನ್ನು ಹಿಡಿದುಕೊಳ್ಳುತ್ತೇವೆ. ನಮ್ಮ ಜೀವಿತಗಳಲ್ಲಿ ಆರ್ಥಿಕ ಆಶೀರ್ವಾದದ ಕ್ರಿಯಾತ್ಮಕ ಅದ್ಭುತಕಾರ್ಯಗಳನ್ನು ಬಿಡುಗಡೆ ಮಾಡಲು ಮತ್ತು ನಮ್ಮ ಪರಿಸ್ಥಿತಿಗಳನ್ನು ಬದಲಾಯಿಸಲು ಈ ಮಾತುಗಳಲ್ಲಿ (ವಾಗ್ದಾನಗಳಲ್ಲಿ) ಬಹಳಷ್ಟು ಶಕ್ತಿ ಇದೆ ಎಂದು ನಮಗೆ ಗೊತ್ತಿದೆ. ನಾವು ಈ ವಾಗ್ದಾನಗಳಲ್ಲಿ ನೆಲೆಯಾಗುವದನ್ನು ಮುಂದುವರೆಸುತ್ತೇವೆ.

ಕೆಲವರು ತಮ್ಮ ಭವಿಷ್ಯಕ್ಕಾಗಿ ದೇವರನ್ನು ಎದುರುನೋಡುತ್ತಾ ಇರಬಹುದು. ವಿಷಯಗಳು ಅಸ್ಪಷ್ಟವಾಗಿ, ಅಸ್ಥಿರವಾಗಿ, ಬಹುಶಃ ನಿರೀಕ್ಷೆಯಿಲ್ಲದ್ದಾಗಿ ಮತ್ತು ಕರಾಳವಾಗಿ ಕಂಡರೂ, ದೇವರ ವಾಕ್ಯವು ನಮ್ಮ ಜೀವಿತಗಳಿಗೆ ಆತ್ಮವಿಶ್ವಾಸ ಮತ್ತು ಭರವಸೆಯನ್ನು ತರುತ್ತದೆ. ವಾಕ್ಯವು ಹೇಳುವದೇನೆಂದರೆ, *"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ"* (ರೋಮಾಪುರದವರಿಗೆ 8:28). ದೇವರು ನಮ್ಮ ವಿಷಯದಲ್ಲಿ ಮಾಡಿಕೊಂಡಿರುವ ಆಲೋಚನೆಗಳನ್ನು ಬಲ್ಲವನಾಗಿದ್ದಾನೆ, ಅವು ದೊಡ್ಡ ಸಮೃದ್ಧಿಯ ಯೋಚನೆಗಳಾಗಿವೆ, ಮತ್ತು ನಾವು ನಿರೀಕ್ಷಿಸುತ್ತಿರುವ ಭವಿಷ್ಯವನ್ನು ಕೊಡುವಂಥ ಯೋಚನೆಗಳಾಗಿವೆ (ಯೆರೆಮೀಯ 29:11). ನಮ್ಮ ಮಾರ್ಗವು ಹೊಳೆಯುವ ಬೆಳಕಿನಂತಿದ್ದು ಹೆಚ್ಚೆಚ್ಚು ಹೊಳೆಯುವಂಥದ್ದಾಗಿದೆ (ಜ್ಞಾನೋಕ್ತಿಗಳು 4:18). ಆದ್ದರಿಂದ, ವಿಷಯಗಳು ಸ್ಪಷ್ಟವಾಗುವದನ್ನು ನಾವು ನಿರೀಕ್ಷಿಸುತ್ತೇವೆ. ನಮ್ಮ ಹೆಜ್ಜೆಗಳು ಕರ್ತನಿಂದ ಕ್ರಮಪಡಿಸಲ್ಪಟ್ಟಿವೆ ಎಂದು ನಮಗೆ ಗೊತ್ತಿದೆ (ಕೀರ್ತನೆ 37:23,24). ಇವು ಮತ್ತು ಇನ್ನು ಅನೇಕ ಶಾಸ್ತ್ರಗಳು ನಮ್ಮನ್ನು ನಿರ್ಭೀತವಾದ ಧೈರ್ಯ ಮತ್ತು ಆತ್ಮವಿಶ್ವಾಸದಿಂದ ತುಂಬಿಸುತ್ತವೆ. ನಾವು ಆತನ ವಾಗ್ದಾನಗಳಲ್ಲಿ ನೆಲೆಯಾಗುವದನ್ನು ಮುಂದುವರೆಸುತ್ತೇವೆ.

ಇದೇ ಪ್ರಕಾರ, ನಮ್ಮ ಜೀವಿತಗಳ ವಿವಿಧ ಕ್ಷೇತ್ರಗಳಲ್ಲಿ, ನಾವು ಕರ್ತನ ವಾಗ್ದಾನಗಳು ಮತ್ತು ಆಜ್ಞೆಗಳನ್ನು ಗುರುತಿಸುತ್ತೇವೆ. ನಮ್ಮ ಜೀವಿತಗಳ ಎಲ್ಲಾ ಕ್ಷೇತ್ರಗಳ ವಿಷಯವಾಗಿ ಆತನ ವಾಕ್ಯವು ಶುದ್ಧ ಮತ್ತು ಪೂರ್ಣ ಅಧಿಕಾರವುಳ್ಳದ್ದಾಗಿದೆ ಎಂಬದನ್ನು ನಾವು ಒಪ್ಪಿಕೊಳ್ಳುತ್ತೇವೆ.

ವಾಕ್ಯದಲ್ಲಿರುವ ಅಪರಿಮಿತವಾದ ಶಕ್ತಿಯನ್ನು ಮತ್ತು ನಮ್ಮ ಜೀವಿತಗಳಲ್ಲಿ ಅದು ಬಿಡುಗಡೆಗೊಳ್ಳುವ ಸಾಧ್ಯತೆಯನ್ನು ಅರ್ಥಮಾಡಿಕೊಂಡವರಾಗಿ,

ದೇವರ ವಾಕ್ಯದ ಅಧಿಕಾರವನ್ನು ನಮ್ಮ ಜೀವಿತಗಳಲ್ಲಿ ಅನುಭವಿಸಲು ನಾವು ಏನು ಮಾಡಬೇಕು? ವಿಶ್ವಾಸಿಯ ಜೀವಿತದಲ್ಲಿ ದೇವರ ವಾಕ್ಯವು ಬಿಡುಗಡೆ ಮಾಡುವ ಅಂತರ್ಗತವಾದ ಶಕ್ತಿ ಏನಾಗಿದೆ? ಮುಂದಿನ ಅಧ್ಯಾಯಗಳಲ್ಲಿ ನಾವು ಅವುಗಳ ಬಗ್ಗೆ ಆಲೋಚನೆ ಮಾಡೋಣ.

3

ದೇವರ ವಾಕ್ಯ: ಅದ್ಭುತದ ಬೀಜ

ಕರ್ತನಾದ ಯೇಸು ಕ್ರಿಸ್ತನು ಸಾಮ್ಯಗಳ ಉಪಯೋಗದಿಂದ ಕಲಿಸುತ್ತಿದ್ದನು. ಸಾಮ್ಯಗಳು ನಮ್ಮ ಲೋಕದ ಕಥೆಗಳು ಅಥವಾ ನಿದರ್ಶನಗಳಾಗಿದ್ದು ದೇವರ ರಾಜ್ಯದ ಸತ್ಯವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ದೇವರ ರಾಜ್ಯವು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬದನ್ನು ಸಾಮ್ಯಗಳು ನಮಗೆ ಕಲಿಸುತ್ತವೆ.

ನಮ್ಮೆಲ್ಲರಿಗೂ ಪರಿಚಯವಿರುವ ಒಂದು ಸಾಮ್ಯವೆಂದರೆ ಮೂರು ಸುವಾರ್ತೆಗಳಲ್ಲಿ ಬರೆಯಲ್ಪಟ್ಟಿರುವ ಬಿತ್ತುವವನ ಸಾಮ್ಯವಾಗಿದೆ (ಮತ್ತಾಯ 13:1-9,18-23; ಮಾರ್ಕ 4:1-10,13-20 ಮತ್ತು ಲೂಕ 8:4-15). ಮಾರ್ಕನ ಸುವಾರ್ತೆಯಲ್ಲಿರುವ ಈ ಸಾಮ್ಯವನ್ನು ಓದೋಣ ಮತ್ತು ಮೂರೂ ಸುವಾರ್ತೆಗಳಲ್ಲಿರುವ ವಚನಭಾಗಗಳಿಂದ ಒಳನೋಟಗಳನ್ನು ತಿಳಿದುಕೊಳ್ಳೋಣ.

ಬಿತ್ತುವವನ ಸಾಮ್ಯ

ಮಾರ್ಕ 4:1-10,13-20

**1 ಆತನು ತಿರಿಗಿ ಸಮುದ್ರದ ದಡದಲ್ಲಿ ಉಪದೇಶ ಮಾಡುತ್ತಿದ್ದನು. ಬಹುಜನರು ಆತನ ಬಳಿಗೆ
ಕೂಡಿ ಬಂದದ್ದರಿಂದ ಆತನು ಸಮುದ್ರದಲ್ಲಿದ್ದ ದೋಣಿಹತ್ತಿ ಕೂತುಕೊಂಡನು.**

**2 ಆ ಜನರೆಲ್ಲರು ಸಮುದ್ರದ ಹತ್ತರ ನೆಲದ ಮೇಲೆ ಇದ್ದರು. ಆಗ ಆತನು ಅವರಿಗೆ
ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಉಪದೇಶ ಮಾಡಿದನು. ಆ ಉಪದೇಶಗಳಲ್ಲಿ
ಅವರಿಗೆ ಹೇಳಿದ್ದೇನಂದರೆ–**

3 "ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರಟನು.

**4 ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು
ತಿಂದುಬಿಟ್ಟವು.**

**5 ಬೇರೆ ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲಿ ಬಿದ್ದವು; ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ
ಅವು ಬೇಗ ಮೊಳೆತವು;**

6 ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿಹೋದವು.

7 ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು ಅವುಗಳನ್ನು

ಅಡಗಿಸಿಬಿಟ್ಟದ್ದರಿಂದ ಅವು ಫಲಕೊಡಲಿಲ್ಲ.
8 ಇನ್ನು ಕೆಲವು ಬೀಜ ಒಳ್ಳೆಯ ನೆಲದಲ್ಲಿ ಬಿದ್ದು ಹುಟ್ಟಿ ಬೆಳೆಯುತ್ತಾ ಬಂದು ಒಂದು ಮೂವತ್ತರಷ್ಟು, ಒಂದು ಅರುವತ್ತರಷ್ಟು,
9 ಒಂದು ನೂರರಷ್ಟು ಫಲವನ್ನು ಕೊಟ್ಟವು" ಎಂದು ಹೇಳಿ-ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ ಅಂದನು.
10 ಆತನು ಒಬ್ಬನೇ ಇದ್ದಾಗ ಆತನ ಹತ್ತಿರ ಇದ್ದವರು ಹನ್ನೆರಡು ಮಂದಿ ಶಿಷ್ಯರ ಕೂಡ ಆ ಸಾಮ್ಯಗಳ ವಿಷಯದಲ್ಲಿ ಆತನನ್ನು ಕೇಳಿದರು.
13 ಆಮೇಲೆ ಆತನು ಅವರಿಗೆ ಹೇಳಿದ್ದೇನಂದರೆ-"ಈ ಸಾಮ್ಯದ ಅರ್ಥ ನಿಮಗೆ ಗೊತ್ತಾಗಲಿಲ್ಲವೋ? ಹಾಗಾದರೆ ನನ್ನ ಎಲ್ಲಾ ಸಾಮ್ಯಗಳನ್ನು ಹೇಗೆ ತಿಳುಕೊಂಡೀರಿ?
14 ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ.
15 ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು ತೆಗೆದುಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವವರು.
16 ಅದೇ ಪ್ರಕಾರ ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ;
17 ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿಬೀಳುತ್ತಾರೆ; ಇವರೇ ಬೀಜಬಿದ್ದ ಬಂಡೆಯ ನೆಲವಾಗಿರುವವರು.
18 ಇನ್ನು ಕೆಲವರು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ ಫಲವನ್ನು ಕೊಡದೆ ಇರುತ್ತಾರೆ;
19 ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು.
20 ಮತ್ತೆ ಕೆಲವರು ವಾಕ್ಯವನ್ನು ಕೇಳಿ ಕೈಕೊಂಡು ಮೂವತ್ತರಷ್ಟಾಗಲಿ ಅರುವತ್ತರಷ್ಟಾಗಲಿ ನೂರರಷ್ಟಾಗಲಿ ಫಲವನ್ನು ಕೊಡುತ್ತಾರೆ; ಇವರೇ ಬೀಜಬಿದ್ದ ಒಳ್ಳೆಯ ನೆಲವಾಗಿರುವವರು" ಅಂದನು.

ಬಿತ್ತುವವನ ಸಾಮ್ಯವು ಸರಳ ಮತ್ತು ಅರ್ಥಮಾಡಿಕೊಳ್ಳಲು ಸುಲಭವಾಗಿರುತ್ತದೆ, ವಿಶೇಷವಾಗಿ ಓದುವ ಮೂಲಕ ಅಥವಾ ಅನುಭವದ ಮೂಲಕ, ಬೀಜಗಳನ್ನು ಬಿತ್ತುವ ಮತ್ತು ಸಸ್ಯಗಳು ಅಥವಾ ಬೆಳೆಗಳನ್ನು ಪೋಷಿಸುವ ಪ್ರಕ್ರಿಯೆಯೊಂದಿಗೆ ಪರಿಚಿತರಾಗಿರುವವರಿಗೆ ಇದು ಸುಲಭವಾಗಿರುತ್ತದೆ. ನಮ್ಮ ಜೀವಿತಗಳಲ್ಲಿ ದೇವರ ವಾಕ್ಯವು ಕಾರ್ಯಮಾಡುವ ಕುರಿತು ಆಳವಾದ ಮತ್ತು ಶಕ್ತವಾದ ಸತ್ಯಗಳನ್ನು ತಿಳಿಯಪಡಿಸಲು ಕರ್ತನು ಸರಳವಾದ ಈ ಸಾಮ್ಯವನ್ನು ಉಪಯೋಗಿಸಿದ್ದಾನೆ. ದೇವರ ವಾಕ್ಯವು ಸಜೀವವಾದದ್ದು, ಸಕ್ರಿಯವಾದದ್ದು ಮತ್ತು ದೇವರ ಶಕ್ತಿಯಿಂದ ತುಂಬಿರುವಂಥದ್ದು ಎಂದು ನಮಗೆ ಗೊತ್ತಿದೆ (ಇಬ್ರಿಯರಿಗೆ 4:12). ದೇವರ

ವಾಕ್ಯದಲ್ಲಿರುವ ಜೀವ ಮತ್ತು ಶಕ್ತಿಯು ನಮ್ಮ ಜೀವಿತಗಳಲ್ಲಿ ಹೇಗೆ ಬಿಡುಗಡೆಯಾಗುತ್ತದೆ ಎಂಬದನ್ನೂ ಈ ಸಾಮ್ಯವು ಪ್ರಕಟಪಡಿಸುತ್ತದೆ. ದೇವರ ವಾಕ್ಯವು ಫಲ ಕೊಡದಂತೆ ತಡೆಯುವ ಸಂಗತಿಗಳನ್ನೂ ಇದು ಪ್ರಕಟಿಸುತ್ತದೆ.

ಈ ಸಾಮ್ಯವು ಉಳಿದ ಎಲ್ಲಾ ಸಾಮ್ಯಗಳನ್ನೂ ಅರ್ಥಮಾಡಿಕೊಳ್ಳಲು ಮುಖ್ಯವಾಗಿದೆ. ಯೇಸು ಹೇಳಿದ್ದೇನೆಂದರೆ, *"ಈ ಸಾಮ್ಯದ ಅರ್ಥ ನಿಮಗೆ ಗೊತ್ತಾಗಲಿಲ್ಲವೋ? ಹಾಗಾದರೆ ನನ್ನ ಎಲ್ಲಾ ಸಾಮ್ಯಗಳನ್ನು ಹೇಗೆ ತಿಳುಕೊಂಡೀರಿ?"* (ಮಾರ್ಕ 4:13) ಇದರ ಅರ್ಥ ಎರಡು ಪ್ರಾಮುಖ್ಯವಾದ ವಿಷಯಗಳು.

- ಮೊದಲನೆಯದಾಗಿ, ಈ ಸಾಮ್ಯದಿಂದ ಆತ್ಮೀಕ ಸತ್ಯ ಮತ್ತು ಹೊರನೋಟಗಳನ್ನು ತಿಳಿದುಕೊಳ್ಳುವದು ಹೇಗೆ ಎಂಬದನ್ನು ಒಂದುವೇಳೆ ನಾವು ಕಲಿತುಕೊಳ್ಳುವದಾದರೆ, ಉಳಿದ ಎಲ್ಲಾ ಸಾಮ್ಯಗಳ ವಿಷಯದಲ್ಲಿಯೂ ಇದನ್ನೇ ಮಾಡುವವರಾಗಿರುತ್ತೇವೆ.
- ಎರಡನೆಯದಾಗಿ, ಈ ಸಾಮ್ಯದಲ್ಲಿ ಪ್ರಕಟಪಡಿಸಲಾಗಿರುವ ಸತ್ಯಗಳು ಯೇಸು ಕ್ರಿಸ್ತನು ಹೇಳಿದ ಇತರೆ ಎಲ್ಲಾ ಸಾಮ್ಯಗಳಲ್ಲಿ ಪ್ರಕಟವಾಗಿರುವ ಮತ್ತು ಒಳಗೊಂಡಿರುವ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅವುಗಳಲ್ಲಿ ನಡೆಯಲು ನಮಗೆ ಸಹಾಯ ಮಾಡುವ ಕೀಲಿಗಳಾಗಿವೆ.

ಬಿತ್ತುವವನ ಸಾಮ್ಯದಲ್ಲಿ ಪ್ರಸ್ತುತಪಡಿಸಲಾಗಿರುವ ಪ್ರಮುಖ ಆಲೋಚನೆಗಳನ್ನು ಮುಖ್ಯವಾಗಿ ನೋಡಿಕೊಳ್ಳೋಣ. ಈ ಸಾರಾಂಶವನ್ನು ಪ್ರಸ್ತುತಪಡಿಸುವದರಲ್ಲಿ, ಮೂರು ಸುವಾರ್ತೆಗಳಲ್ಲಿರುವ ಸಮಾನಾಂತರ ವಚನಭಾಗಗಳಿಂದ ನಾವು ಕೆಲವು ವಿಷಯಗಳನ್ನು ತಿಳಿದುಕೊಳ್ಳಬಹುದು.

1) ದೇವರ ವಾಕ್ಯವು ಬೀಜಕ್ಕೆ ಸಮಾನವಾಗಿದೆ. (ಮಾರ್ಕ 4:14)

2) ನಮ್ಮ ಹೃದಯವು ನೆಲವಾಗಿದ್ದು ದೇವರ ವಾಕ್ಯವೆಂಬ ಬೀಜವು ಬಿತ್ತಲ್ಪಡುತ್ತದೆ. (ಮಾರ್ಕ 4:15)

3) ಬೀಜವು ಫಲವನ್ನು ಕೊಡಬೇಕಾದರೆ ಅದನ್ನು ಸಂರಕ್ಷಿಸಬೇಕು ಮತ್ತು ಪೋಷಿಸಬೇಕು.

4) ಸೈತಾನನು ವಾಕ್ಯವನ್ನು ಕದ್ದುಕೊಳ್ಳಬಾರದೆಂದರೆ ನಾವು ವಾಕ್ಯವನ್ನು

ಅರ್ಥಮಾಡಿಕೊಳ್ಳಬೇಕು (ಆತ್ಮೀಕ ಸತ್ಯದ ತಿಳುವಳಿಕೆಯನ್ನು ಹೊಂದಬೇಕು). (ಮತ್ತಾಯ 13:19)

5) ಲೋಕ ಅಥವಾ ಸೈತಾನನಿಂದ-ನಮಗೆ ಎದುರಾಗುವ ಕಷ್ಟಗಳು ಅಥವಾ ಹಿಂಸೆಗಳು ಏನೇ ಆದರೂ-ನಾವು ವಾಕ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು ಮತ್ತು ಫಲ ಕೊಡಲು ಸಹಾಯವಾಗುವಂತೆ ನಮ್ಮ ಹೃದಯಗಳಲ್ಲಿ ಬೇರೂರಲು ಅದಕ್ಕೆ ಅವಕಾಶ ಕೊಡಬೇಕು (ಮಾರ್ಕ 4:16,17)

6) ವಾಕ್ಯವನ್ನು ಅಡಗಿಸಿಬಿಡುವ ವಿಷಯಗಳಾದ ಪ್ರಪಂಚದ ಚಿಂತೆಗಳು, ಐಶ್ವರ್ಯದಿಂದುಂಟಾಗುವ ಮೋಸ, ಜೀವಿತದ ಸುಖಭೋಗಗಳು ಮತ್ತು ಇತರ ವಿಷಯಗಳ ಮೇಲಣ ಆಶೆಗಳಿಂದ ನಾವು ನಮ್ಮ ಹೃದಯವನ್ನು ಕಾಪಾಡಿಕೊಳ್ಳಬೇಕು. (ಮಾರ್ಕ 4:19)

7) ನಾವು ವಾಕ್ಯವನ್ನು ನಮ್ಮ ಹೃದಯಗಳಲ್ಲಿ ತಿಳುಕೊಳ್ಳುವಾಗ (ಮತ್ತಾಯ 13:23), ಕೈಕೊಳ್ಳುವಾಗ (ಮಾರ್ಕ 4:20) ಮತ್ತು ಇಟ್ಟುಕೊಳ್ಳುವಾಗ (ಲೂಕ 8:15), ನಮ್ಮ ಜೀವಿತಗಳಲ್ಲಿ ಫಲ ಕೊಡುವವರಾಗುತ್ತೇವೆ.

ದೇವರ ವಾಕ್ಯವನ್ನು ಧ್ಯಾನಿಸುವ ಮೂಲಕ ದೇವರ ವಾಕ್ಯವೆಂಬ ಬೀಜವನ್ನು ನಮ್ಮ ಹೃದಯಗಳಲ್ಲಿ ಬಿತ್ತುವ ಪ್ರಕ್ರಿಯೆಗೆ ವಿಶೇಷವಾದ ಗಮನವನ್ನು ಕೊಟ್ಟು ಪ್ರಮುಖವಾಗಿರುವ ಈ ಒಳನೋಟಗಳನ್ನು ಒಂದೊಂದಾಗಿ ವಿವರವಾಗಿ ನೋಡಿಕೊಳ್ಳೋಣ.

4
ಬೀಜವೆಂದರೆ ದೇವರ ವಾಕ್ಯ

ಲೂಕ 8:11
“ಈ ಸಾಮ್ಯದ ಅರ್ಥವೇನಂದರೆ–ಆ ಬೀಜವೆಂದರೆ ದೇವರ ವಾಕ್ಯ.

1 ಪೇತ್ರನು 1:23
ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು

ಈ ಸಾಮ್ಯದಲ್ಲಿ ನಾವು ನೋಡುವ ಮೊದಲನೆಯ ಸತ್ಯ ಏನೆಂದರೆ ದೇವರ ವಾಕ್ಯವು ಬೀಜಕ್ಕೆ ಸಮಾನವಾಗಿದೆ. ನೀವು ನಿಮ್ಮ ಕೈಯಲ್ಲಿ ಬೀಜವನ್ನು ಹಿಡಿದುಕೊಂಡಿರುವಾಗ, ಅದು ಪ್ರಾಮುಖ್ಯವಲ್ಲದ್ದಾಗಿ ಮತ್ತು ಜೀವವಿಲ್ಲದ್ದಾಗಿ ಕಾಣಿಸಿಕೊಳ್ಳುತ್ತದೆ. ಸಣ್ಣ ಬೀಜವನ್ನು ನಾವು ನೆಲದ ಮೇಲೆ ಬಿತ್ತುವಾಗ ಅದು ಮೊಳಕೆಯೊಡೆಯುತ್ತದೆ, ಬೇರೂರುತ್ತದೆ ಮತ್ತು ಕ್ರಮೇಣವಾಗಿ, ಗಿಡ ಅಥವಾ ದೊಡ್ಡ ಮರಣವಾಗಿ ಬೆಳೆಯುತ್ತದೆ ಎಂಬದನ್ನು ಊಹಿಸಿಕೊಳ್ಳುವದಿಲ್ಲ. ಬೀಜದೊಳಗೆ ಹೊಸ ಗಿಡ ಅಥವಾ ಮರವನ್ನು ಉಂಟುಮಾಡುವ ಸಾಮರ್ಥ್ಯ ಇರುತ್ತದೆ. ಒಂದರ್ಥದಲ್ಲಿ, ಬೀಜದೊಳಗೆ ಕ್ರಿಯಾತ್ಮಕ ಸಾಮರ್ಥ್ಯವಿರುತ್ತದೆ ಯಾಕಂದರೆ ಅದು ಹಿಂದೆಂದೂ ಅಸ್ತಿತ್ವದಲ್ಲಿ ಇಲ್ಲದೆ ಇರುವಂಥದ್ದಕ್ಕೆ ಜನ್ಮ ನೀಡುತ್ತದೆ. ಇದಲ್ಲದೆ, ಬೀಜವು ಹಾಗೆಯೇ ಉಳಿದರೆ, ಅಂದರೆ ಚೀಲದೊಳಗೆ ಅಥವಾ ಉಗ್ರಾಣದಲ್ಲಿ ಇದ್ದರೆ, ತನ್ನ ಸಾಮರ್ಥ್ಯವನ್ನು ಬಿಡುಗಡೆ ಮಾಡಲು ಅದಕ್ಕೆ ಆಗುವದಿಲ್ಲ. ಬೀಜವನ್ನು ಬಿತ್ತುವಾಗ ಮತ್ತು ಅದನ್ನು ಸರಿಯಾಗಿ ಪೋಷಿಸುವಾಗ ಮಾತ್ರವೇ ಅದರಲ್ಲಿರುವ ಶಕ್ತಿಯು ಬಿಡುಗಡೆಯಾಗುತ್ತದೆ.

ನಮಗೆ ಹೇಳಲಾಗಿರುವ ಪ್ರತಿಯೊಂದು ಮಾತೂ ಬೀಜವಾಗಿದೆ. ಸತ್ಯವೇದವು ಬೀಜದ-ಚೀಲ ಅಥವಾ ಬೀಜಗಳಿಂದ ತುಂಬಿರುವ ಉಗ್ರಾಣವಾಗಿದೆ. ನಾವು ಪ್ರತಿಯೊಂದು ವಾಕ್ಯ ಅಥವಾ ದೇವರ ವಾಕ್ಯವನ್ನು ಅದ್ಭುತ ಬೀಜ ಎಂದು ಕರೆಯಬಹುದು. ದೇವರು ನಮಗೆ ಕೊಟ್ಟಿರುವ ಈ ಬೀಜಗಳಲ್ಲಿ ಕ್ರಿಯಾತ್ಮಕವಾದ ಶಕ್ತಿ ಇದೆ. ದೇವರ ವಾಕ್ಯದ ಈ ಬೀಜಗಳು ನಮ್ಮ

ಹೃದಯಗಳಲ್ಲಿ ಬಿತ್ತಲ್ಪಡುವಾಗ ಮತ್ತು ಪೋಷಿಸಲ್ಪಡುವಾಗ, ತಮ್ಮೊಳಗಿರುವ ಅಸಾಧಾರಣವಾದ ಶಕ್ತಿಯನ್ನು ಅವು ನಮ್ಮ ಜೀವಿತಗಳೊಳಗೆ ಬಿಡುಗಡೆ ಮಾಡುತ್ತವೆ.

1 ಪೇತ್ರನು 1:23ರಲ್ಲಿ, ದೇವರ ವಾಕ್ಯವನ್ನು *"ನಾಶವಾಗದ ಬೀಜ"* ಎಂದು ಕರೆಯಲಾಗಿದೆ. *'ಸ್ಪೊರ'* ಎಂಬ ಗ್ರೀಕ್ ಪದವನ್ನು ಇಲ್ಲಿ ಉಪಯೋಗಿಸಲಾಗಿದೆ. ದೇವರ ವಾಕ್ಯವು ಅದ್ಭುತ *'ಸ್ಪೊರ'*-ಅದ್ಭುತವಾದ ಬೀಜವಾಗಿದೆ. ಆಧಾರವಾಗಿರುವ ತತ್ವ ಏನೆಂದರೆ-ದೇವರ ವಾಕ್ಯದೊಳಗೆ ಉಂಟುಮಾಡುವ ಸಾಮರ್ಥ್ಯವಿದೆ. ಅದು ತನ್ನೊಳಗೆ ಜೀವ-ಕೊಡುವ, ಕ್ರಿಯಾತ್ಮಕವಾದ, ಅದ್ಭುತ-ನಡೆಸುವ ಶಕ್ತಿಯನ್ನು ಸಾಮರ್ಥ್ಯವನ್ನು ಹೊಂದಿದೆ. ದೇವರು ಹೇಳಿರುವ ಪ್ರತಿಯೊಂದು ವಾಕ್ಯವು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುವ ಅದ್ಭುತ ಬೀಜವಾಗಿದೆ.

1 ಪೇತ್ರನು 1:23 ಹೇಳುವದೇನೆಂದರೆ ನಾವು ದೇವರ ವಾಕ್ಯದಿಂದ ಪುನರ್ಜನ್ಮಹೊಂದಿದ್ದೇವೆ. ಯಾಕೋಬನು1:18 ಪುನರುಚ್ಚರಿಸಿರುವದೇನೆಂದರೆ ನಾವು *"ಸತ್ಯಉಪದೇಶದ ವಾಕ್ಯದಿಂದ"* ಹುಟ್ಟಿದ್ದೇವೆ. ದೇವರ ವಾಕ್ಯದ (ಸುವಾರ್ತೆಯ) ಬೀಜವು ನಮ್ಮ ಹೃದಯಗಳಲ್ಲಿ ಬಿತ್ತಲ್ಪಟ್ಟಾಗ ಮತ್ತು ನಾವು ಅದನ್ನು ನಂಬಿದಾಗ, ಅದು ನಮ್ಮಲ್ಲಿರುವ ತನ್ನ ಜೀವ-ಕೊಡುವ ಶಕ್ತಿಯನ್ನು ಬಿಡುಗಡೆ ಮಾಡಿತು. ಕೂಡಲೇ, ಒಂದೇ ಕ್ಷಣದಲ್ಲಿ, ನಾವು ಪುನರ್ಜನ್ಮ ಹೊಂದಿದೆವು. ನಾವು ನೂತನಸೃಷ್ಟಿಗಳಾದೆವು. *"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು"* (2 ಕೊರಿಂಥದವರಿಗೆ 5:17). ದೇವರ ಕ್ರಿಯಾತ್ಮಕವಾದ ಕಾರ್ಯವು ನಮ್ಮ ಆತ್ಮಗಳಲ್ಲಿ ಉಂಟಾಯಿತು (ಎಫೆಸದವರಿಗೆ 2:10). ನಮ್ಮಲ್ಲಿ ನೆರವೇರಿರುವ ಈ ಕ್ರಿಯಾತ್ಮಕ ಕಾರ್ಯವು (ರಕ್ಷಣೆ ಹೊಂದಿರುವ ಅನೇಕರ ಹೃದಯಗಳಲ್ಲಿ ನೆರವೇರುತ್ತಾ ಇದೆ) ನಾವು ಅನುಭವಿಸುವ ದೊಡ್ಡ ಅದ್ಭುತವಾಗಿದೆ. ಇದು ನೂತನ ಜನನದ ಅದ್ಭುತವಾಗಿದೆ-ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗುವದಾಗಿದೆ. ಮತ್ತು ಕ್ರಿಯಾತ್ಮಕವಾಗಿರುವ ಈ ಅದ್ಭುತವು ನಾಶವಾಗದ ಬೀಜದ (ಸುವಾರ್ತೆಯ) ಶಕ್ತಿಯಿಂದ, ಅಂದರೆ ದೇವರ ವಾಕ್ಯದಿಂದ ಉಂಟಾದದ್ದಾಗಿದೆ.

ಕ್ರಿಸ್ತನಲ್ಲಿ ನಮ್ಮನ್ನು ನೂತನಸೃಷ್ಟಿಯನ್ನಾಗಿ ಮಾಡಿದ ಈ ಕಾರ್ಯವು

ಎಷ್ಟು ದೊಡ್ಡ ಕಾರ್ಯವಾಗಿದೆ ಎಂಬದನ್ನು ಆಲೋಚನೆ ಮಾಡಿರಿ. ನಮ್ಮ ಜೀವಿತಗಳ ಮೇಲಿದ್ದ ಸೈತಾನನ ಶಕ್ತಿಯು ಮುರಿಯಲ್ಪಟ್ಟಿದೆ. ನಾವು ಸೈತಾನನ ದೊರೆತನದಿಂದ ಹೊರಬಂದು ದೇವರ ಒಬ್ಬನೇ ಮಗನ ರಾಜ್ಯದೊಳಗೆ ಸೇರಿದ್ದೇವೆ (ಕೊಲೊಸ್ಸೆಯವರಿಗೆ 1:13). ನಾವು ದೇವರ ಕುಟುಂಬದೊಳಗೆ ಸೇರಿದ್ದೇವೆ. ನಾವು ದೇವರಿಂದ ಹುಟ್ಟಿದ್ದೇವೆ ಮತ್ತು ದೈವೀಕ ಸ್ವಭಾವದಲ್ಲಿ ಪಾಲುಗಾರರಾಗಿದ್ದೇವೆ. ನಾವು ಕ್ರಿಸ್ತನೊಳಗೆ ಸೇರಿಸಲ್ಪಟ್ಟಿದ್ದೇವೆ, ಮತ್ತು ಕ್ರಿಸ್ತನಲ್ಲಿರುವ ಎಲ್ಲಾ ಅದ್ಭುತವಾದ ಆಶೀರ್ವಾದಗಳು ನಮ್ಮವುಗಳಾಗಿವೆ. ದೇವರ ವಾಕ್ಯದ ಬೀಜವು ತನ್ನ ಅದ್ಭುತವಾದ ಶಕ್ತಿಯನ್ನು ನಮ್ಮ ಜೀವಿತಗಳೊಳಗೆ ಬಿಡುಗಡೆ ಮಾಡಿದಾಗ ಇವೆಲ್ಲವು ಮತ್ತು ಇನ್ನೂ ಹೆಚ್ಚಿನವುಗಳು ಕೂಡಲೇ ನಮ್ಮವುಗಳಾದವು.

ದೇವರ ವಾಕ್ಯದ ಬೀಜವು ನಮ್ಮಲ್ಲಿ ಕಾರ್ಯಮಾಡುವ ತನ್ನ ಯಾವುದೇ ಶಕ್ತಿ ಅಥವಾ ಸಾಮರ್ಥ್ಯವನ್ನು ಕಳೆದುಕೊಂಡಿದೆಯೇ? ವಾಕ್ಯದ ಅದ್ಭುತ ಬೀಜಗಳಿಗೆ ನಮ್ಮ ಜೀವಿತಗಳಲ್ಲಿ ಇನ್ನು ಯಾವುದೇ ಹೆಚ್ಚಿನ ಅದ್ಭುತಗಳನ್ನು ನಡೆಸಲು ಆಗುತ್ತಿಲ್ಲವೇ? ಇಲ್ಲ, ಖಂಡಿತವಾಗಿಯೂ ಇಲ್ಲ! ಯಾಕಂದರೆ ವಾಕ್ಯವು ನಾಶವಾಗದ ಬೀಜವಾಗಿದೆ. ವಾಕ್ಯವು ಜೀವವುಳ್ಳದ್ದಾಗಿದೆ, ನೆಲೆಯಾಗುತ್ತದೆ ಮತ್ತು ನಿರಂತರವಾಗಿ ಇರುತ್ತದೆ. ದೇವರು ನಮಗೆ ಹೇಳಿರುವ ಪ್ರತಿಯೊಂದು ಮಾತು ನಮ್ಮ ಜೀವಿತಗಳಲ್ಲಿ ಫಲವನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿದೆ.

ದೇವರ ವಾಕ್ಯವು ಉಂಟುಮಾಡುವದಕ್ಕಾಗಿಯೇ ರೂಪಿಸಲ್ಪಟ್ಟಿದೆ

ಯೆಶಾಯ 55:10,11

10 "ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸಿರುಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸಿದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವದಿಲ್ಲವೋ,

11 ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ.

ನನ್ನ ಬಾಯಿಂದ ಹೊರಟ ಮಾತು ವ್ಯರ್ಥವಾಗಿ ಹಿಂದಿರುಗುವದಿಲ್ಲ ಎಂದು ದೇವರು ಹೇಳಿದ್ದಾನೆ. ಬದಲಾಗಿ, ಆತನ ಇಷ್ಟಾರ್ಥವನ್ನು ಮತ್ತು ಉದ್ದೇಶಗಳನ್ನು ನೆರವೇರಿಸುತ್ತದೆ.

ಯೆಶಾಯ 55:10,11 ವಚನಗಳಿಂದ ನಾವು ನಾಲ್ಕು ಸರಳವಾದ ಒಳನೋಟಗಳನ್ನು ತಿಳಿದುಕೊಳ್ಳಬಹುದು.

1) ದೇವರ ವಾಕ್ಯವು ನಿರ್ಮಾಣ ಮಾಡುವದಕ್ಕಾಗಿಯೇ ರೂಪಿಸಲ್ಪಟ್ಟಿದೆ (ಅಥವಾ ನೆರವೇರಿಸುವದಕ್ಕಾಗಿಯೇ ರೂಪಿಸಲ್ಪಟ್ಟಿದೆ).

2) ದೇವರ ವಾಕ್ಯವು ದೇವರ ಇಷ್ಟಾರ್ಥವನ್ನು ಮತ್ತು ಆತನ ಉದ್ದೇಶಗಳನ್ನು ನೆರವೇರಿಸುತ್ತದೆ.

3) ದೇವರು ತನ್ನ ಉದ್ದೇಶ ಮತ್ತು ಇಷ್ಟವನ್ನು ನೆರವೇರಿಸಲು ಬಯಸುವಾಗ, ತನ್ನ ವಾಕ್ಯವನ್ನು ಆತನು ಹೇಳುತ್ತಾನೆ.

4) ದೇವರ ವಾಕ್ಯವು ದೇವರ ಉದ್ದೇಶ ಮತ್ತು ಇಷ್ಟಾರ್ಥವನ್ನು ಪ್ರಕಟಪಡಿಸುತ್ತದೆ.

ದೇವರು ಹೇಳುವ (ಮತ್ತು ಹೇಳಿರುವ ಮಾತುಗಳು) ವ್ಯರ್ಥವಾದ ಮಾತುಗಳಲ್ಲ. ಅವುಗಳು ದೇವರ ಸರ್ವಶಕ್ತಿಯಿಂದ ತುಂಬಿದ ಪದಗಳಾಗಿವೆ. ಅವುಗಳು ನಿರ್ಮಾಣ ಮಾಡುವದಕ್ಕಾಗಿಯೇ ರೂಪಿಸಲ್ಪಟ್ಟಿವೆ. ಬೀಜದ ಹಾಗೆ, ದೇವರು ಹೇಳಿರುವ ಪ್ರತಿಯೊಂದು ಮಾತು ನೆರವೇರುವಿಕೆಯನ್ನು ತರುವ ಅಸಾಧಾರಣವಾದ ಸಾಮರ್ಥ್ಯದಿಂದ ತುಂಬಿದೆ.

ದೇವರು ತನಗೆ ಇಷ್ಟವಾಗುವದನ್ನು ಮತ್ತು ಭೂಮಿಯ ಮೇಲೆ ಆತನು ಉದ್ದೇಶಿಸಿರುವದನ್ನು ಉಂಟುಮಾಡುವದಕ್ಕಾಗಿ ತನ್ನ ವಾಕ್ಯವನ್ನು ರೂಪಿಸಿದ್ದಾನೆ. ಯಾಕಂದರೆ ದೇವರು ತನ್ನ ಜನರನ್ನು ಆಶೀರ್ವದಿಸಬೇಕೆಂದು ಉದ್ದೇಶಿಸಿದ್ದಾನೆ (ಕೀರ್ತನೆಗಳು 3:8), ಆತನ ವಾಕ್ಯವು ಅದನ್ನು ನೆರವೇರಿಸುತ್ತದೆ. ದೇವರು ಜನರನ್ನು ಗುಣಪಡಿಸಬೇಕೆಂದು ಉದ್ದೇಶಿಸಿದ್ದಾನೆ (ವಿಮೋಚನಕಾಂಡ 15:26; ವಿಮೋಚನಕಾಂಡ 23:25). ಆದ್ದರಿಂದ, ಆತನ ವಾಕ್ಯವು ಅನಾರೋಗ್ಯದಲ್ಲಿರುವವರಿಗೆ ಸ್ವಸ್ಥತೆಯನ್ನು ಉಂಟುಮಾಡುತ್ತದೆ (ಕೀರ್ತನೆಗಳು 107:20). ತನ್ನ ಜನರು ತಮ್ಮ ಜೀವಿತಗಳಿಗಾಗಿ ಜ್ಞಾನ, ತಿಳುವಳಿಕೆ ಮತ್ತು ಮಾರ್ಗದರ್ಶನವನ್ನು ಹೊಂದಬೇಕೆಂದು ಉದ್ದೇಶಿಸಿದ್ದಾನೆ (ಯೆಶಾಯ 48:17; ಕೀರ್ತನೆಗಳು 32:8) ಆದ್ದರಿಂದ, ಆತನ ವಾಕ್ಯವು ಆತನ ಉದ್ದೇಶವನ್ನು ನೆರವೇರಿಸುತ್ತದೆ. ಆತನು ಉದ್ದೇಶಿಸಿರುವ, ಯೋಚಿಸಿರುವ, ಅಂದುಕೊಂಡಿರುವ ಮತ್ತು ಬಯಸಿರುವ ಎಲ್ಲವುಗಳನ್ನು ನೆರವೇರಿಸುತ್ತದೆ.

ಕರ್ತನಾದ ದೇವರು ಪರಲೋಕದಲ್ಲಿದ್ದಾನೆ. ಮತ್ತು ಆತನು ಭೂಮಿಯ ಮೇಲೆ ತನ್ನ ಉದ್ದೇಶ ಮತ್ತು ಇಷ್ಟವನ್ನು ನೆರವೇರಿಸಲು ಬಯಸುವಾಗ, ಆತನು ತನ್ನ ವಾಕ್ಯವನ್ನು ಬಿಡುಗಡೆ ಮಾಡುತ್ತಾನೆ. ಹೇಳಲಾಗುವ ಈ ವಾಕ್ಯವೇ ಅದ್ಭುತ ಬೀಜವಾಗಿದೆ. ಇದು ದೇವರ ಉದ್ದೇಶವನ್ನು ನೆರವೇರಿಸುತ್ತದೆ. ಆತನ ಜನರಾದ ನಾವು, ಇಲ್ಲಿ ಭೂಮಿಯ ಮೇಲೆ ಇದ್ದೇವೆ. ನಾಶವಾಗದಿರುವ ಆತನ ವಾಕ್ಯದ ಶಕ್ತಿ ಮತ್ತು ಆತನ ಆತ್ಮನ ಕಾರ್ಯದ ಮೂಲಕ, ದೇವರು ನಮ್ಮ ಜೀವಿತಗಳಲ್ಲಿ ಆತನಿಗೆ ಇಷ್ಟವಾದವುಗಳನ್ನು ಮತ್ತು ಉದ್ದೇಶಗಳನ್ನು ನೆರವೇರಿಸುತ್ತಾನೆ.

ನಂಬುವವರಾದ ನಿಮ್ಮಲ್ಲಿ ವಾಕ್ಯವು ಪರಿಣಾಮಕಾರಿಯಾಗಿ ಕಾರ್ಯಮಾಡುತ್ತದೆ

1 ಥೆಸಲೋನಿಕದವರಿಗೆ 2:13

ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿ ಮಾಡುತ್ತೇವೆ. ಅದು ನಿಜವಾಗಿಯೂ ದೇವರ ವಾಕ್ಯವೇ; ಅದು ನಂಬುವವರಾದ ನಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ.

ದೇವರು ತನ್ನ ವಾಕ್ಯವನ್ನು ಮಾನವರ ಜೀವಿತಗಳೊಳಗೆ ತನ್ನ ಶಕ್ತಿಯನ್ನು ಹೊತ್ತುಕೊಂಡು ಹೋಗುವ ವಾಹಕದ ರೀತಿಯಲ್ಲಿ ರೂಪಿಸಿದ್ದಾನೆ. ಅಪೊಸ್ತಲನಾದ ಪೌಲನು ಥೆಸಲೋನಿಕದವರಿಗೆ ಬರೆದಿರುವ ಪತ್ರಿಕೆಯಲ್ಲಿ ದೇವರ ವಾಕ್ಯವು ಅದನ್ನು ನಂಬುವವರ ಜೀವಿತದಲ್ಲಿ ತನ್ನ ದೈವೀಕ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ ಮತ್ತು ಬಲವಾಗಿ ಕಾರ್ಯಮಾಡುತ್ತದೆ ಎಂದು ವಿವರಿಸುತ್ತಾನೆ. *"ಬಲವಾಗಿ ಕಾರ್ಯಮಾಡುತ್ತದೆ"* ಎಂಬ ಪದಗಳು *'ಎನರ್ಜಿಯೊ'* ಎಂಬ ಗ್ರೀಕ್ ಪದವಾಗಿದ್ದು ಬಲವಾಗಿ ಕಾರ್ಯಮಾಡುವಂತೆ ತನ್ನೊಳಗಿಂದ ಬಿಡುಗಡೆಗೊಳಿಸುವ ದೈವೀಕ ಶಕ್ತಿ ಅಥವಾ ಅಸಾಧಾರಣವಾದ ಶಕ್ತಿಯನ್ನು ಸೂಚಿಸುತ್ತದೆ. ಆಂಪ್ಲಿಫೈಡ್ ಬೈಬಲ್ ಪ್ರಕ್ಷೇಪವಾಗಿರುವ ಈ ಉಪದೇಶದನ್ನು ಸೇರಿಸಿದೆ, *"[ನಂಬುವವರಲ್ಲಿ ಅದರ ಅಂತರ್ಗತ, ಅಸಾಧಾರಣವಾದ ಶಕ್ತಿಯನ್ನು ಅಭ್ಯಾಸ ಮಾಡುತ್ತದೆ]"* (1 ಥೆಸಲೋನಿಕದವರಿಗೆ 2:13 ಆಂಪ್ಲೀಫೈಡ್ ಬೈಬಲ್ ಕ್ಲಾಸಿಕ್ ಎಡಿಷನ್ ಇಂಗ್ಲೀಷ್ ಬೈಬಲ್). ನಾವು ದೇವರ ವಾಕ್ಯವನ್ನು ಅಂಗೀಕರಿಸಿಕೊಳ್ಳುವಾಗ ಮತ್ತು ಅದನ್ನು ನಂಬುವಾಗ ಅದು ನಮ್ಮ ಜೀವಿತಗಳೊಳಗೆ ದೇವರ

ಅಸಾಧಾರಣವಾದ ಶಕ್ತಿಯನ್ನು ಬಿಡುಗಡೆ ಮಾಡುತ್ತದೆ.

ಶಾಸ್ತ್ರದಲ್ಲಿರುವ ದೇವರ ಪ್ರತಿಯೊಂದು ಮಾತು ಅದ್ಭುತ ಬೀಜವಾಗಿದ್ದು ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿ ದೇವರ ಕಾರ್ಯಗಳನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿದೆ. ಪ್ರತಿಯೊಂದು ಬೀಜವು ಅದರ ಜಾತಿಗನುಸಾರ ಹುಟ್ಟಿಸುವದರಿಂದ (ಆದಿಕಾಂಡ 1:11,12), ದೇವರಿಂದ ಬರುವ ಪ್ರತಿಯೊಂದು ಮಾತು ಏನನ್ನು ನಿರ್ಮಿಸಲು ರೂಪಿಸಲ್ಪಟ್ಟಿದೆಯೋ ಅದನ್ನೇ ನಿರ್ಮಿಸುತ್ತದೆ. ಸ್ವಸ್ಥತೆಯ ವಿಷಯವಾಗಿರುವ ದೇವರ ವಾಕ್ಯ ಸ್ವಸ್ಥತೆಯನ್ನು ಉಂಟುಮಾಡುತ್ತದೆ. ಆಶೀರ್ವಾದ ಮತ್ತು ಸಮೃದ್ಧಿಯ ವಿಷಯವಾಗಿರುವ ದೇವರ ವಾಕ್ಯವು ಆಶೀರ್ವಾದ ಮತ್ತು ಸಮೃದ್ಧಿಯನ್ನು ಉಂಟುಮಾಡುತ್ತದೆ. ಜೀವನದ ಪ್ರತಿಯೊಂದು ಕ್ಷೇತ್ರದ ವಿಷಯವಾಗಿರುವ ದೇವರ ವಾಕ್ಯವು ನಮ್ಮ ಜೀವಿತದ ಆಯಾ ಕ್ಷೇತ್ರದಲ್ಲಿಯೇ ಉಂಟುಮಾಡುತ್ತದೆ.

ದೇವರ ವಾಕ್ಯದ ಕುರಿತು ಈ ವಾಸ್ತವವನ್ನು ಹೇಳುವದರಲ್ಲಿ, ಕೇವಲ ಶಾಸ್ತ್ರದ ಆಯ್ದ ಭಾಗಗಳು ಮಾತ್ರವಲ್ಲ-ದೇವರ ವಾಕ್ಯವನ್ನು ಪೂರ್ತಿಯಾಗಿ ಕೇಳಿಸಿಕೊಳ್ಳುವ ಮತ್ತು ಅದಕ್ಕೆ ವಿಧೇಯರಾಗಿ ನಡೆದುಕೊಳ್ಳುವ ತತ್ವವೂ ಇದೆ ಎಂಬದಾಗಿ ನಾವು ನಿಮಗೆ ಜ್ಞಾಪಕಪಡಿಸಬೇಕಾಗಿದೆ. ಜೀವನ, ಆರೋಗ್ಯ, ಆಶೀರ್ವಾದ ಮತ್ತು ಸಂಪೂರ್ಣ ಯೋಗಕ್ಷೇಮವನ್ನು ದೇವರ ಇಡೀ ಸಲಹೆಯನ್ನು ಕೇಳಿಸಿಕೊಂಡು ಅವುಗಳಿಗೆ ವಿಧೇಯರಾಗುವವರಿಗೆ ವಾಗ್ದಾನ ಮಾಡಲಾಗಿದೆ (ಜ್ಞಾನೋಕ್ತಿಗಳು 3:1,2,7,8; ಜ್ಞಾನೋಕ್ತಿಗಳು 4:20-22).

5
ಬೀಜವನ್ನು ಹೃದಯದೊಳಗೆ ಬಿತ್ತಬೇಕು

ಹೃದಯವೆಂಬ ನೆಲ

ಮಾರ್ಕ 4:14,15

14 ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ.
15 ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು ತೆಗೆದುಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವವರು.

ಮೂರು ಸುವಾರ್ತೆಗಳಲ್ಲಿರುವ ಬಿತ್ತುವವನ ಸಾಮ್ಯದ ದಾಖಲೆಗಳು, ವಾಕ್ಯವೆಂಬ ಬೀಜವನ್ನು ಹೃದಯದೊಳಗೆ ಬಿತ್ತಲಾಯಿತು ಎಂಬದನ್ನು ಸ್ಪಷ್ಟವಾಗಿ ಹೇಳುತ್ತವೆ (ಮತ್ತಾಯ 13:19; ಮಾರ್ಕ 4:15; ಲೂಕ 8:12). ದೇವರ ವಾಕ್ಯವೆಂಬ ಬೀಜವನ್ನು ಹೃದಯವೆಂಬ ನೆಲದಲ್ಲಿ ಬಿತ್ತಬೇಕಾಗಿದೆ.

ವೈನ್ಸ್ ಕಂಪ್ಲೀಟ್ ಎಕ್ಸ್ಪೊಸಿಟರಿ ಡಿಕ್ಷನರಿ ಆಫ್ ನ್ಯೂ ಟೆಸ್ಟಮೆಂಟ್ ವರ್ಡ್ಸ್ ಪ್ರಕಾರ, "ಹೃದಯವು," *"ನೈತಿಕ ಸ್ವಭಾವ ಮತ್ತು ಆತ್ಮೀಕ ಜೀವನದ ಆಸನ, ದುಃಖ, ಬಯಕೆಗಳು, ಅಕ್ಕರೆಗಳು, ಗ್ರಹಿಕೆಗಳು, ಆಲೋಚನೆಗಳು, ತಿಳುವಳಿಕೆ, ತಾರ್ಕಿಕ ಶಕ್ತಿಗಳು, ಊಹೆ, ಉದ್ದೇಶಗಳು, ಗುರಿ, ಚಿತ್ತ ಮತ್ತು ನಂಬಿಕೆಯ ಆಸನವನ್ನು"* ಪ್ರತಿನಿಧಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ ನೈತಿಕ ವ್ಯಕ್ತಿಯ ವೈಯಕ್ತಿಕವನ್ನು ಸೂಚಿಸುತ್ತಾ, ಹೃದಯ ಎಂಬ ಪದವನ್ನು ಉಪಯೋಗಿಸಿರುವದು *"ಭಾವನೆಗಳು, ಕಾರಣ ಮತ್ತು ಚಿತ್ತವನ್ನು"* ಒಳಗೊಂಡಿದೆ. ಹೊಸ ಒಡಂಬಡಿಕೆಯು ಆತ್ಮ (*'ನ್ಯೂಮ'*) ಮತ್ತು ಪ್ರಾಣ (*'ಸೂಕೆ'*) ನಡುವೆ ವ್ಯತ್ಯಾಸವನ್ನು ತಿಳಿಸುತ್ತದೆ, "ಹೃದಯ" ಎಂಬ ಪದವನ್ನು ಆಗಾಗ ಆತ್ಮ ಮತ್ತು ಪ್ರಾಣ (ಇಬ್ರಿಯರಿಗೆ 4:12) ಎರಡನ್ನೂ ಸೇರಿಸಿಕೊಳ್ಳಲು ವ್ಯಾಪಕ ಅರ್ಥದಲ್ಲಿ ಉಪಯೋಗಿಸಲಾಗಿದೆ. ಹೃದಯವು ಆಂತರ್ಯ ವ್ಯಕ್ತಿ, ಮರೆಯಾಗಿರುವ ಮನುಷ್ಯನನ್ನು (1 ಪೇತ್ರನು 3:4) ಅಥವಾ ನಿಜವಾದ ಮನುಷ್ಯನನ್ನು ಪ್ರತಿನಿಧಿಸುತ್ತದೆ. ಆದ್ದರಿಂದ, ಹೃದಯದಲ್ಲಿ ವಾಕ್ಯವು ಬಿತ್ತಲ್ಪಟ್ಟಿದೆ ಅಂದರೆ, ಆಂತರ್ಯದಲ್ಲಿರುವ ವ್ಯಕ್ತಿ, ವ್ಯಕ್ತಿಯ ಆತ್ಮ ಮತ್ತು ಪ್ರಾಣ, ಮೂಲವಾಗಿರುವ ವ್ಯಕ್ತಿ ವಾಕ್ಯವನ್ನು ಅಂಗೀಕರಿಸಿಕೊಳ್ಳಬೇಕು

ಎಂದರ್ಥ. ವಾಕ್ಯವನ್ನು ನಮ್ಮ ನಂಬಿಕೆ, ವಿಶ್ವಾಸ, ಅಕ್ಕರೆಗಳು, ಗ್ರಹಿಕೆಗಳು, ಆಲೋಚನೆಗಳು, ತಿಳುವಳಿಕೆ, ತಾರ್ಕಿಕತೆ, ಊಹೆ, ಉದ್ದೇಶಗಳು, ಗುರಿ ಮತ್ತು ಚಿತ್ತದ ರಂಗದಲ್ಲಿ ಅಂಗೀಕರಿಸಿಕೊಳ್ಳಬೇಕು.

ಬೇರೂರಿರುವ ವಾಕ್ಯ

ಯಾಕೋಬನು 1:21

ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ.

"ಬೇರೂರಿರುವ" ಎಂಬ ಪದ ಬೀಜವು ತಾನಾಗಿಯೇ ಬೇರು ಬಿಡುವ, ಒಳಗೆ ಬೆಳೆಯುವ, ಜನ್ಮಸಿದ್ಧವಾಗಿರುವ, ನೆಲದಲ್ಲಿ ಆಳವಾಗಿ ಬೇರು ಬಿಟ್ಟಿರುವ ಎಂಬ ಆಲೋಚನೆಗಳನ್ನು ಹೊಂದಿದೆ. ನೆಲದ ಮೇಲೆ ಬೀಳುವ ಬೀಜದಂತಿರುವ, ವಾಕ್ಯವು, ಹೃದಯದೊಳಗೆ ಕಾರ್ಯಮಾಡುತ್ತದೆ. ಅದು ಹೃದಯದ ಮಣ್ಣಿನೊಳಗೆ ಹೋಗುತ್ತದೆ, ಬೇರು ಬಿಡುತ್ತದೆ ಮತ್ತು ನಂತರ, ಆತ್ಮದ ಮೇಲೆ ಪರಿಣಾಮ ಬೀರುತ್ತಾ ಚಿಗುರೊಡೆಯುತ್ತದೆ. ಇದು, ಮತ್ತೊಮ್ಮೆ, ಸತ್ಯವನ್ನು ಒತ್ತಿ ಹೇಳುವದೇನೆಂದರೆ ವಾಕ್ಯವನ್ನು ಆಂತರ್ಯದ ವ್ಯಕ್ತಿಯೊಳಗೆ ಅಂಗೀಕರಿಸಿಕೊಳ್ಳಬೇಕು ಮತ್ತು ಬೇರೂರುವ ಹಾಗೂ ಒಳಗೆ ಆಳವಾಗಿ ಬೇರೂರುವ ಪ್ರಕ್ರಿಯೆಯನ್ನು ಹಾದುಹೋಗಲು ಅನುಮತಿಸಬೇಕು.

ನಿಮ್ಮ ಹೃದಯದೊಳಗೆ

ಜ್ಞಾನೋಕ್ತಿಗಳು 4:20-23

20 ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು.

21 ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ, ಅವುಗಳನ್ನು ನಿನ್ನ ಹೃದಯದೊಳಗೆ ಇಟ್ಟುಕೋ.

22 ಅವುಗಳನ್ನು ಹೊಂದುವವರಿಗೆ ಅವು ಜೀವವು. ದೇಹಕ್ಕೆಲ್ಲಾ ಅವೇ ಆರೋಗ್ಯವು.

23 ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು.

ದೇವರ ವಾಕ್ಯವನ್ನು ನಮ್ಮ ಹೃದಯಗಳೊಳಗೆ ಅಂಗೀಕರಿಸಿಕೊಳ್ಳುವ ಸತ್ಯವು ಕೇವಲ ಹೊಸ ಒಡಂಬಡಿಕೆಯ ಪ್ರಕಟನೆಯಲ್ಲ. ಹಳೆ ಒಡಂಬಡಿಕೆಯಲ್ಲಿಯೂ ದೇವರು ತನ್ನ ಜನರಿಗೆ ನನ್ನ ವಾಕ್ಯವನ್ನು ನಿಮ್ಮ ಹೃದಯಗಳಲ್ಲಿ ಇಟ್ಟುಕೊಳ್ಳಿರಿ ಎಂಬದಾಗಿ ಹೇಳಿದ ಉದಾಹರಣೆಗಳನ್ನು

ನಾವು ನೋಡಬಹುದು. *"ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು"* (ಧರ್ಮೋಪದೇಶಕಾಂಡ 6:6; ಹಾಗೆಯೇ ಧರ್ಮೋಪದೇಶಕಾಂಡ 11:18 ಸಹ ನೋಡಿರಿ). ಕೀರ್ತನೆಗಾರನು ಹೇಳಿರುವದೇನೆಂದರೆ, *" ... ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ."* (ಕೀರ್ತನೆಗಳು 119:11).

ಜ್ಞಾನೋಕ್ತಿಗಳು 4:20-23ರಲ್ಲಿರುವ ವಚನಭಾಗವು ದೇವರ ವಾಕ್ಯಕ್ಕೆ ಅದರ ಹಕ್ಕುಬದ್ಧವಾದ ಸ್ಥಾನವನ್ನು ನಮ್ಮ ಹೃದಯಗಳೊಳಗೆ ಕೊಡಲು ಶಕ್ತವಾದ ಕರೆಯಾಗಿದೆ.

ನನ್ನ ಮಾತುಗಳನ್ನು ಆಲಿಸು-ನಮ್ಮ ಗಮನಕ್ಕಾಗಿ ಕೂಗಾಡುವ ಎಲ್ಲವುಗಳಿಗಿಂತ ಹೆಚ್ಚಾಗಿ, ನಾವು ಉದ್ದೇಶಪೂರ್ವಕವಾಗಿಯೇ ದೇವರ ವಾಕ್ಯಕ್ಕೆ ಎಚ್ಚರಿಕೆಯಿಂದ ಗಮನ ಕೊಡುವ ಆಯ್ಕೆಯನ್ನು ಮಾಡಿಕೊಂಡಿದ್ದೇವೆ. ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ, ದೇವರ ವಾಕ್ಯವು ಆ ವಿಷಯದ ಬಗ್ಗೆ ಏನು ಹೇಳುತ್ತದೆ ಎಂಬದರೊಂದಿಗೆ ಪ್ರಾರಂಭಿಸುವ ಆಯ್ಕೆಯನ್ನು ನಾವು ಮಾಡಿಕೊಳ್ಳುತ್ತೇವೆ. ನಾವು ದೇವರ ವಾಕ್ಯಕ್ಕೆ ಅತಿ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಅದುವೇ ದೇವರ ವಾಕ್ಯಕ್ಕೆ ಗಮನ ಕೊಡುವದಾಗಿದೆ.

ನನ್ನ ನುಡಿಗಳಿಗೆ ಕಿವಿಗೊಡು-ಅಸಂಖ್ಯವಾದ ಇತರೆ ಧ್ವನಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವಾಗ, ನಾವು ದೇವರ ಕಡೆಗೆ ಒರಗಿಕೊಂಡು ಆತನು ಹೇಳಲು ಬಯಸುವದನ್ನು ಕೇಳಿಸಿಕೊಳ್ಳುತ್ತೇವೆ. ನಾವು ದೇವರ ಸ್ವರವನ್ನು ಆಲಿಸಲು, ಅಡ್ಡಿಪಡಿಸುವ ಧ್ವನಿಗಳನ್ನು ತೆಗೆದುಹಾಕುತ್ತೇವೆ.

ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ-ನಾವು ದೇವರ ವಾಕ್ಯದ ಮೇಲೆ ನಮ್ಮ ಎಡಬಿಡದ ಗಮನವನ್ನು ಇಡುತ್ತೇವೆ. ನಮ್ಮ ಮನಸ್ಸಿನ ಕಣ್ಣುಗಳಲ್ಲಿ ನಾವು ದೇವರ ವಾಕ್ಯದ ಚಿತ್ರಗಳನ್ನು ಬಿಡಿಸುತ್ತೇವೆ. ನಾವು ವಾಕ್ಯವನ್ನು "ನೋಡುತ್ತೇವೆ." ನಮ್ಮ ಊಹೆಯನ್ನು ತುಂಬಿಸುವಂತೆ ನಾವು ದೇವರ ವಾಕ್ಯಕ್ಕೆ ಅನುಮತಿಸುತ್ತೇವೆ.

ಅವುಗಳನ್ನು ನಿನ್ನ ಹೃದಯದೊಳಗೆ ಇಟ್ಟುಕೋ-ಅಂತಿಮವಾಗಿ ನಮ್ಮ ಹೃದಯಗಳಲ್ಲಿ ದೇವರ ವಾಕ್ಯವನ್ನು ಸಮೃದ್ಧವಾಗಿ ಹೂಡಿಕೆಮಾಡಿಕೊಂಡು,

ನಮ್ಮ ಆಂತರ್ಯದ ವ್ಯಕ್ತಿಯನ್ನು ತುಂಬಿಸಿಕೊಂಡು, ನಮ್ಮ ಎಲ್ಲಾ ಆಲೋಚನೆಗಳು, ಉದ್ದೇಶಗಳು, ಭಾವೋದ್ರೇಕಗಳು ಮತ್ತು ತಾರ್ಕಿಕತೆಗಳನ್ನು ವ್ಯಾಪಿಸಿಕೊಳ್ಳುವುದೇ ಗುರಿಯಾಗಿದೆ. ಇದರ ಫಲಿತಾಂಶವಾಗಿ ವಾಕ್ಯದ ಮೂಲಕ ನಮಗೆ ಜೀವ ಮತ್ತು ಆರೋಗ್ಯ ದೊರೆಯುತ್ತದೆ.

ಆತನ ವಾಕ್ಯದಿಂದ ನಮ್ಮ ಹೃದಯಗಳನ್ನು ತುಂಬಿಸಿಕೊಳ್ಳುವದು ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ ಹೃದಯವು, ನಮ್ಮ ಜೀವಿತಗಳಲ್ಲಿ ಏನಾಗುತ್ತದೆ ಎಂಬದಕ್ಕೆ ಮೂಲವಾಗಿದೆ, ಒರತೆಯಾಗಿದೆ. ಒಂದುವೇಳೆ ವಾಕ್ಯವು ನಮ್ಮ ಹೃದಯಗಳಲ್ಲಿ ತುಂಬಿಕೊಂಡರೆ, ವಾಕ್ಯವು ತನ್ನ ಜೀವ ಮತ್ತು ಶಕ್ತಿಯನ್ನು ನಮ್ಮ ಜೀವಿತದೊಳಗೆ ಬಿಡುಗಡೆ ಮಾಡುತ್ತದೆ. ಹೀಗೆ, ನಮ್ಮ ಜೀವಿತಗಳು ದೇವರ ವಾಕ್ಯದ ಶಕ್ತಿಯಿಂದ ಪ್ರಭಾವಿತಗೊಳ್ಳುತ್ತವೆ, ರೂಪುಗೊಳ್ಳುತ್ತವೆ ಮತ್ತು ರಚಿಸಲ್ಪಡುತ್ತವೆ.

ವಾಕ್ಯವು ನಿಮ್ಮ ಹತ್ತಿರವೇ ಇದೆ

ಧರ್ಮೋಪದೇಶಕಾಂಡ 30:11-14

11 ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದೂ ಅಲ್ಲ, ಹೊಂದುವದಕ್ಕೆ ಅಸಾಧ್ಯವಾದದ್ದೂ ಅಲ್ಲ.

12 ಇದು ಮೇಲಣ ಲೋಕದಲ್ಲಿರುವ ಮಾತಲ್ಲ, ನಮಗೋಸ್ಕರ ಮೇಲಣ ಲೋಕವನ್ನು ಏರಿ ಅದನ್ನು ತಿಳಿದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೇಳಿ ಕೈಕೊಂಡೇವು ಅಂದುಕೊಳ್ಳುವದಕ್ಕೆ ಅವಕಾಶವೇನೂ ಇಲ್ಲ.

13 ಮತ್ತು ಇದು ಸಮುದ್ರದ ಆಚೆ ಇರುವ ಮಾತಲ್ಲ. ನಮಗೋಸ್ಕರ ಸಮುದ್ರವನ್ನು ದಾಟಿ ಅದನ್ನು ತೆಗೆದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೈಕೊಂಡೇವು ಅಂದುಕೊಳ್ಳುವದಕ್ಕೆ ಆಸ್ಪದವೇನೂ ಇಲ್ಲ.

14 ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ; ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ; ಇದನ್ನು ಅನುಸರಿಸುವದಕ್ಕೆ ಅವಕಾಶವುಂಟಷ್ಟೆ.

ಒಂದುವೇಳೆ ನಾವು ಆತನ ವಾಕ್ಯವನ್ನು ನಮ್ಮ ಹೃದಯದಗಳಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿರುವದಾದರೆ ವಾಕ್ಯವು ಯಾವಾಗಲೂ ನಮಗೆ "ಸಮೀಪದಲ್ಲಿಯೇ" ಇರುತ್ತದೆ. ಹೃದಯವು ದೊಡ್ಡ ಭಂಡಾರದಂತಿದ್ದು ಅಲ್ಲಿ ನಾವು ದೇವರ ವಾಕ್ಯವನ್ನು ಸಂಗ್ರಹ ಮಾಡಬಹುದು. ಹೃದಯದಲ್ಲಿರುವದೇ ಬಾಯಲ್ಲಿ ಬರುತ್ತದೆ. ವಾಕ್ಯವು ನಮ್ಮ ಹೃದಯ ಮತ್ತು ಬಾಯಲ್ಲಿ ತುಂಬಿರುವಾಗ ನಾವು ನಿರೀಕ್ಷೆಯಿಲ್ಲದಿರುವಿಕೆ ಮತ್ತು ಹತಾಶೆಯ ಬಗ್ಗೆ ಮಾತನಾಡುವದಿಲ್ಲ. ದೇವರು ದೂರದಲ್ಲಿದ್ದಾನೆ, ಆಕಾಶದಲ್ಲಿದ್ದಾನೆ ಅಥವಾ ಸಮುದ್ರಗಳಾಚೆ

ಇದ್ದಾನೆ ಎಂಬಂತೆ ನಮ್ಮ ಮಾತುಗಳಿಂದ ನಿರೀಕ್ಷೆಯಿಲ್ಲದಿರುವಿಕೆಯನ್ನು ವ್ಯಕ್ತಪಡಿಸುವದಿಲ್ಲ. ವಾಕ್ಯವು ನಮ್ಮ ಹೃದಯಗಳಲ್ಲಿ ಮತ್ತು ಬಾಯಿಗಳಲ್ಲಿ ತುಂಬಿರುವಾಗ, ನಾವು ಅದರ ಪ್ರಕಾರ ಜೀವಿಸುತ್ತೇವೆ, ಅದು ಹೇಳುವಂತೆ ಮಾಡುತ್ತೇವೆ. ಅತ್ಯಂತ ಆಸಕ್ತಿಕರವಾದ ಸಂಗತಿ ಏನೆಂದರೆ ಅಪೊಸ್ತಲನಾದ ಪೌಲನು ಧರ್ಮೋಪದೇಶಕಾಂಡ 30:11-14 ವಾಕ್ಯಗಳನ್ನು, ಹೊಸ ಒಡಂಬಡಿಕೆಯ ವಿಶ್ವಾಸಿಗಳಾದ ನಮ್ಮನ್ನುದ್ದೇಶಿಸಿ ಮಾತನಾಡುವಾಗ ರೋಮಾಪುರದವರಿಗೆ 10:6-8ರಲ್ಲಿ ಉಪಯೋಗಿಸಿದ್ದಾನೆ. ಹೀಗಿರಲಾಗಿ, ದೇವರ ವಾಕ್ಯವು ನಮ್ಮ ಹೃದಯಗಳಲ್ಲಿ ಮತ್ತು ಬಾಯಿಗಳಲ್ಲಿ ಇರಬೇಕೆಂಬ ಪ್ರಾಮುಖ್ಯವಾದ ಸತ್ಯವನ್ನು, ಹೊಸ ಒಡಂಬಡಿಕೆಯ ವಿಶ್ವಾಸಿಗಳಾದ ನಾವು ಸಹ ಅಭ್ಯಾಸ ಮಾಡಬೇಕು.

ಧ್ಯಾನದ ಮೂಲಕ

ಹೀಗಿರುವಾಗ ದೊಡ್ಡ ಪ್ರಶ್ನೆ ಏನೆಂದರೆ ದೇವರ ವಾಕ್ಯದ ಬೀಜವನ್ನು ನಮ್ಮ ಹೃದಯಗಳಲ್ಲಿ ನಾವು ಸಮೃದ್ಧವಾಗಿ ಹೂಡಿಕೆ ಮಾಡಿಕೊಳ್ಳುವದು ಹೇಗೆ? ಬಿತ್ತುವವನ ಸಾಮ್ಯದಲ್ಲಿ, ಬೀಜ ಬಿತ್ತುವವನು ದೇವರ ವಾಕ್ಯವನ್ನು ಕೇಳಿಸಿಕೊಳ್ಳುವವನಿಗೆ ಸಮಾನಾಂತರವಾಗಿದ್ದಾನೆ. ಇದಲ್ಲದೆ ಬೀಜ ಬಿತ್ತುವದರೊಂದಿಗೆ, ಅದು ಮೊಳಕೆಯೊಡೆಯಲು ನೆಲದ ಒಳಗೆ ಹೋಗಬೇಕು ಎಂಬದು ನಮಗೆ ಗೊತ್ತಿದೆ. ಇದೇ ಪ್ರಕಾರ, ವಾಕ್ಯವು ನಮ್ಮ ಹೃದಯಗಳೊಳಗೆ ಬೇರೂರಬೇಕು. ನಾವು ಇದನ್ನು ಸಾಧ್ಯವಾಗಿಸುವುದು ಹೇಗೆ?

ಬಿತ್ತುವವನ ಸಾಮ್ಯದಲ್ಲಿ ಹೇಗೆ ಎಂದು ಹೇಳಲಾಗಿಲ್ಲವಾದರೂ, ಒಂದುವೇಳೆ ನಾವು ಶಾಸ್ತ್ರಗಳ ಉಪದೇಶದಲ್ಲಿ ಸ್ಥಿರವಾಗಿ ಉಳಿದರೆ, ದೇವರ ವಾಕ್ಯವನ್ನು ಧ್ಯಾನಿಸುವ ಅಭ್ಯಾಸದಿಂದ ಇದು ಸಾಧ್ಯ ಎಂದು ನಾವು ತಿಳಿದುಕೊಳ್ಳಬಹುದು.

ದೇವರ ವಾಕ್ಯದ ಧ್ಯಾನವು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ನಾವು ನಮ್ಮ ಹೃದಯಗಳಲ್ಲಿ ದೇವರ ವಾಕ್ಯವನ್ನು ಸಮೃದ್ಧವಾಗಿ ಹೂಡಿಕೆ ಮಾಡಿಕೊಳ್ಳಬಹುದು. ನಾವು ವಾಕ್ಯವನ್ನು ಕೇಳಿಸಿಕೊಳ್ಳುತ್ತೇವೆ ಮತ್ತು ಅಂಗೀಕರಿಸಿಕೊಳ್ಳುತ್ತೇವೆ ಆದ್ದರಿಂದ ವಾಕ್ಯವು ನಮ್ಮೊಳಗೆ ಬೇರೂರುತ್ತದೆ, ಪೋಷಣೆ ಹೊಂದುತ್ತದೆ ಮತ್ತು ನಮ್ಮ ಜೀವಿತಗಳಲ್ಲಿ ಫಲವನ್ನು ಕೊಡುತ್ತದೆ.

ದೇವರ ವಾಕ್ಯವನ್ನು ಧ್ಯಾನಿಸಲು ನಮ್ಮನ್ನು ನಾವು ಕ್ರಮಶಿಕ್ಷಣಕ್ಕೆ ಒಳಪಡಿಸಿಕೊಳ್ಳುವಾಗ ಮತ್ತು ಆತನ ವಾಕ್ಯವನ್ನು ನಮ್ಮ ಹೃದಯಗಳಲ್ಲಿ ಸಂಗ್ರಹಿಸಿಕೊಳ್ಳುವಾಗ, ಯಾವ ಸಮಯದಲ್ಲಾದರೂ ಎಲ್ಲಿ ಬೇಕಾದರೂ ಆತನ ವಾಕ್ಯಗಳಿಗೆ ಹೋಗಲು ಸಿದ್ಧರಾಗಿರಬಹುದು. ನಮ್ಮ ಬಾಯ ಮಾತುಗಳಿಂದ ನಮ್ಮ ಹೃದಯಗಳಲ್ಲಿ ಹೂಡಿಕೆಯಾಗಿರುವ ವಾಕ್ಯವನ್ನು ನಾವು ಹೊರಗೆ ತೆಗೆಯಬಹುದು. ನಾವು ಒಳಗೆ ಇಟ್ಟುಕೊಂಡಿರುವದನ್ನು ಮಾತಿನ ಮೂಲಕ ಹೊರಗೆ ಹೇಳಬಹುದು. ವಾಕ್ಯವು ನಮ್ಮ ಬಾಯಿಗಳು ಮತ್ತು ಹೃದಯಗಳನ್ನು ಆವರಿಸಿಕೊಳ್ಳುವಾಗ, ಅದು ನಮಗೆ ಬಹಳ ಸಮೀಪವಾಗುತ್ತದೆ. ಮತ್ತು ಚಕ್ರೀಯ ರೀತಿಯಲ್ಲಿ, ದೇವರ ವಾಕ್ಯವನ್ನು ನಾವು ಬಹುತೇಕ ಎಲ್ಲಿ ಬೇಕಾದರೂ ಮತ್ತು ಯಾವ ಸಮಯದಲ್ಲಾದರೂ ಧ್ಯಾನಿಸಲು ಇದು ನಮ್ಮನ್ನು ಬಲಪಡಿಸುತ್ತದೆ. ಆದ್ದರಿಂದ, ನಾವು ಯಾವುದೇ ಅಡೆಚಣೆಯಿಲ್ಲದ, ಒಂದು ಕಡೆ ಕೂತುಕೊಂಡು ನಮ್ಮ ಸತ್ಯವೇದವನ್ನು ತೆರೆದು ಧ್ಯಾನಿಸಲು ಏಕಾಂತವಾದ ಸ್ಥಳವನ್ನು ಬಯಸುತ್ತೇವೆ. ಆದರೂ, ಒಂದುವೇಳೆ ನಾವು ನಮ್ಮ ಹೃದಯಗಳಲ್ಲಿ ಆತನ ವಾಕ್ಯವನ್ನು ತುಂಬಿಸಿಕೊಂಡಿದ್ದರೆ, ಎಲ್ಲಿ ಬೇಕಾದರೂ, ಜನಜಂಗುಳಿ ಇರುವ ಬೀದಿಯಲ್ಲಿ ನಡೆದು ಹೋಗುತ್ತಿರುವಾಗಲೂ ಅಥವಾ ಹೆದ್ದಾರಿಯಲ್ಲಿ ವಾಹನ ಚಾಲನೆ ಮಾಡುತ್ತಿರುವಾಗಲೂ ವಾಕ್ಯವನ್ನು ಧ್ಯಾನಿಸಲು ನಮಗೆ ಸಾಧ್ಯವಾಗುತ್ತದೆ.

ಮುಂದಿನ ಅಧ್ಯಾಯದಲ್ಲಿ, ದೇವರ ವಾಕ್ಯವನ್ನು ಧ್ಯಾನಿಸುವ ಸತ್ಯವೇದಾನುಸಾರವಾದ ಪ್ರಕ್ರಿಯೆಯನ್ನು ಆಳವಾಗಿ ನೋಡಿಕೊಳ್ಳೋಣ.

6
ದೇವರ ವಾಕ್ಯವನ್ನು ಧ್ಯಾನಿಸುವದು

ಹಿಂದಿನ ಅಧ್ಯಾಯಗಳಲ್ಲಿ ದೇವರ ವಾಕ್ಯವು ನಮ್ಮ ನಂಬಿಕೆಗೆ ಮೂಲ ಮತ್ತು ಅಡಿಪಾಯವಾಗಿದೆ ಎಂಬದನ್ನು ನಾವು ಒತ್ತಿಹೇಳಿದ್ದೇವೆ. ನಾವು ದೇವರ ವಾಕ್ಯದ ಶುದ್ಧತೆ ಮತ್ತು ಶಕ್ತಿಯನ್ನು ಪರೀಕ್ಷಿಸಿದ್ದೇವೆ. ದೇವರ ವಾಕ್ಯವು ದೇವರ ಶಕ್ತಿಯಿಂದ ತುಂಬಿದೆ ಮತ್ತು ಆ ಶಕ್ತಿಯು ನಮ್ಮ ಜೀವಿತಗಳಲ್ಲಿ ಬಿಡುಗಡೆಯಾಗುತ್ತದೆ ಎಂಬದನ್ನು ನಾವು ಪ್ರಸ್ತುತಪಡಿಸಿದ್ದೇವೆ. ದೇವರ ವಾಕ್ಯವು ಬೀಜದಂತಿದ್ದು, ನಮ್ಮ ಹೃದಯಗಳಲ್ಲಿ ಬಿತ್ತಲ್ಪಟ್ಟು ಪೋಷಿಸಲ್ಪಡುವಾಗ, ತನ್ನ ರೂಪಾಂತರದ ಶಕ್ತಿಯನ್ನು ನಮ್ಮ ಜೀವಿತಗಳಲ್ಲಿ ಬಿಡುಗಡೆ ಮಾಡುತ್ತದೆ ಎಂಬ ವಾಸ್ತವವನ್ನು ಸಹ ನಾವು ಅರ್ಥಮಾಡಿಕೊಂಡಿದ್ದೇವೆ. ಈಗ ನಾವು ದೇವರ ವಾಕ್ಯವನ್ನು ಧ್ಯಾನ ಮಾಡುವ ಕ್ರಮಶಿಕ್ಷಣವನ್ನು ಮತ್ತಷ್ಟು ವಿವರವಾಗಿ ನೋಡಿಕೊಳ್ಳೋಣ. ಧ್ಯಾನ ಎಂಬದು ಒಂದು ಪ್ರಕ್ರಿಯೆಯಾಗಿದ್ದು ಅದರ ಮೂಲಕ ನಾವು ದೇವರ ವಾಕ್ಯವನ್ನು ನಮ್ಮ ಹೃದಯಗಳಲ್ಲಿ ಬಿತ್ತುತ್ತೇವೆ ಮತ್ತು ಪೋಷಿಸಿಕೊಳ್ಳುತ್ತೇವೆ.

ಸಹಜವಾಗಿ, ನಾವು "ಧ್ಯಾನ" ಎಂಬ ಪದವನ್ನು ಹೇಳುವಾಗ, ಸಾಮಾನ್ಯವಾಗಿ ತಪಸ್ವಿಗಳಿಗಿರುವ ಕೆಲವು ಅತೀಂದ್ರಿಯ ಅಭ್ಯಾಸವಾಗಿರಬಹುದು ಎಂದು ಜನರು ಯೋಚಿಸುತ್ತಾರೆ. ಬಹುಶಃ ಇದರ ನಿಮಿತ್ತವಾಗಿಯೇ ಸಭೆಯು, ಸಾಮಾನ್ಯವಾಗಿ, ಧ್ಯಾನದ ಅಭ್ಯಾಸಕ್ಕೆ ಒತ್ತು ಕೊಡುವದಿಲ್ಲ. ಲೋಕದಾದ್ಯಂತವಿರುವ ಅನೇಕ ಸಂಸ್ಕೃತಿಗಳು ಧ್ಯಾನದ ಪ್ರಕ್ರಿಯೆಯಲ್ಲಿ ತಮ್ಮದೇ ಸ್ವಂತ ಭಿನ್ನತೆಗಳನ್ನು ಹೊಂದಿರುವದು ಸತ್ಯವಾಗಿದೆಯಾದರೂ, ನಮ್ಮ ಗುರಿ ಏನೆಂದರೆ ಧ್ಯಾನಕ್ಕೆ ಸತ್ಯವೇದಾನುಸಾರವಾದ ವಿಧಾನವನ್ನು ಪ್ರಸ್ತುತಪಡಿಸುವದೇ ಆಗಿದೆ. ವಿಶ್ವಾಸಿಗಳಾಗಿ, ನಾವು ಇದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ನಮ್ಮ ನಂಬಿಕೆಯ ನಡಿಗೆಯಲ್ಲಿ ಈ ಕ್ರಮಶಿಕ್ಷಣವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.

ಧ್ಯಾನ–ಸತ್ಯವೇದಾನುಸಾರವಾದ ಕ್ರಮಶಿಕ್ಷಣ

ಆದಿಕಾಂಡ 24:63a

ಅವನು [ಇಸಾಕನು] ಸಂಜೇವೇಳೆಯಲ್ಲಿ ಧ್ಯಾನಮಾಡುವದಕ್ಕೋಸ್ಕರ ಅಡವಿಗೆ ಹೋಗಿದ್ದಾಗ ...

ಸತ್ಯವೇದದಲ್ಲಿ "ಧ್ಯಾನ" ಎಂಬ ಪದ ಮೊದಲನೆಯದಾಗಿ ಬರೆಯಲ್ಪಟ್ಟಿರುವದು ಆದಿಕಾಂಡ ಪುಸ್ತಕದಲ್ಲಿ ಇಸಾಕನೊಂದಿಗೆ ಸಂಬಂಧಪಟ್ಟಿದೆ. ಅವನು ಹೇಗೆ ಅಥವಾ ಯಾವ ವಿಷಯದಲ್ಲಿ ಧ್ಯಾನ ಮಾಡುತ್ತಿದ್ದನು ಎಂಬದರ ಕುರಿತು ಹೆಚ್ಚಿನ ಮಾಹಿತಿ ಇಲ್ಲವಾದರೂ, ಆದಿಕಾಲದಲ್ಲಿಯೇ ಶಾಸ್ತ್ರಗಳಲ್ಲಿ ಧ್ಯಾನವನ್ನು ಅಭ್ಯಾಸ ಮಾಡುತ್ತಿದ್ದರು ಎಂಬದನ್ನು ಗಮನಿಸಬೇಕಾದದ್ದು ಆಸಕ್ತಿಕರವಾದ ಸಂಗತಿಯಾಗಿದೆ. ಹಾಗೆಯೇ, ಇಸಾಕನು ಧ್ಯಾನ ಮಾಡಲು ಅಡವಿಗೆ ಹೋದನು ಎಂಬದು ನಮಗೆ ಹೇಳುವದೇನೆಂದರೆ ಸಹಜವಾಗಿ, ಧ್ಯಾನಕ್ಕಾಗಿ ಸೂಕ್ತವಾದ ವಾತಾವರಣವನ್ನು ನಿರ್ಮಿಸಲು ಒಬ್ಬನು ಎಲ್ಲಾ ಅಡೆತಡೆಗಳನ್ನು ಮತ್ತು ಹಸ್ತಕ್ಷೇಪಗಳನ್ನು ತೆಗೆದುಹಾಕಲು ಬಯಸುತ್ತಾನೆ.

ಯೆಹೋಶುವ 1:8

ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ.

ಧ್ಯಾನ ವಿಷಯದಲ್ಲಿ ಅತ್ಯಂತ ಪ್ರಸಿದ್ಧ ವಚನ ಎಂದರೆ ಯೆಹೋಶುವ 1:8. ಕರ್ತನು ತನ್ನ ಸೇವಕನಾದ ಮೋಶೆಯ ಮೂಲಕ ತನ್ನ ಜನರಾದ ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು. ತಮಗೆ ದೇವರ ನಿಯಮಗಳನ್ನು ಕೊಡಲಾಗಿರುವದರಿಂದ ತಾವು ಎಷ್ಟು ಸೌಭಾಗ್ಯವಂತರು ಎಂದು ಮೋಶೆ ಇಸ್ರಾಯೇಲ್ ಜನರಿಗೆ ಒತ್ತಿ ಹೇಳಿದನು. ಉದಾಹರಣೆಗೆ, ಮೋಶೆ ಇಸ್ರಾಯೇಲ್ಯರಿಗೆ ಹೇಳಿದ ಈ ಮಾತುಗಳನ್ನು ಆಲೋಚನೆ ಮಾಡಿರಿ.

ಧರ್ಮೋಪದೇಶಕಾಂಡ 4:5-8

5 ನೀವು ಸ್ವಾಧೀನಮಾಡಿಕೊಳ್ಳುವದಕ್ಕೆ ಹೋಗುವ ದೇಶದಲ್ಲಿ ಅನುಸರಿಸಬೇಕಾದ ಆಜ್ಞಾವಿಧಿಗಳನ್ನು ನನ್ನ ದೇವರಾದ ಯೆಹೋವನು ನನಗೆ ಆಜ್ಞಾಪಿಸಿದಂತೆಯೇ ನಿಮಗೆ ಬೋಧಿಸಿದ್ದೇನೆ.

6 ಇವುಗಳನ್ನು ಕೈಕೊಂಡು ಅನುಸರಿಸಿರಿ. ಅನುಸರಿಸಿದರೇ ಅನ್ಯಜನಗಳು ನಿಮ್ಮನ್ನು ಜ್ಞಾನಿಗಳೂ, ವಿವೇಕಿಗಳೂ ಎಂದು ತಿಳಿಯುವರು. ಅವರು ಈ ಆಜ್ಞೆಗಳ ವಿಷಯದಲ್ಲಿ

ವರ್ತಮಾನವನ್ನು ಕೇಳಿ–ಈ ದೊಡ್ಡ ಜನಾಂಗವು ಜ್ಞಾನ ವಿವೇಕವುಳ್ಳ ಜನಾಂಗ ಎಂದು ಮಾತಾಡಿಕೊಳ್ಳುವರು.

7 ನಾವು ನಮ್ಮ ದೇವರಾದ ಯೆಹೋವನಿಗೆ ಮೊರೆಯಿಡುವಾಗೆಲ್ಲಾ ಆತನು ಸಮೀಪವಾಗಿಯೇ ಇದ್ದಾನಲ್ಲಾ; ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಹೀಗೆ ಸಮೀಪವಾಗಿರುವನು?

8 ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಆಜ್ಞಾವಿಧಿಗಳುಳ್ಳ ಈ ಧರ್ಮಶಾಸ್ತ್ರಕ್ಕೆ ಸಮಾನವಾದದ್ದು ಬೇರೆ ಯಾವ ಜನಾಂಗಕ್ಕೆ ಉಂಟು?

ಇದರೊಂದಿಗೆ, ಕರ್ತನು ತನ್ನ ಜನರಿಗೆ ಅವರು ಆತನ ವಾಕ್ಯವನ್ನು ಅವರ ಹೃದಯಗಳೊಳಗೆ ಇಟ್ಟುಕೊಳ್ಳಬೇಕು ಮತ್ತು ಎಡೆಬಿಡದೆ ಅವುಗಳಿಗೆ ವಿಧೇಯರಾಗಬೇಕೆಂದು ತಾನು ಬಯಸುತ್ತಾನೆ ಎಂಬುದನ್ನು ಸತತವಾಗಿ ಜ್ಞಾಪಕಪಡಿಸಿದ್ದಾನೆ. ಮತ್ತೆಮತ್ತೆ, ನಾವು ಓದುವಂಥ ಹೇಳಿಕೆಗಳು ಯಾವುವೆಂದರೆ, *"ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು"* (ಧರ್ಮೋಪದೇಶಕಾಂಡ 6:6) ಮತ್ತು *"ಆದದರಿಂದ ನೀವು ಈ ನನ್ನ ಮಾತುಗಳನ್ನು ನಿಮ್ಮ ಹೃದಯದಲ್ಲಿಯೂ ಮನಸ್ಸಿನಲ್ಲಿಯೂ ಇಟ್ಟುಕೊಳ್ಳಬೇಕು..."* (ಧರ್ಮೋಪದೇಶಕಾಂಡ 11:18). ಇದೇ ಉಪದೇಶದನ್ನು ಈಗ ಮತ್ತೊಮ್ಮೆ ಯೆಹೋಶುವನಿಗೆ ಹೇಳಲಾಗಿದೆ, ಅವನು ಈಗ ಇಸ್ರಾಯೇಲಿನ ನಾಯಕತ್ವದ ಜವಾಬ್ದಾರಿಕೆಯನ್ನು ಹೊತ್ತುಕೊಂಡಿದ್ದನು. ಕರ್ತನು ಯೆಹೋಶುವನನ್ನು ನೇಮಿಸಿ, ಮೋಶೆಯ ಮೂಲಕ ಕೊಡಲಾಗಿರುವ ಧರ್ಮಶಾಸ್ತ್ರವನ್ನೆಲ್ಲಾ ಎಚ್ಚರಿಕೆಯಿಂದ ಅಭ್ಯಾಸ ಮಾಡುತ್ತಾ ಧೈರ್ಯವಾಗಿರುವಂತೆ ಮತ್ತು ಸ್ಥಿರಚಿತ್ತನಾಗಿರುವಂತೆ ಅವನಿಗೆ ಹೇಳುತ್ತಾ ಇದ್ದಾನೆ (ಯೆಹೋಶುವ 1:7). ಕರ್ತನು ನಂತರ ಯೆಹೋಶುವನಿಗೆ ವಾಕ್ಯವನ್ನು ತನ್ನ ಹೃದಯದಲ್ಲಿ ಇಟ್ಟುಕೊಳ್ಳಲು ಮತ್ತು ಅವುಗಳನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿ ಅವನು ಅದನ್ನು ಉಪಯೋಗಿಸಿಕೊಳ್ಳುವಂತೆ ಕ್ರಮಶಿಕ್ಷಣವನ್ನು ಪ್ರಸ್ತುತಪಡಿಸಿದನು. ಕರ್ತನು ಯೆಹೋಶುವನಿಗೆ ಹೇಳಿದ್ದೇನೆಂದರೆ, *"ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ ..."* (ಯೆಹೋಶುವ 1:8a).

ತನ್ನ ವಾಕ್ಯವನ್ನು ಹಗಲಿರುಳು ಧ್ಯಾನ ಮಾಡುವಂತೆ ದೇವರೇ ಯೆಹೋಶುವನಿಗೆ ಹೇಳುತ್ತಿರುವದನ್ನು ಗಮನಿಸಬೇಕಾದದ್ದು ಆಸಕ್ತಿಕರವಾದ ಸಂಗತಿಯಾಗಿದೆ. ಹಾಗಾದರೆ, ವಾಕ್ಯವನ್ನು ಧ್ಯಾನಿಸುವದು, ದೇವರೇ

ಸೂಚಿಸಿರುವ ಮತ್ತು ಪ್ರೋತ್ಸಾಹಪಡಿಸಿರುವ ಕ್ರಮಶಿಕ್ಷಣವಾಗಿದೆ. ಅದು ನಾವು ಅಭ್ಯಾಸ ಮಾಡಬೇಕೆಂದು ದೇವರು ಬಯಸುವ ಕ್ರಮಶಿಕ್ಷಣವಾಗಿದೆ.

ಪ್ರಕ್ರಿಯೆಯನ್ನು ಗಮನಿಸಿರಿ ...

1) ಧರ್ಮಶಾಸ್ತ್ರದ ಪದಗಳು ಅವನ ಮಾತಿನ ಭಾಗವಾಗಿರಬೇಕು. (*"ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ"* (ಯೆಹೋಶುವ 1:8).)

2) ಅವನು ಎಡೆಬಿಡದೆ ವಾಕ್ಯವನ್ನು ಧ್ಯಾನಿಸಬೇಕಾಗಿತ್ತು. (*"ಹಗಲಿರುಳು ಅದನ್ನು ಧ್ಯಾನಿಸು"* (ಯೆಹೋಶುವ 1:8).)

ಧ್ಯಾನವು ಶಾಸ್ತ್ರದಲ್ಲಿ ನಮಗೆ ಕೊಡಲಾಗಿರುವ ಕ್ರಮಶಿಕ್ಷಣವಾಗಿದ್ದು ನಮ್ಮ ಹೃದಯದಲ್ಲಿ (ಆತ್ಮದಲ್ಲಿ) ಮತ್ತು ಮನಸ್ಸಿನಲ್ಲಿ (ಪ್ರಾಣದಲ್ಲಿ) ದೇವರ ವಾಕ್ಯವನ್ನು ಶೇಖರಣೆ ಮಾಡಲು ನಮಗೆ ಸಹಾಯ ಮಾಡುತ್ತದೆ. ಮುಖ್ಯವಾಗಿ ಕೀರ್ತನೆಗಳಲ್ಲಿ, ಧ್ಯಾನದ ವಿಷಯವಾಗಿ ಅಸಂಖ್ಯವಾದ ಉಲ್ಲೇಖಗಳಿವೆ. ಕೀರ್ತನೆ 1 ಪ್ರಸಿದ್ಧವಾಗಿರುವ ಶಾಸ್ತ್ರದ ವಚನಭಾಗವಾಗಿದ್ದು ನೀತಿವಂತನ ಕ್ರಮಶಿಕ್ಷಣದ ಬಗ್ಗೆ ಕಲಿಸುತ್ತದೆ. ಅದು ನಮಗೆ ಹೇಳುವದೇನೆಂದರೆ ಅಂಥವನು ದುಷ್ಟರ ಆಲೋಚನೆಯಂತೆ ನಡೆಯುವದಿಲ್ಲ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳುವದಿಲ್ಲ ಮತ್ತು ಧರ್ಮನಿಂದಕರ ಚಟುವಟಿಕೆಗಳಲ್ಲಿ ಭಾಗಿಯಾಗುವದಿಲ್ಲ. *"ಆದರೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನು"* (ಕೀರ್ತನೆಗಳು 1:2). ಅವನ ನೀತಿವಂತಿಕೆಯ ಕ್ರಮಶಿಕ್ಷಣ ಮತ್ತು ಎಡೆಬಿಡದ ದೇವರ ವಾಕ್ಯದ ಧ್ಯಾನವು ಅವನನ್ನು ಫಲಭರಿತನಾಗಿರುವಂತೆ, ತಾನು ಮಾಡುವ ಕಾರ್ಯಗಳಲ್ಲಿ ಅಭಿವೃದ್ಧಿಯಾಗುವಂತೆ ಮತ್ತು ಸಫಲನಾಗುವಂತೆ ಮಾಡುತ್ತದೆ (ಕೀರ್ತನೆಗಳು 1:3).

ಶಾಸ್ತ್ರಾನುಸಾರವಾದ ಧ್ಯಾನವು ದೇವರ ವಾಕ್ಯದ ಧ್ಯಾನಕ್ಕೆ ಮಾತ್ರವೇ ಸೀಮಿತವಾಗಿರುವದಿಲ್ಲ. ನಾವು ಧ್ಯಾನಿಸಬೇಕಾಗಿರುವ ಬೇರೆ ವಿಷಯಗಳು ಅಥವಾ ಧ್ಯೇಯಗಳು ನಮಗೆ ಸಿಗುತ್ತವೆ. ಉದಾಹರಣೆಗೆ, ನಾವು ಕರ್ತನ ವಿಷಯವಾಗಿಯೇ ಧ್ಯಾನಿಸಬಹುದು. ಕರ್ತನು, ಆತನ ಸ್ವಭಾವ ಮತ್ತು ಆತನ ಗುಣಲಕ್ಷಣಗಳು ನಮ್ಮ ಧ್ಯಾನದ ಕೇಂದ್ರಬಿಂದುಗಳಾಗುತ್ತವೆ. ಇಸ್ರಾಯೇಲ್ಯರ

ಮಧುರ ಕೀರ್ತನೆಗಾರನಾದ, ದಾವೀದನು ಹೇಳಿರುವದೇನೆಂದರೆ, *"ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು"* (ಕೀರ್ತನೆಗಳು 63:6). ಮತ್ತೊಬ್ಬ ಕೀರ್ತನೆಗಾರನು ಬರೆದಿರುವದೆನೆಂದರೆ, *"ನನ್ನ ಧ್ಯಾನದಿಂದ ಆತನಿಗೆ ಮೆಚ್ಚಿಕೆಯಾಗಲಿ; ನಾನಾದರೋ ಯೆಹೋವನಲ್ಲಿ ಆನಂದಿಸುವೆನು"* (ಕೀರ್ತನೆಗಳು 104:34).

ಕರ್ತನುನಮ್ಮಜೀವಿತಗಳಲ್ಲಿಮಾಡಿರುವಅದ್ಭುತವಾದಕಾರ್ಯಗಳನ್ನೂ ನಾವು ಧ್ಯಾನಿಸಬಹುದು. ದಾವೀದನು ಹೇಳಿರುವದೇನೆಂದರೆ, *"ಹಳೇ ದಿನಗಳನ್ನು ನೆನಸಿಕೊಳ್ಳುತ್ತೇನೆ; ನಿನ್ನ ಎಲ್ಲಾ ಕಾರ್ಯಗಳನ್ನು ಧ್ಯಾನಿಸುತ್ತೇನೆ; ನಿನ್ನ ಕೈಕೆಲಸಗಳನ್ನು ಸ್ಮರಿಸುತ್ತೇನೆ"* (ಕೀರ್ತನೆಗಳು 143:5). ಇಸ್ರಾಯೇಲಿನ ಮತ್ತೊಬ್ಬ ಕೀರ್ತನೆಗಾರನಾದ, ಆಸಾಫನು ಬರೆದಿರುವದೆನೆಂದರೆ, *"ನಿನ್ನ ಕಾರ್ಯಗಳನ್ನೆಲ್ಲಾ ಧ್ಯಾನಿಸುವೆನು, ನಿನ್ನ ಪ್ರವರ್ತನೆಗಳನ್ನು ಸ್ಮರಿಸುವೆನು"* (ಕೀರ್ತನೆಗಳು 77:12). ನಾವು ಜ್ಞಾನ ಮತ್ತು ತಿಳುವಳಿಕೆಯ ವಿಷಯದಲ್ಲಿಯೂ ವಿಚಾರಮಾಡಬಹುದು ಮತ್ತು ಧ್ಯಾನಿಸಬಹುದು. ಕೀರ್ತನೆಗಾರನು ಬರೆದಿರುವದೆನೆಂದರೆ, *"ಸಕಲ ದೇಶಗಳವರೇ, ಕೇಳಿರಿ; ಭೂಲೋಕದ ನಿವಾಸಿಗಳಿರಾ, ಕಿವಿಗೊಡಿರಿ. ಜನಗಳೇ ಜನಾಧಿಪತಿಗಳೇ, ಬಡವರೇ ಬಲ್ಲಿದರೇ, ನೀವೆಲ್ಲರೂ ಒಂದಾಗಿ ಬಂದು ಆಲೈಸಿರಿ. ನನ್ನ ಬಾಯಿ ಸುಜ್ಞಾನವನ್ನು ಬೋಧಿಸುವದು; ನನ್ನ ಹೃದಯವು ವಿವೇಕವನ್ನು ಫಲಿಸುವದು"* (ಕೀರ್ತನೆಗಳು 49:1-3).

ಧ್ಯಾನ-ಸತ್ಯವೇದಾನುಸಾರವಾದ ವಿಧಾನ

ಧ್ಯಾನವು ಸತ್ಯವೇದಾನುಸಾರವಾದ ಅಭ್ಯಾಸವಾಗಿದೆ ಮತ್ತು ದೇವರೇ ಅದನ್ನು ಪ್ರೋತ್ಸಾಹಪಡಿಸಿದ್ದಾನೆ, ಹಾಗೂ ಈ ವಿಧಾನದ ಮೂಲಕ ದೇವರ ವಾಕ್ಯವನ್ನು ನಾವು ನಮ್ಮ ಹೃದಯಗಳಲ್ಲಿ ಸಂಗ್ರಹಿಸಿಕೊಳ್ಳಬಹುದು ಎಂಬ ಸಂಗತಿಯನ್ನು ಅರ್ಥಮಾಡಿಕೊಂಡ ನಂತರ, ಧ್ಯಾನ ಮಾಡುವದು ಹೇಗೆ ಎಂಬದನ್ನು ಕಲಿತುಕೊಳ್ಳುವದು ನಮ್ಮ ಮುಂದಿನ ಯೋಜನೆಯಾಗಿದೆ.

ಹಳೆ ಒಡಂಬಡಿಕೆಯಲ್ಲಿ "ಧ್ಯಾನ" ಎಂಬ ಪದಕ್ಕೆ ಎರಡು ಮುಖ್ಯವಾದ ಇಬ್ರಿಯರಿಗೆ ಪದಗಳನ್ನು ಉಪಯೋಗಿಸಲಾಗಿದೆ. ಇಬ್ರಿಯರಿಗೆ ಪದ *'ಹಾಗಾ'* ಅಂದರೆ "ಪ್ರತಿಬಿಂಬಿಸುವದು, ಊಹಿಸಿಕೊಳ್ಳುವದು, ವಿಚಾರ ಮಾಡುವದು,

ನರಳುವದು, ಗುರುಗುಟ್ಟುವದು, ಸೂಚಿಸುವದು, ಗೊಣಗುವದು, ನಿಟ್ಟುಸಿರಿನಂತೆ ಮೌನವಾದ ಶಬ್ದವನ್ನು ಮಾಡುವದು, ಒಬ್ಬನು ಪದಗಳನ್ನು ಪುನರಾವರ್ತಿಸುವಾಗ ಏನನ್ನಾದರೂ ಆಲೋಚಿಸುವದು." ಮತ್ತೊಂದು ಇಬ್ರಿಯರಿಗೆ ಪದ *'ಸಿಯಾಚ್'* ಮುಖ್ಯವಾಗಿ ಕೀರ್ತನೆ 119ರಲ್ಲಿ ಉಪಯೋಗಿಸಲ್ಪಟ್ಟಿದೆ, ಮತ್ತೊಮ್ಮೆ ಇದರ ಅರ್ಥ "ವಿಚಾರ ಮಾಡುವದು, ಅಂದರೆ., ಮಾತನಾಡುವದು (ಒಬ್ಬನು ತನ್ನೊಂದಿಗೆ ಮತ್ತು ಗಟ್ಟಿಯಾಗಿ), ಉಚ್ಚರಿಸುವದು, ಸಂವಹಿಸುವದು, ದೂರು ಹೇಳುವದು, ಘೋಷಿಸುವದು, ಗಾಢವಾಗಿ ಆಲೋಚಿಸುವದು, ಪ್ರಾರ್ಥನೆ ಮಾಡುವದು, ಹೇಳುವದು, ಮಾತನಾಡುವದು."ಸ್ಪಿರಿಟ್‌ಫಿಲ್ಡ್‌ಲೈಫ್‌ಬೈಬಲ್‌ಮೊದಲಪದದಕುರಿತುಕೆಳಗೆ ಕೊಡಲಾಗಿರುವ ಅಭಿಪ್ರಾಯಗಳನ್ನು ಹೊಂದಿದೆ. ಅದು ಹೇಳುವದೇನೆಂದರೆ, *"ಹಾಗಾ ಆಂಗ್ಲದ "ಧ್ಯಾನ" ಪದದಂತೆ ಅಲ್ಲದ್ದನ್ನು ಪ್ರತಿನಿಧಿಸುತ್ತದೆ, ಅದು ಕೇವಲ ಮಾನಸಿಕ ಅಭ್ಯಾಸ ಮಾತ್ರವೇ ಆಗಿರಬಹುದು. ಇಬ್ರಿಯರಿಗೆ ಆಲೋಚನೆಯಲ್ಲಿ, ಶಾಸ್ತ್ರಗಳನ್ನು ಧ್ಯಾನ ಮಾಡುವದು ಅಂದರೆ ಅವುಗಳನ್ನು ಮೃದುವಾದ, ಗುಂಯ್ಗುಟ್ಟುವಿಕೆಯ ಶಬ್ದದಲ್ಲಿ ಮೆತ್ತಗೆ ಪುನರಾವರ್ತಿಸುವದು, ಹಾಗೆಯೇ ಸಂಪೂರ್ಣವಾಗಿ ಹೊರಗಿನ ಅಡಚಣೆಗಳನ್ನು ತ್ಯಜಿಸುವದು. ಈ ಪದ್ಧತಿಯಿಂದ "ಡಾವೆನಿಂಗ್" ಎಂದು ಕರೆಯಲ್ಪಡುವ ಯೆಹೂದ್ಯರ ವಿಶೇಷ ರೀತಿಯ ಪ್ರಾರ್ಥನೆಯು ಬಂದಿದೆ, ಅದರ ಅರ್ಥ, ವಚನಭಾಗಗಳನ್ನು ಪುನರಾವರ್ತಿಸುವದು, ತೀವ್ರವಾದ ಪ್ರಾರ್ಥನೆಗಳನ್ನು ಮಾಡುವದು, ಅಥವಾ ಹಿಂದಕ್ಕೆ ಮುಂದಕ್ಕೆ ಬಾಗುವಾಗ ಅಥವಾ ತೂಗಾಡುವಾಗ ದೇವರೊಂದಿಗಿನ ಅನ್ಯೋನ್ಯತೆಯಲ್ಲಿ ಕಳೆದುಹೋಗುವದಾಗಿದೆ. ಸ್ಪಷ್ಟವಾಗಿ ಧ್ಯಾನ-ಪ್ರಾರ್ಥನೆಯ ಕ್ರಿಯಾತ್ಮಕವಾದ ಈ ಪ್ರಾರ್ಥನೆಯು ದಾವೀದನ ಸಮಯವನ್ನು ನೆನಪಿಸುತ್ತದೆ"* (ಪುಟಗಳು 753-754, ಥಾಮಸ್ ನೆಲ್ಸನ್ ಪಬ್ಲಿಷರ್ಸ್, 1991).

ಧ್ಯಾನವು ಬಹುಮುಖ್ಯವಾಗಿ ಮಾನವನ ಆತ್ಮದ ಚಟುವಟಿಕೆಯಾಗಿದ್ದು ಪ್ರಾಣವನ್ನು (ಆಲೋಚನಾ ಪೀಠ, ಬುದ್ಧಿವಂತಿಕೆ, ಊಹೆ, ಭಾವನೆ ಮತ್ತು ಚಿತ್ತವನ್ನು) ತಲುಪುತ್ತದೆ ಮತ್ತು ಶಾರೀರಿಕ ದೇಹದ ಮೇಲೆ ಪ್ರಭಾವ ಬೀರುತ್ತದೆ. ಉಪದೇಶದ ಉದ್ದೇಶಗಳಿಗಾಗಿ, ಮೂರು ಪದಗಳ-**ಚಿಂತನೆ**, **ದೃಶ್ಯೀಕರಣ** ಮತ್ತು **ಅರಿಕೆ** ಇವುಗಳ ಉಪಯೋಗದಿಂದ ಧ್ಯಾನದ ಪ್ರಕ್ರಿಯೆಯನ್ನು ಸಾರಾಂಶಗೊಳಿಸಲು ನಾವು ಬಯಸುತ್ತೇವೆ. ಯಾವುದೇ ಸಮಯದಲ್ಲಾದರೂ, ಧ್ಯಾನ ಮಾಡುವಾಗ, ಒಬ್ಬನು ಇವುಗಳಲ್ಲಿ ಯಾವುದಾದರು ಒಂದು ಅಥವಾ

ಮೂರೂ ಪ್ರಕ್ರಿಯೆಗಳಲ್ಲಿ ಭಾಗಿಯಾಗಿರುತ್ತಾನೆ. ಒಬ್ಬನು ನಿರ್ದಿಷ್ಟವಾಗಿರುವ ಧ್ಯೇಯದ ವಿಷಯದಲ್ಲಿ ಚಿಂತನೆಯುಳ್ಳವನಾಗಿರುತ್ತಾನೆ, ಅಥವಾ ನಿರ್ದಿಷ್ಟವಾಗಿರುವ ವಿಷಯದ ಕುರಿತು ಚಿಂತನೆ ಮತ್ತು ದೃಶ್ಯೀಕರಣ ಎರಡು ಮಾಡಿಕೊಳ್ಳುತ್ತಿರುತ್ತಾನೆ, ಅಥವಾ ಅರಿಕೆಯಲ್ಲಿ ಭಾಗಿಯಾಗಿರುತ್ತಾನೆ.

ಇವುಗಳನ್ನು ಒಂದೊಂದೊಂದಾಗಿ ವಿವರವಾಗಿ ಆಲೋಚಿಸೋಣ

ಚಿಂತನೆ-ಸ್ವತಃ ನಿಮ್ಮೊಳಗೆ ಯೋಚಿಸುವುದು

ಕೀರ್ತನೆಗಳು 143:5

ಹಳೇ ದಿನಗಳನ್ನು ನೆನಸಿಕೊಳ್ಳುತ್ತೇನೆ; ನಿನ್ನ ಎಲ್ಲಾ ಕಾರ್ಯಗಳನ್ನು ಧ್ಯಾನಿಸುತ್ತೇನೆ; ನಿನ್ನ ಕೈಕೆಲಸಗಳನ್ನು ಸ್ಮರಿಸುತ್ತೇನೆ.

ಧ್ಯಾನದ ಈ ವಿಷಯವು ನಮ್ಮ ಆಲೋಚನೆ ಮತ್ತು ಬುದ್ಧಿಶಕ್ತಿಯನ್ನು ತೊಡಗಿಸಿಕೊಳ್ಳುತ್ತದೆ. ನಾವು ನಿರ್ದಿಷ್ಟವಾದ ವಿಷಯದ ಬಗ್ಗೆ ಗಾಢವಾಗಿ ಆಲೋಚಿಸುತ್ತೇವೆ, ವಿಚಾರ ಮಾಡುತ್ತೇವೆ ಮತ್ತು ಆಳವಾಗಿ ಯೋಚಿಸುತ್ತೇವೆ. ಒಂದುವೇಳೆ ನಾವು ವಾಕ್ಯದಿಂದ ನಿರ್ದಿಷ್ಟವಾದ ವಿಷಯದ ಬಗ್ಗೆ ಚಿಂತನೆಮಾಡುತ್ತಾ ಇರುವದಾದರೆ, ಉದಾಹರಣೆಗೆ, ದೈವೀಕ ಸ್ವಸ್ಥತೆಯ ಕುರಿತು ನಾವು ಯೆಶಾಯ 53:4 ವಚನವನ್ನು ಶಾಸ್ತ್ರದಿಂದ ಆರಿಸಿಕೊಂಡಿರುತ್ತೇವೆ ಅಂದುಕೊಳ್ಳೋಣ, ಚಿಂತನೆಯ ಸಮಯದಲ್ಲಿ, ಆ ವಚನದ ಅರ್ಥ, ಅದರ ಪ್ರಾಮುಖ್ಯತೆ ಮತ್ತು ಅದರ ಪರಿಣಾಮಗಳ ಬಗ್ಗೆ ನಾವು ಆಲೋಚನೆ ಮಾಡಬಹುದು. ಯೇಸು ಕ್ರಿಸ್ತನು ನಮ್ಮ ಎಲ್ಲಾ ಅನಾರೋಗ್ಯಗಳನ್ನು ಹೊತ್ತುಕೊಂಡನು ಮತ್ತು ನಮ್ಮ ಎಲ್ಲಾ ಬೇನೆಗಳನ್ನು ಅನುಭವಿಸಿದನು ಎಂಬದನ್ನು ನಾವು ಗುರುತಿಸುತ್ತೇವೆ. ಆತನು ನಮಗೆ ಬದಲಾಗಿ ಇವುಗಳನ್ನು ಮಾಡಿರುವದರಿಂದ, ನಾವು ಅವುಗಳನ್ನು ಅನುಭವಿಸುವ ಅವಶ್ಯಕತೆ ಇಲ್ಲ. ನಾವು ಅರ್ಥಮಾಡಿಕೊಳ್ಳುತ್ತೇವೆ ಮತ್ತು ನಮ್ಮೊಳಗೇ ವಿಮರ್ಶೆಮಾಡಿಕೊಳ್ಳುತ್ತೇವೆ. ನಮ್ಮ ಅನುದಿನದ ಜೀವನದಲ್ಲಿ ನಾವು ಅದರ ಅಳವಡಿಸಿಕೊಳ್ಳುವಿಕೆಯನ್ನು ಕುರಿತು ಆಲೋಚಿಸುತ್ತೇವೆ. ಮುಂಚೆ ನಮ್ಮಲ್ಲಿ ಇದ್ದ ತಪ್ಪಾದ ಅಭಿಪ್ರಾಯಗಳು ಮತ್ತು ಆಲೋಚನೆಗಳನ್ನು ಪರೀಕ್ಷಿಸಿಕೊಳ್ಳುತ್ತೇವೆ ಹಾಗೂ ಅವುಗಳನ್ನು ತೆಗೆದುಹಾಕಲು ಪ್ರಾರಂಭಿಸುತ್ತೇವೆ.

ನಾವು ವಾಕ್ಯದ ಕುರಿತು ಆಳವಾದ ಚಿಂತನೆ ನಡೆಸುವದರಲ್ಲಿ ಸಮಯ

ಕಳೆಯುವಾಗ ದೇವರಾತ್ಮನು ನಮ್ಮಲ್ಲಿ ಸಂತೋಷಿಸುತ್ತಾನೆ ಎಂದು ನಾವು ನಂಬುತ್ತೇವೆ. ಸಾಮಾನ್ಯವಾಗಿ, ನಾವು ಹೊರಗಿನ ಎಲ್ಲಾ ಅಡೆತಡೆಗಳಿಂದ ನಮ್ಮನ್ನು ಪ್ರತ್ಯೇಕಪಡಿಸಿಕೊಳ್ಳುವಾಗ ಮತ್ತು ವಾಕ್ಯದ ಚಿಂತನೆಯಲ್ಲಿ ನಮ್ಮ ಮನಸ್ಸಿನ ಗಮನವನ್ನು ಕೇಂದ್ರೀಕರಿಸಿರುವಾಗ, ಕರ್ತನ ಆತ್ಮನು ನಮ್ಮ ಆಲೋಚನಾ ಪ್ರಕ್ರಿಯೆಯಲ್ಲಿ ನಮ್ಮನ್ನು ನಿಧಾನವಾಗಿ ಕೊಂಡೊಯ್ಯುತ್ತಾನೆ. ನಮ್ಮ ಮನಸ್ಸುಗಳಲ್ಲಿ ಹೊಸ ಆಲೋಚನೆಗಳು ಮತ್ತು ಒಳನೋಟಗಳನ್ನು ನೆಡುವ ಮೂಲಕ ಆತನು ನಮ್ಮನ್ನು ಪ್ರೇರೇಪಿಸುತ್ತಾನೆ ಹಾಗೂ ಮುನ್ನಡೆಸುತ್ತಾನೆ. ಶಾಸ್ತ್ರಗಳನ್ನು ವ್ಯಕ್ತಪಡಿಸಲು ಹಳೆಯ ಕಾಲದವರು ಯಾವ ರೀತಿ ಪ್ರೇರಣೆಗೊಂಡರು ಎಂಬದನ್ನು ವಿವರಿಸುತ್ತಾ, ಅಪೊಸ್ತಲನಾದ ಪೇತ್ರನು ಹೇಳಿರುವದೇನೆಂದರೆ, *"ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತನಾಡಿದರು"* (2 ಪೇತ್ರನು 1:21). *"ಪ್ರೇರಿತರಾದರು"* ಎಂಬ ಪದವು *'ಫೆರೊ'* ಎಂಬ ಗ್ರೀಕ್ ಪದದಿಂದ ಬಂದಿದ್ದು ಅದರ ಅರ್ಥ "ಜೊತೆಯಲ್ಲಿ ಕರೆದುಕೊಂಡು ಹೋಗುವದು, ಸಾಗಿಸುವದು." ಎಂಬದಾಗಿದೆ. ವೈನ್ಸ್ ಡಿಕ್ಷನರಿಯು ಈ ಹಳೆ ಒಡಂಬಡಿಕೆಯ ಪ್ರವಾದಿಗಳ ಕುರಿತು ಕೆಳಗೆ ಕೊಡಲಾಗಿರುವ ಅಭಿಪ್ರಾಯಗಳನ್ನು ಹೊಂದಿದೆ. ಅದು ಹೇಳುವದೇನೆಂದರೆ, *"ಅವರು ಪವಿತ್ರಾತ್ಮನ ಶಕ್ತಿಯಿಂದ ಪ್ರೇರಣೆಗೊಂಡರು ಅಥವಾ "ಹುರಿದುಂಬಿಸಲ್ಪಟ್ಟರೇ" ಹೊರತು ತಮ್ಮ ಸ್ವಂತ ಚಿತ್ತದಂತೆ ನಡೆದುಕೊಳ್ಳಲಿಲ್ಲ ಅಥವಾ ತಮ್ಮ ಸ್ವಂತ ಆಲೋಚನೆಗಳನ್ನು ಸುಮ್ಮನೆ ಅಭ್ಯಾಸ ಮಾಡಲಿಲ್ಲ, ಬದಲಾಗಿ ಆತನು ಕೊಟ್ಟ ಮಾತುಗಳಲ್ಲಿ ದೇವರ ಮನಸ್ಸನ್ನು ವ್ಯಕ್ತಪಡಿಸುತ್ತಾ ಇದ್ದರು"* (ಪುಟ 420, ಥಾಮಸ್ ನೆಲ್ಸನ್ ಪಬ್ಲಿಷರ್ಸ್, 1985).

ಪ್ರವಾದಿಗಳು ತಮ್ಮ ಸ್ವಂತ ತಿಳುವಳಿಕೆಗೂ ಮೀರಿದ ಕಾರ್ಯಗಳನ್ನು ಹೇಳಿದ್ದರಿಂದ, *"ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೆ ಎಂಥ ಕಾಲವನ್ನು ಸೂಚಿಸುವನೆಂಬದನ್ನು ಅವರು ಪರಿಶೋಧನೆ ಮಾಡಿದರು"* (1 ಪೇತ್ರನು 1:11). ಇದೇ ಪ್ರಕಾರ, ಪವಿತ್ರಾತ್ಮನು ನಾವು ವಾಕ್ಯದ ಕುರಿತು ಚಿಂತನೆ ನಡೆಸುವ ಸಮಯದಲ್ಲಿಯೂ ನಮ್ಮನ್ನು ನಮ್ಮ ಆಲೋಚನೆಯಲ್ಲಿ

ನಡೆಸುತ್ತಾನೆ. ಪವಿತ್ರಾತ್ಮನು ನಮ್ಮ ಬೋಧಕನಾಗಿದ್ದಾನೆ. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ಯೇಸು ಆಡುವ ಮಾತುಗಳನ್ನು ಕೇಳಿಸಿಕೊಳ್ಳುವ ಪವಿತ್ರಾತ್ಮನು ಅದನ್ನು ನಮಗೆ ಹೇಳುತ್ತಾನೆ (ಯೋಹಾನ 16:12-15). ವಾಕ್ಯದ ಕುರಿತು ಚಿಂತನೆ ನಡೆಸಲು ನಾವು ಎಲ್ಲಾ ಅಡೆತಡೆಗಳಿಂದ ನಮ್ಮನ್ನು ಪ್ರತ್ಯೇಕಪಡಿಸಿಕೊಳ್ಳುವಾಗ ಇದು ಸಂಭವಿಸುತ್ತದೆ. ಓಹ್! ಇದು ಅಮೋಘವಾದ ಅನುಭವವಾಗಿದ್ದು "ಕರ್ತನ ಹಸ್ತವು" ಅಂದರೆ ಸುಮಧುರನಾದ ಪವಿತ್ರಾತ್ಮನು, ನಮ್ಮ ಮೇಲೆ ಮೃದುವಾಗಿ ಇಳಿದು ಬಂದು ನಾವು ವಾಕ್ಯದ ಕುರಿತಾಗಿರುವ ಆಳವಾದ ಚಿಂತನೆಯಲ್ಲಿರುವಾಗ ನಮ್ಮ ಆಲೋಚನೆಯಲ್ಲಿ ನಮ್ಮನ್ನು ನಡೆಸುತ್ತಾನೆ. ಸಾಮಾನ್ಯವಾಗಿ, ಕರ್ತನ ಪ್ರಸನ್ನತೆಯು ಎಷ್ಟು ಬಲವಾಗಿರುತ್ತದೆ ಅಂದರೆ ಆತನು ಕೊಡುವ ಅದ್ಭುತವಾದ ಪ್ರಕಟನೆ ಮತ್ತು ತಿಳುವಳಿಕೆಯ ನಿಮಿತ್ತವಾಗಿ ಸಂತೋಷದ ಕಣ್ಣೀರು ಮತ್ತು ಕೃತಜ್ಞತೆ ನಮ್ಮೊಳಗಿಂದ ಹರಿಯಲು ಪ್ರಾರಂಭವಾಗುತ್ತದೆ.

ಚಿಂತನೆಯು ನಮ್ಮ ಆಲೋಚನೆಯ ಮೇಲೆ ಪ್ರಭಾವ ಬೀರುತ್ತದೆ. ದೇವರ ವಾಕ್ಯದಿಂದ ನೂತನಗೊಂಡಿರುವ ಮನಸ್ಸನ್ನು ಅದು ಉಂಟುಮಾಡುತ್ತದೆ. ಶಾಸ್ತ್ರಗಳು ನಮ್ಮ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವದರ ಬಗ್ಗೆ ನಮಗೆ ಕಲಿಸುತ್ತವೆ (ರೋಮಾಪುರದವರಿಗೆ 12:2a). ನಮ್ಮ ಮನಸ್ಸುಗಳ ಆಂತರ್ಯದಲ್ಲಿ (ಸ್ವಭಾವದಲ್ಲಿ) ನಾವು ನೂತನರಾಗಬೇಕೆಂದು ನಮಗೆ ಸೂಚಿಸಲಾಗಿದೆ (ಎಫೆಸದವರಿಗೆ 4:23). ದೇವರ ಇಡೀ ಸಲಹೆಗೆ (ಇಡೀ ದೇವರ ವಾಕ್ಯಕ್ಕೆ) ನೂತನವಾಗಿರುವ ಮನಸ್ಸನ್ನು ಹೊಂದಿರುವ ವ್ಯಕ್ತಿಯು *"ದೇವರ ಚಿತ್ತಾನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳಿದುಕೊಳ್ಳುವನು"* (ರೋಮಾಪುರದವರಿಗೆ 12:2b). ದೇವರ ವಾಕ್ಯವನ್ನು ಕ್ರಮಶಿಕ್ಷಣದೊಂದಿಗೆ ಧ್ಯಾನಿಸುವ / ಚಿಂತಿಸುವ ಮೂಲಕ, ನಾವು ನಮ್ಮ *"ಜ್ಞಾನೇಂದ್ರಿಯಗಳನ್ನು ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದುಕೊಳ್ಳುವೆವು"* (ಇಬ್ರಿಯರಿಗೆ 5:14b).

ದೃಶ್ಯೀಕರಣ–ನಿಮ್ಮ ಊಹೆಯೊಂದಿಗೆ ಚಿತ್ರಿಸಿಕೊಳ್ಳುವದು

ಆದಿಕಾಂಡ 15:1-6

[1] ಈ ಸಂಗತಿಗಳು ನಡೆದ ಮೇಲೆ ಅಬ್ರಾಮನಿಗೆ ದರ್ಶನದಲ್ಲಿ ಯೆಹೋವನ ವಾಕ್ಯವುಂಟಾಯಿತು; ಏನಂದರೆ–ಅಬ್ರಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ

ಅತ್ಯಧಿಕ ಬಹುಮಾನವು ಇಟ್ಟದೆ ಎಂಬದೇ.

[2] ಅದಕ್ಕೆ ಅಬ್ರಾಮನು-ಕರ್ತನಾದ ಯೆಹೋವನೇ, ನನಗೆ ಏನು ಕೊಟ್ಟರೇನು? ನಾನು ಸಂತಾನವಿಲ್ಲದವನಾಗಿ ಹೋಗುವೆನಾದದರಿಂದ ನನ್ನ ಆಸ್ತಿಯೆಲ್ಲಾ ದಮಸ್ಕದ ಎಲೀಯೆಜರನ ಪಾಲಾಗುವದಲ್ಲಾ ಅಂದನು.

[3] ತಿರಿಗಿ ಅಬ್ರಾಮನು-ನೀನು ನನಗೆ ಸಂತಾನ ಕೊಡಲಿಲ್ಲವಾದ್ದರಿಂದ ನನ್ನ ಮನೆಯಲ್ಲಿ ಹುಟ್ಟಿದವನೇ ನನಗೆ ಬಾಧ್ಯಸ್ಥನಾಗಬೇಕಾಯಿತು ಎಂದು ಹೇಳಲು ಯೆಹೋವನು ಅವನ ಸಂಗಡ ಮಾತಾಡಿ-

[4] ಇವನು ನಿನಗೆ ಬಾಧ್ಯಸ್ಥನಾಗುವದಿಲ್ಲ; ನಿನ್ನ ಹೊಟ್ಟೆಯಲ್ಲೇ ಹುಟ್ಟುವವನು ನಿನಗೆ ಬಾಧ್ಯಸ್ಥನಾಗುವನು ಎಂದು ಹೇಳಿ

[5] ಅವನನ್ನು ಹೊರಗೆ ಕರತಂದು-ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವದು ಅಂದನು.

[6] ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು.

ದೇವರು ಅಬ್ರಾಮನಿಗೆ ನಿನ್ನನ್ನು ದೊಡ್ಡ ಜನಾಂಗವನ್ನಾಗಿ ಮಾಡುವೆನು ಎಂದು ಮೊದಲ ಸಲ ವಾಗ್ದಾನ ಮಾಡಿ ಹಲವು ವರ್ಷಗಳೇ ಕಳೆದಿದ್ದವು. ಸಾರಾ ಮತ್ತು ಅಬ್ರಾಮನು ಇನ್ನೂ ಮಕ್ಕಳಿಲ್ಲದವರಾಗಿಯೇ ಇದ್ದರು, ಮತ್ತು ಇದು ಖಂಡಿತವಾಗಿಯೂ ಅವರಿಗೆ ಚಿಂತೆಯ ವಿಷಯವಾಗಿಯೇ ಇತ್ತು. ಈ ಸಮಯದಲ್ಲಿ, ಮೂಲ ವಾಗ್ದಾನವನ್ನು ದೃಢಪಡಿಸಲು ಕರ್ತನು ಮತ್ತೊಮ್ಮೆ ಅಬ್ರಾಮನೊಂದಿಗೆ ಮಾತನಾಡಿದನು. ಕರ್ತನು ಏನು ಮಾಡಿದನು ಎಂಬದನ್ನು ಎಚ್ಚರಿಕೆಯಿಂದ ಗಮನಿಸಿರಿ. ಕರ್ತನು ಒಂದು ದಿನ ರಾತ್ರಿ ಅಬ್ರಾಮನನ್ನು ಅವನ ಮನೆಯಿಂದ ಹೊರಗೆ ಕರೆದುಕೊಂಡು ಬಂದನು, ಅವನಿಗೆ ನಿನ್ನ ಕಣ್ಣೆತ್ತಿ ಆಕಾಶದ ಕಡೆಗೆ ನೋಡು ಮತ್ತು ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು ಎಂಬದಾಗಿ ಹೇಳಿದನು. ನಂತರ ಆತನು ಅಬ್ರಾಮನಿಗೆ ಹೇಳಿದ್ದೇನೆಂದರೆ, *"ನಿನ್ನ ಸಂತಾನವು ಅಷ್ಟಾಗುವದು"* (ಆದಿಕಾಂಡ 15:5). ವಾಸ್ತವದಲ್ಲಿ, ದೇವರು ಅಬ್ರಾಮನಿಗೆ ತನ್ನ ವಾಗ್ದಾನದ ದೃಶ್ಯ ಅಥವಾ ಚಿತ್ರಣವನ್ನು ಕೊಟ್ಟನು. ದೇವರ ವಾಗ್ದಾನವು ನೆರವೇರುವಾಗ ಹೇಗಿರುತ್ತದೆ ಎಂಬ ಊಹೆಯೊಂದಿಗೆ ಅಬ್ರಾಮನು ಆ ಚಿತ್ರಣವನ್ನು ಮತ್ತೆಮತ್ತೆ ನೋಡುತ್ತಿದ್ದನು. ನಂತರದಲ್ಲಿ, ಕರ್ತನು ಅಬ್ರಹಾಮನಿಗೆ ಇನ್ನೂ ಹೇಳಿದ್ದೇನೆಂದರೆ, *"ನಿನ್ನ ಸಂತತಿಯನ್ನು ...ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು ..."* (ಆದಿಕಾಂಡ 22:17).

ದೃಶ್ಯೀಕರಣವು ಪ್ರಾಮುಖ್ಯವಾದ ಪ್ರಕ್ರಿಯೆಯಾಗಿದ್ದು ಧ್ಯಾನದ ಸಮಯದಲ್ಲಿ ನಾವು ಅದನ್ನು ಅಭ್ಯಾಸ ಮಾಡುತ್ತೇವೆ. ದೇವರ ವಾಕ್ಯವು ನಮಗೆ ಏನನ್ನು ತಿಳಿಸುತ್ತದೆಯೋ ನಾವು ಅದನ್ನು ನಮ್ಮ ಊಹೆಯ ಶಕ್ತಿಯಿಂದ ನೋಡುತ್ತೇವೆ. ಉದಾಹರಣೆಗೆ, ಒಂದುವೇಳೆ ನಾವು ಅನಾರೋಗ್ಯದಲ್ಲಿರುವದಾದರೆ,ನಮ್ಮನ್ನು ನಾವುಆರೋಗ್ಯವಂತರನ್ನಾಗಿಯೂ ಮತ್ತು ಗುಣಮುಖರನ್ನಾಗಿಯೂ ನೋಡಿಕೊಳ್ಳುತ್ತೇವೆ. ವಾಕ್ಯವು ನಮ್ಮ ಬಗ್ಗೆ ಏನೆಲ್ಲಾ ಹೇಳುತ್ತದೆಯೋ ಹಾಗೆಯೇ ಇರುವಂತೆ ಮತ್ತು ಹಾಗೆಯೇ ಮಾಡುತ್ತಿರುವಂತೆ ನಾವು ನಮ್ಮನ್ನು ನೋಡಿಕೊಳ್ಳುತ್ತೇವೆ. ಧ್ಯಾನದ ಪ್ರಕ್ರಿಯೆಯಲ್ಲಿ, ದೃಶ್ಯೀಕರಣವು ನಮ್ಮ ಕಲ್ಪನೆಯಲ್ಲಿ ತೊಡಗಿಸಿಕೊಳ್ಳುತ್ತದೆ.

ಸಭೆಯು, ಸಾಮಾನ್ಯವಾಗಿ, ಊಹೆಯ ಶಕ್ತಿಯನ್ನು ಸಜ್ಜುಗೊಳಿಸುವದನ್ನೇ ನಿರ್ಲಕ್ಷಿಸಿದೆ.ಮತ್ತೊಂದು ಕಡೆಯಲ್ಲಿ ಲೋಕವು ಎಡಬಿಡದೆ ನಮ್ಮ ಊಹೆಯ ಮೇಲೆ ಮಾಧ್ಯಮದ ಜಾಹೀರಾತುಗಳು, ಮುದ್ರಿತ ಪ್ರಕಟನೆಗಳು ಮತ್ತು ಇನ್ನಿತರ ಕಾರ್ಯಗಳ ಮೂಲಕ ಪ್ರಭಾವ ಬೀರುತ್ತಲೇ ಇದೆ. ಊಹೆಯು ನಮ್ಮ ಅಸ್ತಿತ್ವದ ಬಹಳ ಪ್ರಾಮುಖ್ಯವಾದ ಭಾಗವಾಗಿದೆ. ದೇವರು ಅದನ್ನು ರೂಪಿಸಿದ್ದಾನೆ ಮತ್ತು ಉಪಯೋಗಿಸುವ ಸಹಜಶಕ್ತಿಯನ್ನು ನಮಗೆ ಕೊಟ್ಟಿದ್ದಾನೆ. ನಮ್ಮ ಊಹೆಯು ನಮ್ಮ ಸ್ವಭಾವ ಮತ್ತು ನಾವು ತೆಗೆದುಕೊಳ್ಳುವ ತೀರ್ಮಾನಗಳ ಮೇಲೆ ಪ್ರಭಾವ ಬೀರುತ್ತದೆ. ಅವು ಜೀವನದ ಕುರಿತಾಗಿರುವ ನಮ್ಮ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತವೆ ಮತ್ತು ನಮ್ಮ ಸ್ವಯಂ-ಚಿತ್ರಣವನ್ನು ನಿರ್ಧರಿಸುತ್ತವೆ. ಬಹಳಷ್ಟು ಜನರು ಬಹಳ ಕಳಪೆಯಾದ ಸ್ವಯಂ-ಚಿತ್ರಣದಿಂದ (ಅಥವಾ ಕಳಪೆಯಾದ ಸ್ವಯಂ "ಊಹೆಯಿಂದ) ಕಷ್ಟಪಡುವವರಾಗಿದ್ದಾರೆ ಅಥವಾ ಸ್ವಯಂ-ಚಿತ್ರಣವು ಅವರನ್ನು ಜನರ ಭಯದಿಂದ, ಅಪರಿಚಿತವಾದ ಭಯದಿಂದ, ಅಪಾಯಗಳನ್ನು ಎದುರಿಸುವ ಭಯದಿಂದ ಬಂಧಿಸಿವೆ ಅಥವಾ ಸ್ವಯಂ-ಚಿತ್ರಣವು ಅವರನ್ನು ಕೀಳರಿಮೆ ಮತ್ತು ಇನ್ನಿತರ ವಿಷಯಗಳಿಂದ ತುಂಬಿ ಹೋಗಿರುತ್ತದೆ. ಆದರೂ, ನಾವು ದೇವರ ಧ್ಯಾನ ಮಾಡುತ್ತಾ ಮತ್ತು ದೇವರು ನಾವು ಯಾರಾಗಿದ್ದೇವೆ ಎಂದು ಹೇಳುತ್ತಾನೋ ಅದನ್ನು ದೃಶ್ಯೀಕರಿಸಿಕೊಳ್ಳಲು (ಅಥವಾ ಊಹಿಸಿಕೊಳ್ಳಲು) ಪ್ರಾರಂಭಿಸಿಕೊಳ್ಳುವಾಗ, ನಮ್ಮ ಸ್ವಯಂ-ಚಿತ್ರಣವು ಬದಲಾಗಲು ಪ್ರಾರಂಭವಾಗುತ್ತದೆ. ನಿಜವಾಗಿ ಹೇಳುವದಾದರೆ, ನಮ್ಮ ಸ್ವಯಂ-ಚಿತ್ರಣ ಮಾತ್ರವಲ್ಲ ಬದಲಾಗಿ ಜೀವನದ ಕುರಿತಾಗಿರುವ ನಮ್ಮ ಇಡೀ ದೃಷ್ಟಿಕೋನ

ಮತ್ತು ನಮ್ಮ ಸುತ್ತಮುತ್ತಲಿನಲ್ಲಿರುವ ಪರಿಸ್ಥಿತಿಗಳು ಸಹ ಬದಲಾಗಲು ಪ್ರಾರಂಭವಾಗುತ್ತದೆ.

ಅರಣ್ಯಕಾಂಡ 13ನೇ ಅಧ್ಯಾಯದಲ್ಲಿ ಬಹಳ ಪರಿಚಯವುಳ್ಳ ಒಂದು ಹಳೆ ಒಡಂಬಡಿಕೆ ಘಟನೆಯಿದ್ದು ಅದು ಇಲ್ಲಿ ಒಳ್ಳೆಯ ನಿದರ್ಶನವಾಗಿ ಕಾರ್ಯಮಾಡುತ್ತದೆ. ಕರ್ತನು ತನ್ನ ಜನರಿಗೆ ಕಾನಾನ್ ದೇಶವನ್ನು ಸ್ವಾಸ್ಥ್ಯವಾಗಿ ಕೊಡುವೆನೆಂಬ ವಾಗ್ದಾನದೊಂದಿಗೆ ಐಗುಪ್ತ ದೇಶದ ಬಂಧನದಿಂದ ಬಿಡುಗಡೆಗೊಳಿಸಿ ಹೊರಗೆ ಕರೆದುಕೊಂಡು ಬಂದಿದ್ದನು. ವಾಗ್ದಾನದ ದೇಶದೊಳಗೆ ಪ್ರವೇಶಿಸುವ ಸಿದ್ಧತೆಯಲ್ಲಿ, 12 ಕುಲಗಳಿಂದ ಒಬ್ಬೊಬ್ಬ ನಾಯಕನಂತೆ, 12 ಮಂದಿಯನ್ನು, ಗೂಢಾಚಾರರನ್ನಾಗಿ ಕಳುಹಿಸುವಂತೆ ಕರ್ತನು ಮೋಶೆಗೆ ಹೇಳಿದನು. ಆ ದೇಶಕ್ಕೆ ಹೋದ 12 ಜನರು 40 ದಿನಗಳು ಎಲ್ಲವನ್ನು ನೋಡಿದರು. ನಂತರ ಅವರು ಹಿಂದಿರುಗಿ ಬಂದು ತಮ್ಮ ವರದಿಯನ್ನು ಕೊಟ್ಟರು. ಆ ದೇಶವು ಫಲಭರಿತವಾಗಿದೆ ಮತ್ತು ಸಮೃದ್ಧವಾಗಿದೆ ಎಂದು ಎಲ್ಲರೂ ಒಪ್ಪಿಕೊಂಡರು. ಆದರೂ, ಅವರಲ್ಲಿ 10 ಮಂದಿ ಅಲ್ಲಿ ವಾಸವಾಗಿದ್ದ ದೈತ್ಯರಿಗೆ ಹೆದರಿದರು. ಅವರು ಹೇಳಿದ್ದೇನೆಂದರೆ, *"ಆ ಜನರು ನಮಗಿಂತ ಬಲಿಷ್ಠರು; ಅವರ ಮೇಲೆ ಹೋಗುವದಕ್ಕೆ ನಮಗೆ ಶಕ್ತಿ ಸಾಲದು. ಅದಲ್ಲದೆ ಇವರು ತಾವು ಸಂಚರಿಸಿ ನೋಡಿದ ದೇಶದ ವಿಷಯವಾಗಿ ಇಸ್ರಾಯೇಲ್ಯರಿಗೆ ಅಶುಭಸಮಾಚಾರವನ್ನು ಹೇಳುವವರಾಗಿ-ನಾವು ಸಂಚರಿಸಿ ನೋಡಿದ ದೇಶವು ತನ್ನಲ್ಲಿ ವಾಸಿಸುವವರನ್ನು ನುಂಗಿಬಿಡುತ್ತದೆ; ಅದಲ್ಲದೆ ನಾವು ಅದರಲ್ಲಿ ನೋಡಿದ ಜನರೆಲ್ಲರೂ ಬಹಳ ಎತ್ತರವಾದವರು; ಅಲ್ಲಿ ನೆಫೀಲಿಯರನ್ನು ಅಂದರೆ ನೆಫೀಲಿಯ ವಂಶದವರಾದ ಉನ್ನತಪುರುಷರನ್ನು ನೋಡಿದೆವು. ನಾವು ಅವರ ಮುಂದೆ ಮಿಡತೆಗಳಂತೆ ಇದ್ದೇವೆಂದು ತಿಳಿದುಕೊಂಡೆವು; ಅವರಿಗೂ ನಾವು ಹಾಗೆಯೇ ತೋರಿದೆವು ಅಂದರು."* (ಅರಣ್ಯಕಾಂಡ 13:31-33) ಕೇವಲ ಇಬ್ಬರು ಮಾತ್ರವೇ ಸಕಾರಾತ್ಮವಾದ ವರದಿಯನ್ನು ತಂದು ಹೇಳಿದ್ದೇನೆಂದರೆ, *"ನಾವು ನಿರ್ಭಯವಾಗಿ ಆ ಬೆಟ್ಟದ ಸೀಮೆಗೆ ಹತ್ತಿಹೋಗಿ ಅದನ್ನು ಸ್ವಾಧೀನಪಡಿಸಿಕೊಳ್ಳೋಣ; ಅದನ್ನು ಜಯಿಸಬಲ್ಲೆವು ಎಂದು ಹೇಳಿದರು"* (ಅರಣ್ಯಕಾಂಡ 13:30). ಆ 12 ಜನರೂ ಎತ್ತರವಾಗಿದ್ದ ಪುರುಷರನ್ನು ನೋಡಿದರು, ಆದರೆ ಅವರು ಪ್ರತಿಕ್ರಿಯಿಸಿದ ರೀತಿ ಮಾತ್ರ ಭಿನ್ನವಾಗಿತ್ತು. ಇಬ್ಬರು ಮಾತ್ರ ಆತ್ಮವಿಶ್ವಾಸವುಳ್ಳವರಾಗಿದ್ದರು ಯಾಕಂದರೆ ಕರ್ತನು ತಮ್ಮ ಜೊತೆಯಲ್ಲಿದ್ದಾನೆ ಎಂಬದನ್ನು ಅವರು

ನೆನಪುಮಾಡಿಕೊಂಡರು (ಅರಣ್ಯಕಾಂಡ 14:6-9). ಉಳಿದ 10 ಮಂದಿ ತಮ್ಮ ನಕಾರಾತ್ಮಕವಾದ ಊಹೆ ತಮ್ಮನ್ನು ಆವರಿಸಿಕೊಳ್ಳುವಂತೆ ಮಾಡಿದರು. ಅವರು ತಮ್ಮ ಮನಸ್ಸಿನ ಕಣ್ಣುಗಳಿಂದ ನೋಡಿದ್ದು ಅವರನ್ನು ಬಲಹೀನರನ್ನಾಗಿ ಮಾಡಿತು. ಅವರು ತಮ್ಮನ್ನು ದೈತ್ಯರ ಎದುರು ಮಿಡತೆಗಳಂತೆ ಚಿತ್ರಿಸಿಕೊಂಡರು. ಇದು ಅವರನ್ನು ಭಯದಿಂದ ತುಂಬಿಸಿತು ಮತ್ತು ದೇವರಲ್ಲಿ ಅವರಿಗಿದ್ದ ಆತ್ಮವಿಶ್ವಾಸವನ್ನೂ ಕಸಿದುಕೊಂಡಿತು. ಹೇಳಲು ದುಃಖವಾಗುವ ಸಂಗತಿ ಏನೆಂದರೆ, ಅನೇಕ ಕ್ರೈಸ್ತರು ಈ 10 ಮಂದಿಯ ಹಾಗೆಯೇ ಜೀವನದ ಪರಿಸ್ಥಿತಿಗಳನ್ನು ಹಾದುಹೋಗುವವರಾಗಿದ್ದಾರೆ. ಅವರು ತಮ್ಮ ಮನಸ್ಸಿನ ಕಣ್ಣುಗಳಿಂದ ನೋಡುವಂಥದ್ದು-ಅವರ ಊಹೆ-ನಂಬಿಕೆಯ ಜೀವಿತವನ್ನು ಜೀವಿಸದಂತೆ ಮತ್ತು ಕರ್ತನ ಘನವಾದ ಆಶೀರ್ವಾದಗಳನ್ನು ಅನುಭವಿಸದಂತೆ ಅಡ್ಡಿಮಾಡುತ್ತದೆ. ಆದರೂ ಧ್ಯಾನವೆಂಬ ಕ್ರಮಶಿಕ್ಷಣದ ಮೂಲಕ, ನಮ್ಮ ಊಹೆಯ ಗೋಡೆಗಳ ಮೇಲೆ ನಾವು ಹೊಸ ಚಿತ್ರಗಳನ್ನು ಬಿಡಿಸಬಹುದು.

ಶಾಸ್ತ್ರದಲ್ಲಿ ಅನೇಕ ಸ್ಥಳಗಳಲ್ಲಿ, ಮುಖ್ಯವಾಗಿ ಹಳೆ ಒಡಂಬಡಿಕೆಯಲ್ಲಿ, ನಾವು ನೋಡುವದರ ಮೇಲೆ ದೇವರು ಕಾರ್ಯಮಾಡುವದನ್ನು ಗಮನಿಸಬೇಕಾದದ್ದು ಆಸಕ್ತಿಕರವಾಗಿದೆ. *"ಆದದರಿಂದ ನೀವು ಈ ನನ್ನ ಮಾತುಗಳನ್ನು ನಿಮ್ಮ ಹೃದಯದಲ್ಲಿಯೂ ಮನಸ್ಸಿನಲ್ಲಿಯೂ ಇಟ್ಟುಕೊಳ್ಳಬೇಕು; ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು; ಇವು ನಿಮ್ಮ ಹುಬ್ಬುಗಳ ನಡುವೆ ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತಿರಬೇಕು"* (ಧರ್ಮೋಪದೇಶಕಾಂಡ 11:18; ಹಾಗೆಯೇ ಧರ್ಮೋಪದೇಶಕಾಂಡ 6:8; ವಿಮೋಚನಕಾಂಡ 13:9,16 ಸಹ ನೋಡಿರಿ) ಎಂಬ ಆಜ್ಞೆಯನ್ನು ತನ್ನ ಒಡಂಬಡಿಕೆಯ ಜನರಿಗೆ ಆತನು ಕೊಟ್ಟನು. ಒಂದು ಹಂತದಲ್ಲಿ, ಜನರು ವಚನಭಾಗಗಳನ್ನು ತನ್ನ ಎಡಗೈಗೆ ಮತ್ತು ತಮ್ಮ ಹಣೆಗಳಿಗೆ ಕಟ್ಟಿಕೊಳ್ಳುವ ಮೂಲಕ ಇದನ್ನು ಅಭ್ಯಾಸ ಮಾಡಿದರು. "ಜ್ಞಾಪಕಾರ್ಥಕ" ಪದದ ಒಂದು ಅರ್ಥ ಏನಂದರೆ "ಸಾದೃಶ್ಯವಾಗಿರುವ ನಿದರ್ಶನ." ತನ್ನ ಜನರು ತನ್ನ ವಾಕ್ಯವನ್ನು ಮತ್ತು ತಾನು ಅವರಿಗೆ ಮಾಡಿರುವ ಕಾರ್ಯಗಳನ್ನು ಕಾಣುವ ರೀತಿಯಲ್ಲಿ ಜ್ಞಾಪಕವಾಗಿ ಇಟ್ಟುಕೊಳ್ಳಬೇಕು ಎಂಬದಾಗಿ ದೇವರು ಬಯಸಿದನು. ಅವರು ನೋಡುವದರ ಮೇಲೆ ದೇವರು ಪ್ರಭಾವ ಬೀರಲು ಬಯಸಿದನು ಯಾಕಂದರೆ ಅವರು ನೋಡುವಂಥದ್ದು ಕರ್ತನ ಕಾರ್ಯಗಳನ್ನು ನೆನಪಿಸಿಕೊಳ್ಳುವಂತೆ

ಅವರನ್ನು ಪ್ರೇರಿಸುವದು. ಹೊಸ ಒಡಂಬಡಿಕೆಯಲ್ಲಿ ನಮಗೆ ಇಂಥ ಅಭ್ಯಾಸ ಇಲ್ಲವಾದರೂ, ವೈಯಕ್ತಿಕವಾಗಿ ನಮಗೆ ಅನ್ನಿಸುವದೇನೆಂದರೆ ದೇವರ ವಾಕ್ಯವು ನಮ್ಮ ಊಹೆಗಳ ಗೋಡೆಗಳ ಮೇಲೆ ಬಿಡಿಸಲ್ಪಡಬೇಕು ಆಗ ನಾವು ಅದನ್ನು ಯಾವಾಗಲೂ "ನೋಡಲು" ಮತ್ತು ದೇವರ ಸಮೃದ್ಧವಾದ ವಾಗ್ದಾನಗಳನ್ನು ನೆನಪುಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪರಿಚಿತವಾಗಿರುವ ಹಳೆ ಒಡಂಬಡಿಕೆಯ ವಚನಭಾಗದಲ್ಲಿ, ಕರ್ತನು ಹೇಳಿರುವದೇನೆಂದರೆ, *"ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು. ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ."* (ಜ್ಞಾನೋಕ್ತಿಗಳು 4:20,21a) ಮತ್ತೊಮ್ಮೆ, ವಾಕ್ಯವನ್ನು ತಪ್ಪದೆ "ನೋಡುವದಕ್ಕೆ" ಪ್ರಾಮುಖ್ಯತೆಯನ್ನು ಕೊಡಬೇಕಾದ ಉಪದೇಶದನ್ನು ನಾವು ನೋಡಬಹುದು. ಒಂದು ಅರ್ಥದಲ್ಲಿ, ಇದು ನಾವು ನಮ್ಮ ಮನಸ್ಸಿನಲ್ಲಿ ಊಹಿಸಿಕೊಳ್ಳುವ, ದೃಶ್ಯೀಕರಿಸಿಕೊಳ್ಳುವ ಮತ್ತು ಚಿತ್ರಿಸಿಕೊಳ್ಳುವ ಕಾರ್ಯಗಳಿಗೆ ಸಂಬಂಧಪಟ್ಟಿದೆ ಎಂದು ನಂಬುತ್ತೇವೆ.

ಅರಿಕೆ-ದೇವರು ಹೇಳಿರುವದನ್ನು ಹೇಳುವದು

ಯೆಹೋಶುವ 1:8

ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ.

ಇಲ್ಲಿ, ಕರ್ತನು ಯೆಹೋಶುವನಿಗೆ *"ಹಗಲಿರುಳು"* ಧ್ಯಾನಿಸು ಎಂಬದಾಗಿ ಹೇಳುತ್ತಾ ಇದ್ದಾನೆ. *"ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ"* ಎಂದು ಹೇಳುವ ಮೂಲಕ ಆತನು ಪ್ರಾರಂಭ ಮಾಡಿರುವದನ್ನು ಗಮನಿಸಿರಿ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕರ್ತನು ಯೆಹೋಶುವನಿಗೆ ಹೇಳುತ್ತಾ ಇರುವದು ಏನೆಂದರೆ ಧರ್ಮಶಾಸ್ತ್ರದಲ್ಲಿರುವ ಪದಗಳು ಯಾವಾಗಲೂ ಅವನ ಸಂಭಾಷಣೆಯ ಭಾಗವಾಗಿರಬೇಕು. ಆದ್ದರಿಂದ, ಧ್ಯಾನದ ಪ್ರಕ್ರಿಯೆಯ ಭಾಗವಾಗಿ, ಶಾಸ್ತ್ರದ ಮಾತುಗಳನ್ನು ನಮ್ಮ ಬಾಯಿಂದ ಹೊರಡಿಸಬೇಕು, ಅಂದರೆ, ಶಾಸ್ತ್ರದ ಮಾತುಗಳನ್ನು ನಾವು ಹೇಳಬೇಕು / ಪುನರಾವರ್ತಿಸಬೇಕು / ಕಂಠಪಾಠ ಮಾಡಬೇಕು. ಮೊದಲೇ ವಿವರಿಸಿರುವಂತೆ, ಇದು ಇಬ್ರಿಯರಿಗೆ ಅಭ್ಯಾಸವಾಗಿತ್ತು. ಧ್ಯಾನದ ಸಮಯದಲ್ಲಿ, ಅವರು ನಿಧಾನವಾಗಿ ಶಾಸ್ತ್ರದ ವಚನಗಳನ್ನು ಮೃದುವಾದ, ಕಡಿಮೆ ಶಬ್ದದ ಧ್ವನಿಯಲ್ಲಿ ಪುನರಾವರ್ತಿಸುತ್ತಾ, ಹೊರಗಿನ ಅಡಚಣೆಗಳನ್ನು ಸಂಪೂರ್ಣವಾಗಿ ತ್ಯಜಿಸುತ್ತಾ ಹಿಂದಕ್ಕೂ

ಮುಂದಕ್ಕೂ ಬಾಗುತ್ತಾ ಅಥವಾ ತೂಗುತ್ತಾ ಇದ್ದರು.

ಹೊಸ ಒಡಂಬಡಿಕೆಯಲ್ಲಿ, ನಮಗೆ *"ಅರಿಕೆ"* ಮತ್ತು *"ಒಪ್ಪಿಕೊಳ್ಳುವಿಕೆ"* ಪದಗಳನ್ನು ಪರಿಚಯ ಮಾಡಲಾಗಿದೆ. ಇವು ಕ್ರೈಸ್ತ ನಂಬಿಕೆಯಲ್ಲಿ ಪ್ರಾಮುಖ್ಯವಾದ ಪದಗಳಾಗಿವೆ. ನಾವು ಕರ್ತನಾದ ಯೇಸುವನ್ನು ಬಾಯಿಂದ ಅರಿಕೆ ಮಾಡಿಕೊಳ್ಳುವಾಗ ಮತ್ತು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು ಎಂದು ನಮ್ಮ ಹೃದಯಗಳಲ್ಲಿ ನಂಬುವಾಗ ರಕ್ಷಣೆಯು ನಿಜವಾಗುತ್ತದೆ (ರೋಮಾಪುರದವರಿಗೆ 10:9). ಇದಲ್ಲದೆ, ಹೊಸ ಒಡಂಬಡಿಕೆಯು ನಮಗೆ ನಮ್ಮ ಪಾಪಗಳ ಒಪ್ಪಿಕೊಳ್ಳುವಿಕೆ (1 ಯೋಹಾನ 1:9) ಮತ್ತು ನಮ್ಮ ನಂಬಿಕೆಯ ಅರಿಕೆಯ ಬಗ್ಗೆ ಕಲಿಸುತ್ತದೆ (ಇಬ್ರಿಯರಿಗೆ 3:1). "ಒಪ್ಪಿಕೊಳ್ಳುವದು" ಅಥವಾ "ಅರಿಕೆ" ಎಂದು ಭಾಷಾಂತರ ಮಾಡಿರುವ ಎರಡು ಗ್ರೀಕ್ ಪದಗಳಲ್ಲಿ, *'ಹೊಮೊಲೊಗಿಯೊ'* ಎಂಬ ಪದವನ್ನು ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟಿದೆ ಮತ್ತು ಅಕ್ಷರಾರ್ಥವಾಗಿ ಅದರ ಅರ್ಥ, "ಒಂದೇ ವಿಷಯವನ್ನು ಮಾತನಾಡುವದು, ಸಮ್ಮತಿಸುವದು, ಒಪ್ಪುವದು, ಒಡಂಬಡುವದು." ಧ್ಯಾನದ ಮೂರನೇ ಅಂಶವನ್ನು ವಿವರಿಸಲು ನಾವು "ಅರಿಕೆ" ಪದವನ್ನು ಉಪಯೋಗಿಸುವ ಆಯ್ಕೆಮಾಡಿಕೊಂಡಿದ್ದೇವೆ ಯಾಕಂದರೆ ಕರ್ತನು ನಮಗೆ ತನ್ನ ವಾಕ್ಯವನ್ನು ಪುನರಾವರ್ತಿಸುವಂತೆ/ಕಂಠಪಾಠ ಮಾಡುವಂತೆ/ಹೇಳುವಂತೆ ಸೂಚಿಸುವಾಗ, ಪರಿಣಾಮವಾಗಿ, ಆತನ ವಾಕ್ಯವನ್ನು "ಅರಿಕೆಮಾಡಿಕೊಳ್ಳುವಂತೆ" ಆತನು ನಮಗೆ ಸೂಚಿಸುತ್ತಾ ಇದ್ದಾನೆ. ಆತನ ವಾಕ್ಯ ಹೇಳುವ "ಅದೇ ವಿಷಯವನ್ನು ಹೇಳುವಂತೆ" ನಮ್ಮ ಮಾತುಗಳು ಆತನ ವಾಕ್ಯದೊಂದಿಗೆ "ಒಡಂಬಡುವಂತೆ" ಆತನು ನಮಗೆ ಹೇಳುತ್ತಿದ್ದಾನೆ.

ಉದಾಹರಣೆಯಾಗಿ, ನಾವು ವಾಕ್ಯವನ್ನು ಧ್ಯಾನಿಸುತ್ತಾ ಇದ್ದೇವೆ, ವಿಶಿಷ್ಟವಾಗಿ ಯೆಶಾಯ 53:4 ಮತ್ತು ಮತ್ತಾಯ 8:17 ಅಂದುಕೊಳ್ಳೋಣ. ಶಿಲುಬೆಯ ಮೇಲೆ ನಮ್ಮ ಪರವಾಗಿ ಕ್ರಿಸ್ತನು ಮಾಡಿದ ಕಾರ್ಯದ ಮೂಲಕ ಹೇಗೆ ನಮಗೆ ಸ್ವಸ್ಥತೆಯನ್ನು ಒದಗಿಸಿದನು ಎಂಬದನ್ನು ಈ ವಚನಗಳು ತಿಳಿಸುತ್ತವೆ. ಈ ವಚನಗಳ ಅರ್ಥವೇನು ಮತ್ತು ಅವು ನಮಗೆ ಹೇಗೆ ಅನ್ವಯವಾಗುತ್ತವೆ ಎಂಬದನ್ನು ನಾವು **ಚಿಂತನೆ ಮಾಡುತ್ತೇವೆ**. ಈ ಶಾಸ್ತ್ರಗಳು ನಮ್ಮ ಜೀವಿತಗಳಲ್ಲಿ ಸತ್ಯವಾಗಿವೆ ಎಂದು ನಾವು **ದೃಶ್ಯೀಕರಿಸುತ್ತೇವೆ**. ನಮಗೆ ಅನಾರೋಗ್ಯದಿಂದ ಬಿಡುಗಡೆಯಾಗಿದೆ, ಎಲ್ಲಾ ನೋವು ವಾಸಿಯಾಗಿವೆ,

ನಾವು ಗುಣವಾಗಿದ್ದೇವೆ ಮತ್ತು ಪರಿಪೂರ್ಣವಾಗಿ ಆರೋಗ್ಯವಂತರಾಗಿದ್ದೇವೆ ಎಂದು ಊಹಿಸಿಕೊಂಡು ನಮ್ಮನ್ನು ನಾವೇ ನೋಡಿಕೊಳ್ಳುತ್ತೇವೆ. ನಮ್ಮ ಧ್ಯಾನದ ಭಾಗವಾಗಿ, ಈ ವಾಕ್ಯಗಳನ್ನು ನಾವು **ಅರಿಕೆಮಾಡಿಕೊಳ್ಳುತ್ತೇವೆ**. ನಾವು ಮೃದುವಾದ ಕೇಳಿಸುವ ಧ್ವನಿಯಲ್ಲಿ, *"ನಿಜವಾಗಿಯೂ ನಮ್ಮ ಸಂಕಟಗಳನ್ನು ಅನುಭವಿಸಿದನು; ಯೇಸು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು"* ಎಂದು ಹೇಳುತ್ತೇವೆ (ಯೆಶಾಯ 53:4). ಇದನ್ನು ನಾವು ಅನೇಕ ಸಲ ಮತ್ತೆಮತ್ತೆ ಹೇಳೋಣ. ಅಥವಾ ಈ ಶಾಸ್ತ್ರಗಳ ಅರ್ಥವೇನು ಎಂದು ನಮಗೆ ನಾವೇ ಹೇಳಿಕೊಳ್ಳಲು ನಾವು ಬಯಸುತ್ತಿರಬಹುದು. ನನ್ನ ಧ್ಯಾನದ ಸಮಯಗಳಲ್ಲಿ, ಕೆಲವೊಮ್ಮೆ, ನನಗೆ ನಾನೇ ವಾಕ್ಯಗಳನ್ನು ಬೋಧನೆ ಮಾಡಿಕೊಳ್ಳುತ್ತೇನೆ. ಇನ್ನು ಕೆಲವೊಮ್ಮೆ, ನಾನು ಶಾಸ್ತ್ರದ ವಚನಗಳನ್ನು ದೇವರಿಗೆ ಪ್ರಾರ್ಥನೆ ಮಾಡುವಾಗ ಅರಿಕೆಮಾಡಿಕೊಳ್ಳುತ್ತೇನೆ. ಉದಾಹರಣೆಗೆ, ಈ ವಚನಗಳನ್ನು ನಾವು ಧ್ಯಾನಿಸುತ್ತಾ ಇರುವದಾದರೆ, ನಾವು ಪ್ರಾರ್ಥನೆ ಮಾಡುತ್ತಾ ಹೇಳುವದೇನಂದರೆ, *"ತಂದೆಯೇ, ನಿನ್ನ ವಾಕ್ಯಕ್ಕಾಗಿ ನಾನು ನಿನಗೆ ಸ್ತೋತ್ರ ಹೇಳುತ್ತೇನೆ. ಈ ವಾಕ್ಯಗಳ ಪ್ರಕಾರ, ಯೇಸು ಕ್ರಿಸ್ತನು ನನ್ನ ರೋಗಗಳನ್ನು ಹೊತ್ತುಕೊಂಡದಕ್ಕೆ ಮತ್ತು ನನ್ನ ಸಂಕಷ್ಟಗಳನ್ನು ಅನುಭವಿಸಿದ್ದಕ್ಕೆ, ತಂದೆಯೇ, ಧನ್ಯವಾದಗಳು. ಆತನು ನನ್ನೆಲ್ಲಾ ಸಂಕಟಗಳನ್ನು ಹೊತ್ತುಕೊಂಡನು ಮತ್ತು ನನ್ನ ಸಂಕಷ್ಟಗಳನ್ನು ಅನುಭವಿಸಿದನು. ತಂದೆಯೇ, ಆದ್ದರಿಂದ ನಾನು, ನನ್ನ ದೇಹದಲ್ಲಿ ರೋಗ ಮತ್ತು ಕಾಯಿಲೆಯನ್ನು ಹೊತ್ತುಕೊಳ್ಳಬೇಕಾಗಿಲ್ಲವಾದ್ದರಿಂದ, ಧನ್ಯವಾದಗಳು."*

ವಾಕ್ಯವನ್ನು ಈ ರೀತಿಯಾಗಿ ಅರಿಕೆಮಾಡಿಕೊಳ್ಳುವದರಿಂದ ನಮ್ಮ ಜೀವಿತಗಳ ಮೇಲೆ ದೊಡ್ಡ ಪರಿಣಾಮ ಉಂಟಾಗುತ್ತದೆ. ಇದು ದೇವರ ವಾಕ್ಯವನ್ನು ನಮ್ಮ ಆಂತರ್ಯದ ಮನುಷ್ಯನೊಳಗೆ ಬಲಪಡಿಸುತ್ತದೆ. ನಮ್ಮ ನಂಬಿಕೆಯು ಹೆಚ್ಚಾಗುತ್ತದೆ ಯಾಕಂದರೆ ನಂಬಿಕೆಯು ದೇವರ ವಾಕ್ಯವನ್ನು ಕೇಳಿಸಿಕೊಳ್ಳುವದರಿಂದ ಬರುತ್ತದೆ (ರೋಮಾಪುರದವರಿಗೆ 10:17). ನಾವು ವಾಕ್ಯವನ್ನು ಈ ರೀತಿಯಾಗಿ ಅರಿಕೆಮಾಡಿಕೊಳ್ಳುವಾಗ, ನಾವು ನಿಜವಾಗಿಯೂ ದೇವರ ವಾಕ್ಯವನ್ನು ಕೇಳಿಸಿಕೊಳ್ಳುವವರಾಗಿದ್ದೇವೆ. ವಾಕ್ಯವನ್ನು ಅರಿಕೆಮಾಡಿಕೊಳ್ಳುವ ಸ್ಥಿರವಾದ ಅಭ್ಯಾಸವು ಖಂಡಿತವಾಗಿಯೂ ನಾವು ಮಾತನಾಡುವ ರೀತಿಯನ್ನು ಬದಲಾಯಿಸುತ್ತದೆ. ನಿಜವಾಗಿ ಹೇಳುವದಾದರೆ, ಕರ್ತನು ತನ್ನ ವಾಕ್ಯವನ್ನು ನಾವು ಯಾವಾಗಲೂ ನಮ್ಮ

ಬಾಯಲ್ಲಿ ಇಟ್ಟುಕೊಂಡಿರಬೇಕು ಎಂದು ತಿಳಿಸಿರುವಾಗ, ಆತನ ವಾಕ್ಯ ಹೇಳುವದಕ್ಕೆ ಏನಾದರೂ ವಿರುದ್ಧವಾದದ್ದು ಇರುವದಾದದರೆ ಅದು ನಮ್ಮ ಮಾತಿನ ಭಾಗವಾಗಿರಬಾರದು ಎಂಬದನ್ನು ಅದು ಸೂಚಿಸುತ್ತದೆ.

ದೇವರ ವಾಕ್ಯವನ್ನು ಧ್ಯಾನಿಸುವ ಮೂಲಕ ಆತನನ್ನು ಭೇಟಿಮಾಡುವದು ಮತ್ತು ಆತನೊಂದಿಗೆ ಅನ್ಯೋನ್ಯತೆಯಲ್ಲಿರುವದು

ಕೀರ್ತನೆಗಳು 63:1-6

[1] ದೇವರೇ, ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರುನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ; ಶರೀರವು ಕಂದಿಹೋಗುತ್ತದೆ.

[2] ನಿನ್ನ ಮಂದಿರದಲ್ಲಿ ನಾನು ನಿನ್ನ ಮಹತ್ತನ್ನೂ ಪ್ರಭಾವವನ್ನೂ ಕಂಡ ಪ್ರಕಾರ ಈಗಲೂ ಕಾಣಬೇಕೆಂದು ಅಪೇಕ್ಷಿಸುತ್ತೇನೆ.

[3] ನಿನ್ನ ಪ್ರೇಮಾನುಭವವು ಜೀವಕ್ಕಿಂತಲೂ ಶ್ರೇಷ್ಠ; ನನ್ನ ಬಾಯಿ ನಿನ್ನನ್ನು ಕೀರ್ತಿಸುವದು.

[4] ನನ್ನ ಜೀವಮಾನದಲ್ಲೆಲ್ಲಾ ಹೀಗೆಯೇ ನಿನ್ನನ್ನು ಹಾಡಿಹರಸುತ್ತಾ ನಿನ್ನ ಹೆಸರೆತ್ತಿ ಕೈಮುಗಿಯುವೆನು.

[5] ಮೃಷ್ಟಭೋಜನದಿಂದಲೋ ಎಂಬಂತೆ ನನ್ನ ಮನಸ್ಸು ಸಂತುಷ್ಟವಾಗಿರುವದು; ನನ್ನ ಬಾಯಿ ಉತ್ಸಾಹಧ್ವನಿಮಾಡುತ್ತಾ ನಿನ್ನನ್ನು ಕೊಂಡಾಡುವದು.

[6] ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು.

ಸತ್ಯವೇದಾನುಸಾರವಾದ ಧ್ಯಾನವು ಪ್ರಾಥಮಿಕವಾಗಿ ಕರ್ತನೊಂದಿಗಿನ ನಿಕಟವಾದ ಅನ್ಯೋನ್ಯತೆಯ ಸಮಯವಾಗಿರುತ್ತದೆ. ಮೇಲೆ ಕೊಡಲಾಗಿರುವ ವಚನಭಾಗದಲ್ಲಿ, ಕೀರ್ತನೆಗಾರನು, ತಾನು ಕುತೂಹಲದಿಂದ ಕರ್ತನನ್ನು ಎದುರುನೋಡುತ್ತಿರುವದನ್ನು ವ್ಯಕ್ತಪಡಿಸಿದ್ದಾನೆ. ದೇವರ ವಿಷಯದಲ್ಲಿ ಅವನಿಗಿದ್ದ ಬಯಕೆಯು ಅವನು ದೇವರನ್ನು ಆತನ ಮಂದಿರದಲ್ಲಿ ಹುಡುಕುವಂತೆ ಮತ್ತು ದೇವರಿಗೆ ಕೈಮುಗಿಯುತ್ತಾ ಹಾಗೂ ಸಂತೋಷದ ತುಟಿಗಳಿಂದ ಕೀರ್ತಿಸುವಂತೆ ಮಾಡಿತು. ರಾತ್ರಿಯ ಜಾವಗಳ ಪ್ರಶಾಂತತೆಯಲ್ಲಿ ಅವನು ಕರ್ತನ ಕಾರ್ಯಗಳನ್ನು ಧ್ಯಾನಿಸುವಂತೆ ಮಾಡಿತು. ಇದೇ ಪ್ರಕಾರ, ದೇವರೊಂದಿಗಿನ ನಿಕಟತೆಯನ್ನು ನಮ್ಮ ಮನಸ್ಸುಗಳು ಕುತೂಹಲದಿಂದ ಎದುರುನೋಡುತ್ತಿರುವಾಗ, ನಾವು ನಮ್ಮ ಆಲೋಚನೆಗಳು ಮತ್ತು ಮಾತುಗಳು ಸಂಪೂರ್ಣವಾಗಿ ಕರ್ತನ ಕಡೆಗೆ ಗಮನಕೊಡಲು ಅನುಮತಿಸುತ್ತೇವೆ. ನಾವು ವಾಕ್ಯವನ್ನು ಆಳವಾಗಿ ಧ್ಯಾನಿಸುವ ಕಡೆಗೆ

ಸಾಗುವಾಗ, ನಮ್ಮ ಬುದ್ಧಿಶಕ್ತಿಯಿಂದ ವಾಕ್ಯವನ್ನು ಸುಮ್ಮನೆ ವಿಶ್ಲೇಷಿಸುವ ಬದಲು ದೇವರನ್ನು ಭೇಟಿಮಾಡಿ ಆತನೊಂದಿಗಿನ ಅನ್ಯೋನ್ಯತೆಯನ್ನು ಅನುಭವಿಸುತ್ತೇವೆ. ಅದು ದೇವರು ವರ್ತಮಾನದಲ್ಲಿ ನಮ್ಮೊಂದಿಗೆ ನೇರವಾಗಿ ಮಾಡನಾಡುತ್ತಿರುವ ವಾಕ್ಯವಾಗುತ್ತದೆ. ಆತನ *"ಸೂಕ್ಷ್ಮ ಧ್ವನಿಯು"* (1 ಅರಸುಗಳು 19:12) ಆ ಕ್ಷಣದ ನಿಶ್ಯಬ್ದದಲ್ಲಿ ಗಟ್ಟಿ ಮತ್ತು ಸ್ಪಷ್ಟವಾಗಿರುತ್ತದೆ. ದೇವರ ಪ್ರಸನ್ನತೆಯು ನಮ್ಮನ್ನು ಆವರಿಸಿಕೊಳ್ಳುತ್ತದೆ. ಅದು ಕರ್ತನು ನಮ್ಮೊಳಗೆ ಆಳವಾಗಿ ಕಾರ್ಯಮಾಡುವ, ತನ್ನ ಶಕ್ತಿಯುತವಾದ ವಾಕ್ಯದ ಮೂಲಕ ನಮ್ಮ ಆಂತರ್ಯವನ್ನು ಬದಲಾಯಿಸುವ ಸಮಯವಾಗುತ್ತದೆ. ಆ ಸಮಯದಲ್ಲಿ, ಕರ್ತನು ಹೇಳುವ ಮಾತುಗಳಿಗೆ ಮತ್ತು ನಮ್ಮ ಹೃದಯಗಳಲ್ಲಿ ಮಾಡುವ ಕಾರ್ಯಗಳಿಗೆ ನಾವು ಪ್ರತಿಕ್ರಿಯಿಸಬಹುದು. ನಾವು ಪಶ್ಚಾತ್ತಾಪ, ನಂಬಿಕೆ, ಸಂತೋಷ, ಸ್ತುತಿ ಮತ್ತು ಕೃತಜ್ಞತೆಯನ್ನು ಕರ್ತನಿಗೆ ಆತನ ವಾಕ್ಯದ ಆಧಾರದ ಮೇರೆಗೆ ವ್ಯಕ್ತಪಡಿಸಬಹುದು. ಆಳವಾದ ಆಂತರಿಕ ಪ್ರಾರ್ಥನೆಗಳು, ಅಥವಾ ಸೂಕ್ಷ್ಮ ಧ್ವನಿಯ ಮಾತುಗಳು, ಅಥವಾ ಬಲವಾದ ದೃಢತೆಯುಳ್ಳ ಅರಿಕೆಗಳ ಮೂಲಕ, ನಾವು ಕರ್ತನ ಎದುರು ನಮ್ಮ ಆಲೋಚನೆಗಳು, ಭಾವನೆಗಳು, ಬಯಕೆಗಳು ಮತ್ತು ದೋಷಗಳನ್ನು ಬಿಡುಗಡೆ ಮಾಡುತ್ತೇವೆ. ಸತ್ಯದ ಪ್ರಕಟನೆಯು ಒಳಗಡೆ ಉಕ್ಕಿ ಹರಿಯಲು ಪ್ರಾರಂಭಿಸುತ್ತದೆ. ಆತನ ರಾಜ್ಯದ ಗೂಢಾರ್ಥಗಳನ್ನು ನೋಡಲು ಮತ್ತು ಅರ್ಥಮಾಡಿಕೊಳ್ಳಲು ನಮ್ಮ ಆತ್ಮೀಕ ಕಣ್ಣುಗಳು ತೆರೆಯಲ್ಪಡುತ್ತವೆ. ನಮ್ಮ ಆಂತರ್ಯದ ವ್ಯಕ್ತಿಯಲ್ಲಿ ಸತ್ಯವು ಬಲಗೊಳ್ಳುತ್ತದೆ ಮತ್ತು ದೃಢವಾಗುತ್ತದೆ. ನಮ್ಮ ಮನಸ್ಸುಗಳಲ್ಲಿರುವ ಸುಳ್ಳುಗಳು, ವಂಚನೆಗಳು ಮತ್ತು ಬಲವಾದ ಕೋಟೆಗಳು ಕೆಡವಲ್ಪಡುತ್ತವೆ. ನಾವು ಆತನ ಪರಿಶುದ್ಧವಾದ ವಾಕ್ಯವನ್ನು ಧ್ಯಾನಿಸುವದು ಕರ್ತನೊಂದಿಗಿನ ಸುಮಧುರವಾದ ಅನ್ಯೋನ್ಯತೆ ಮತ್ತು ವೈಯಕ್ತಿಕವಾದ ನಿಕಟ ಭೇಟಿಯ ಸಮಯವಾಗಿರುತ್ತದೆ.

ಧ್ಯಾನದ ಪರಿಣಾಮಗಳು

2 ಕೊರಿಂಥದವರಿಗೆ 10:3-5

[3] ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧಮಾಡುವವರಲ್ಲ.

[4] ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ.

[5] ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ

ಸೆರೆಹಿಡಿದು,

ವಿಶ್ವಾಸಿಗಳಿಗೆ ಎದುರಾಗುವ ಕೆಲವು ಸವಾಲುಗಳನ್ನು ಮೇಲಿನ ವಚನಭಾಗದಲ್ಲಿ ಪಟ್ಟಿಮಾಡಲಾಗಿದೆ. ಅವುಗಳು ಯಾವುವೆಂದರೆ *"ಕೋಟೆಗಳು," "ವಿತರ್ಕಗಳು," "ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಕಾರ್ಯಗಳು,"* ಮತ್ತು *"ಎಲ್ಲಾ ಯೋಚನೆಗಳು."* ಇವೆಲ್ಲವೂ ವಿಶ್ವಾಸಿಯ ಮನಸ್ಸಿಗೆ ಸಂಬಂಧಪಟ್ಟವುಗಳಾಗಿವೆ. ಮನಸ್ಸು ರಣರಂಗವಾಗಿದೆ. ಯುದ್ಧದ ಈ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಜಯವನ್ನು ಅನುಭವಿಸಲು ಯಶಸ್ವಿಯಾದ ಹೋರಾಟ ನಡೆಸುವದಕ್ಕಾಗಿ ದೇವರು ನಮಗೆ ಆಯುಧಗಳನ್ನು ಕೊಟ್ಟಿದ್ದಾನೆ. ಆದರೂ, ಸಮಸ್ಯೆ ಏನೆಂದರೆ, ವಿಶ್ವಾಸಿಗಳಾಗುವ ಬಹಳಷ್ಟು ಜನರು (ಬರೆಯಲ್ಪಟ್ಟಿರುವ ದೇವರ ವಾಕ್ಯದಲ್ಲಿ ತಿಳಿಸಲಾಗಿರುವ ಪ್ರಕಾರವೇ) ದೇವಜ್ಞಾನವನ್ನು ವಿರೋಧಿಸುವಂಥ ಕೋಟೆಗಳು, ಊಹೆಗಳು, ವಿತರ್ಕಗಳು ಮತ್ತು ಆಲೋಚನೆಗಳಲ್ಲಿ ಮುಂದುವರೆಯುತ್ತಾರೆ. ಪರಿಣಾಮವಾಗಿ, ಅನೇಕರು ತಮ್ಮ ಜೀವಿತಗಳ ಬಹಳಷ್ಟು ವಿಷಯಗಳಲ್ಲಿ ಸೋತುಹೋದವರಾಗಿ ಮತ್ತು ಬಂಧನದಲ್ಲಿರುವವರಾಗಿ ಜೀವಿಸುತ್ತಾರೆ.

ವಾಕ್ಯದ ಧ್ಯಾನವು, ಎಲ್ಲವನ್ನೂ ಗುಣಪಡಿಸುವದಿಲ್ಲವಾದರೂ, ಪ್ರಾಮುಖ್ಯವಾದ ಕ್ರಮಶಿಕ್ಷಣವಾಗಿದ್ದು ಮನಸ್ಸಿನಲ್ಲಿರುವ ಈ ಸವಾಲುಗಳನ್ನು ಬಗೆಹರಿಸಿಕೊಳ್ಳಲು ಸಹಾಯ ಮಾಡುತ್ತದೆ. ಕ್ರಮಶಿಕ್ಷಣವುಳ್ಳವರಾಗಿ ವಾಕ್ಯಗಳ ಧ್ಯಾನವನ್ನು ತಪ್ಪದೆ ಅಭ್ಯಾಸ ಮಾಡುವದರಿಂದ ಕೋಟೆಗಳನ್ನು ನಾವು ಕೆಡವಿಹಾಕಬಹುದು. ದೇವರ ವಾಕ್ಯವನ್ನು ಧ್ಯಾನಿಸುವ ವ್ಯಕ್ತಿಯು ಬಹಳ ಸುಲಭವಾಗಿ ಊಹೆಗಳನ್ನು, ವಿತರ್ಕಗಳನ್ನು ಮತ್ತು ಆಲೋಚನೆಗಳನ್ನು ದೇವಜ್ಞಾನದಿಂದ (ದೇವರ ವಾಕ್ಯದಿಂದ) ಸೆರೆಹಿಡಿಯಬಹುದು.

ವಾಕ್ಯಗಳ ಎಡಬಿಡದ ಧ್ಯಾನದ ಫಲಿತಾಂಶವಾಗಿ ಮನಸ್ಸು ನೂತನಗೊಳ್ಳುತ್ತದೆ, ಮಾತುಗಳು ನೂತನಗೊಳ್ಳುತ್ತವೆ ಮತ್ತು ನಂಬಿಕೆ ನೂತನಗೊಳ್ಳುತ್ತದೆ. ನಮ್ಮ ಆಲೋಚನೆಯ ವಿಧಾನಗಳು, ನಮ್ಮ ಸ್ವಯಂ-ಚಿತ್ರಣ, ಆತ್ಮಗೌರವ ಮತ್ತು ನಮ್ಮ ವ್ಯಕ್ತಿತ್ವದ ಇತರೆ ವಿಷಯಗಳು ನಮ್ಮ ಮನಸ್ಸಿನ ಸ್ಥಿತಿಯ ಮೇಲೆ ಆಧಾರವಾಗಿರುವದರಿಂದ ಬದಲಾಗಲು ಪ್ರಾರಂಭಿಸುತ್ತವೆ. ನಾವು ಜೀವನ ಮತ್ತು ನಮ್ಮ ಭವಿಷ್ಯದ

ಕುರಿತು ಸಕಾರಾತ್ಮಕತೆಯುಳ್ಳವರು, ಆತ್ಮವಿಶ್ವಾಸವುಳ್ಳವರು ಮತ್ತು ನಿರೀಕ್ಷೆಯುಳ್ಳವರು ಆಗುತ್ತೇವೆ. ದರ್ಶನವಿಲ್ಲದವರಾಗಿದ್ದ ನಾವು ಧೈರ್ಯ ಮತ್ತು ಆಕ್ರಮಣಕಾರಿ ಕನಸುಗಾರರಾಗುತ್ತೇವೆ. ನಾವು ನೂತನಗೊಂಡಿರುವ ಶಬ್ದಕೋಶದಿಂದ ಮಾತನಾಡಲು ಪ್ರಾರಂಭಿಸುತ್ತೇವೆ. ಬಡತನ, ಸೋಲು ಮತ್ತು ಸ್ವಾನುಕಂಪದ ಮಾತುಕತೆಗಳಲ್ಲಿ ಬಂಧಿತರಾಗಿರುವ ಬದಲು, ದೇವರಲ್ಲಿ ನಮಗಿರುವ ಬಲವಾದ ನಂಬಿಕೆಯಿಂದ ನಾವು ಮಾತನಾಡುತ್ತೇವೆ. ಧ್ಯಾನದ ಮೂಲಕ ನಮ್ಮ ಹೃದಯಗಳಲ್ಲಿ ವಾಕ್ಯವನ್ನು ಸತತವಾಗಿ ಬಿತ್ತುವ ಮತ್ತು ಅದಕ್ಕೆ ನೀರು ಹಾಕುವದರಿಂದ ಅದು ನಮ್ಮೊಳಗೆ ದೇವರಲ್ಲಿನ ರೋಮಾಂಚಕ ನಂಬಿಕೆಯನ್ನು ಉಂಟುಮಾಡುತ್ತದೆ.

ಧ್ಯಾನದ ಫಲಗಳು

ಕೀರ್ತನೆಗಳು 1:1-3

1 ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ, ಧರ್ಮನಿಂದಕರೊಡನೆ ಕೂತುಕೊಳ್ಳದೆ

2 ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು.

3 ಅವನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.

ದೇವರ ವಾಕ್ಯವು ಅದ್ಭುತ ಬೀಜವಾಗಿದೆ. ಉಂಟುಮಾಡುವ ಸಾಮರ್ಥ್ಯ ಅದಕ್ಕಿದೆ. ವಾಕ್ಯವೆಂಬ ಬೀಜವು ನಮ್ಮ ಹೃದಯಗಳಲ್ಲಿ ಬಿತ್ತಲ್ಪಡುವಾಗ ದೇವರ ಒಳ್ಳೆಯ ಸಂತೋಷವು ನಮ್ಮ ಜೀವಿತಗಳಲ್ಲಿ ನೆರವೇರುತ್ತದೆ. ಧ್ಯಾನ ಎಂಬ ಪ್ರಕ್ರಿಯೆಯ ಮೂಲಕ ನಾವು ದೇವರ ವಾಕ್ಯವೆಂಬ ಬೀಜವನ್ನು ನಮ್ಮ ಹೃದಯಗಳಲ್ಲಿ ಬಿತ್ತುತ್ತೇವೆ ಮತ್ತು ಪೋಷಿಸುತ್ತೇವೆ. ಬೀಜವು ಮೊಳಕೆಯೊಡೆದು ತಕ್ಕ ಕಾಲದಲ್ಲಿ ಫಲವನ್ನು ಕೊಡುತ್ತದೆ. ಆದಕಾರಣ, ಧ್ಯಾನದ ಸ್ಥಿರವಾಗಿರುವ ಅಭ್ಯಾಸವು, ದೇವರ ವಾಕ್ಯವನ್ನು ಪ್ರಕಟವಾದ ವಾಸ್ತವವನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ಪ್ರಾಮುಖ್ಯವಾದ ಕೊಂಡಿಯಾಗಿದೆ.

ದೇವರ ವಾಕ್ಯವು ನಮ್ಮ ಜೀವಿತಗಳಲ್ಲಿ ಉಂಟುಮಾಡುವ ಕೆಲವು ಫಲಗಳ ಬಗ್ಗೆ ಆಲೋಚನೆ ಮಾಡಿರಿ.

- ದೇವರ ವಾಕ್ಯವು ನಾಶವಾಗದ ಬೀಜವಾಗಿದ್ದು ಪವಿತ್ರಾತ್ಮನ ಕಾರ್ಯದೊಂದಿಗೆ, ನಮ್ಮ ಜೀವಿತಗಳಲ್ಲಿ ನೂತನ ಜನನವನ್ನು ಉಂಟುಮಾಡುತ್ತದೆ (1 ಪೇತ್ರನು 1:23)

- ದೇವರ ವಾಕ್ಯವು ಔಷಧಿಯಂತಿದ್ದು ನಮ್ಮ ದೇಹದ ಪ್ರತಿಯೊಂದು ಭಾಗಕ್ಕೆ ಸ್ವಸ್ಥತೆಯನ್ನು ಉಂಟುಮಾಡುತ್ತದೆ. (ಜ್ಞಾನೋಕ್ತಿಗಳು 4:20-22; ಕೀರ್ತನೆಗಳು 107:20)

- ದೇವರ ವಾಕ್ಯದ ಪ್ರವೇಶವು ಒಳನೋಟ, ತಿಳುವಳಿಕೆ ಮತ್ತು ಜ್ಞಾನವನ್ನು ಉಂಟುಮಾಡುತ್ತದೆ. (ಕೀರ್ತನೆಗಳು 119:98-100,130)

- ದೇವರ ವಾಕ್ಯವು ಸಮೃದ್ಧಿ ಮತ್ತು ಯಶಸ್ಸಿಗೆ ಕಾರಣವಾಗುತ್ತದೆ. (ಯೆಹೋಶುವ 1:8; ಕೀರ್ತನೆಗಳು 1:3)

- ದೇವರ ವಾಕ್ಯವು ಆತ್ಮೀಕ ಬೆಳವಣಿಗೆ ಮತ್ತು ಪರಿಪಕ್ವತೆಗೆ ಕಾರಣವಾಗುತ್ತದೆ. (ಅಪೊಸ್ತಲರ ಕೃತ್ಯಗಳು 20:32)

ಇದಲ್ಲದೆ, ದೇವರು ತನ್ನ ವಾಕ್ಯದಲ್ಲಿ ನಮಗೆ ಇನ್ನೂ ಅನೇಕ ಆಶೀರ್ವಾದಗಳನ್ನು ಕೊಟ್ಟಿದ್ದಾನೆ.

ವಾಕ್ಯಗಳ ಧ್ಯಾನದ ಮೂಲಕ ಒಂದುವೇಳೆ ನಾವು ಬೀಜಗಳನ್ನು ನಮ್ಮ ಜೀವಿತಗಳಲ್ಲಿ ಬಿತ್ತು ಪೋಷಿಸಿದರೆ ಅವೆಲ್ಲವೂ ಫಲವನ್ನುಂಟು ಮಾಡುತ್ತವೆ.

ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಜೀವಿಸುವ ಮತ್ತು ಹಗಲಿರುಳು ದೇವರ ವಾಕ್ಯವನ್ನು ಧ್ಯಾನ ಮಾಡುವ ವ್ಯಕ್ತಿ ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅವನ ಬೇರುಗಳು ಪೌಷ್ಠಿಕಾಂಶ ಮತ್ತು ಚೈತನ್ಯದ ಒದಗಿಸುವಿಕೆಯೊಂದಿಗೆ ಯಾವಾಗಲೂ ಹೊಂದಿಕೊಂಡಿರುತ್ತದೆ. ನಾವು ತಪ್ಪದೆ ವಾಕ್ಯವನ್ನು ಧ್ಯಾನಿಸುವಾಗ ಹೀಗೆಯೇ ಆಗುತ್ತದೆ. ಆಂತರ್ಯದ ವ್ಯಕ್ತಿಯು ಕೊನೆಯಿಲ್ಲದ ಪೌಷ್ಠಿಕಾಂಶ ಮತ್ತು ಚೈತನ್ಯದ ಒದಗಿಸುವಿಕೆಯಿಂದ ಆಶೀರ್ವದಿಸಲ್ಪಡುತ್ತಾನೆ. ನಮ್ಮ ಜೀವಿತಗಳು ಫಲದಾಯಕ ಮತ್ತು ಫಲಭರಿತವಾಗುತ್ತವೆ.

ಧ್ಯಾನ ಮಾಡುವ ಕ್ರಮಶಿಕ್ಷಣವನ್ನು ಅಭಿವೃದ್ಧಿಪಡಿಸಿಕೊಳ್ಳುವದು

ಅನುದಿನದ ಕ್ರಮಶಿಕ್ಷಣ

ಕೀರ್ತನೆಗಳು 119:97

ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ.

ದೇವರ ವಾಕ್ಯವನ್ನು ಪ್ರತಿದಿನ ಧ್ಯಾನಮಾಡುವ ಕ್ರಮಶಿಕ್ಷಣವನ್ನು ನೀವು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ನಾವು ನಿಮ್ಮನ್ನು ಪ್ರೋತ್ಸಾಹಪಡಿಸಲು ಬಯಸುತ್ತೇವೆ. ಇದೊಂದು ರೂಢಿಯಾಗಲಿ, ದೈವೀಕ ಚಟವಾಗಲಿ. ವಾಕ್ಯವನ್ನು ಧ್ಯಾನ ಮಾಡುವದು ಕ್ರಮಶಿಕ್ಷಣವಾಗಿದ್ದು ನಮಗೆ ಧ್ಯಾನ ಮಾಡಬೇಕೆಂದು ಅನ್ನಿಸದೆ ಹೋದರೂ ಅಥವಾ ಮಾಡಲು ಆಗದಷ್ಟು ಬೇರೆ ಕೆಲಸಗಳಿದ್ದರೂ ತಪ್ಪದೆ ಮಾಡುವಂತೆ ಮಾಡುತ್ತದೆ. ಮತ್ತೊಂದು ಕಡೆಯಲ್ಲಿ, ನಾವು ದೇವರ ವಾಕ್ಯದಲ್ಲಿ ಶುದ್ಧವಾದ ಸಂತೋಷವುಳ್ಳವರಾಗಿ ಇದನ್ನು ಮಾಡಬೇಕು. ನಾವು ಕರ್ತನನ್ನು ಪ್ರೀತಿಸುತ್ತೇವೆ, ಆದ್ದರಿಂದ, ಆತನ ವಾಕ್ಯದಲ್ಲಿ ಆನಂದಿಸುತ್ತೇವೆ. ಇದು ನಮ್ಮನ್ನು ಧ್ಯಾನದ ಮೂಲಕ ದೇವರ ವಾಕ್ಯಕ್ಕೆ ತಡೆಯಿಲ್ಲದ ಗಮನ ಕೊಡುವಂಥ ಸಮಯಗಳಿಗೆ ನಡೆಸುತ್ತದೆ.

ವಿಶೇಷವಾದ ಅವಶ್ಯಕತೆಗಳಿರುವ ಸಮಯಗಳಲ್ಲಿ

ಕೀರ್ತನೆಗಳು 119:23,24,78

23 ಪ್ರಭುಗಳು ಕೂತುಕೊಂಡು ನನಗೆ ವಿರೋಧವಾಗಿ ಒಳಸಂಚುಮಾಡಿದರೂ ನಿನ್ನ ಸೇವಕನು ನಿನ್ನ ನಿಬಂಧನೆಗಳನ್ನೇ ಧ್ಯಾನಿಸುತ್ತಿರುವನು.

24 ನಿನ್ನ ಕಟ್ಟಳೆಗಳು ನನ್ನ ಆನಂದವು, ಅವೇ ನನ್ನ ಮಂತ್ರಾಲೋಚಕರು.

78 ಗರ್ವಿಷ್ಠರು ಮಾನಭಂಗಹೊಂದಲಿ; ಅವರು ಮೋಸದಿಂದ ನನಗೆ ಕೇಡುಮಾಡಿದ್ದಾರೆ. ನಾನಾದರೋ ನಿನ್ನ ನೇಮಗಳನ್ನು ಧ್ಯಾನಿಸುತ್ತಿರುವೆನು.

ಅನೇಕ ಸಮಯಗಳಲ್ಲಿ ನಾನು ವಿವಿಧ ಕಷ್ಟಗಳು, ಸವಾಲುಗಳು, ಪ್ರಶ್ನೆಗಳು ಮತ್ತು ಚಿಂತೆಗಳಿಗೆ ಒಳಗಾಗಿದ್ದೇನೆ ಹಾಗೂ ಈಗಲೂ ಅವುಗಳು ಎದುರಾಗುತ್ತಿವೆ. ಅಂಥ ಸಮಯಗಳಲ್ಲಿ, ಆತ್ಮಭರಿತನಾಗಿ ಪ್ರಾರ್ಥನೆ ಮಾಡುವದರೊಂದಿಗೆ, ನನಗೆ ಎದುರಾಗುತ್ತಿರುವ ಸವಾಲುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾತನಾಡುವ ವಚನಗಳನ್ನು ಧ್ಯಾನಮಾಡಲು ಸಹ ನಾನು ಪ್ರಯತ್ನಿಸುತ್ತೇನೆ. ನನ್ನ ಮನಸ್ಸು ಗೊಂದಲಕ್ಕೆ ಒಳಗಾಗಿರಬಹುದು, ಬರೀ ಪ್ರಶ್ನೆಗಳೇ ತುಂಬಿಕೊಂಡಿರಬಹುದು ಮತ್ತು ಯಾವುದೇ ಸ್ಪಷ್ಟತೆ ಇಲ್ಲದೆ ಇರಬಹುದು, ಆದರೆ ಆ ವಿಷಯದ ಬಗ್ಗೆ ದೇವರ ಆಲೋಚನೆಗಳನ್ನು

ಪ್ರಕಟಿಸುವ ವಚನಗಳನ್ನು ನಾನು ನೋಡುತ್ತೇನೆ. ನಾನು ಅವುಗಳನ್ನು ಧ್ಯಾನ ಮಾಡುತ್ತೇನೆ. ಅವು ನನ್ನ ಹೃದಯದಲ್ಲಿ ಸಮಾಧಾನ, ಶಾಂತತೆ ಮತ್ತು ಭರವಸೆಯನ್ನು ಕೊಡುತ್ತವೆ. ಬೇರೆ ಸಮಯಗಳಲ್ಲಿ, ನಾನು ನಿರ್ದಿಷ್ಟವಾದ ಸವಾಲನ್ನು ಎದುರಿಸುತ್ತಿರಬಹುದು ಮತ್ತು ಕರ್ತನಿಂದ ಹೆಚ್ಚಿನ ಬಲ ಹಾಗೂ ಪ್ರೋತ್ಸಾಹವನ್ನು ನಾನು ಹೊಂದಿಕೊಳ್ಳಬೇಕು ಎಂಬದು ನನಗೆ ಗೊತ್ತಿರುತ್ತದೆ. ಅಂಥ ಸಮಯಗಳಲ್ಲಿ, ನಾನು ಪರಿಸ್ಥಿತಿಗೆ ಹೊಂದಿಕೆಯಾಗುವಂಥ ವಚನಭಾಗಗಳನ್ನು ತೆರೆಯುತ್ತೇನೆ ಮತ್ತು ಅವುಗಳನ್ನು ಧ್ಯಾನಿಸುತ್ತೇನೆ. ವಚನಗಳು ಆತ್ಮವಿಶ್ವಾಸ ಮತ್ತು ಬಲದ ಮೂಲವಾಗುತ್ತವೆ. ನಾವೆಲ್ಲರೂ ಅಂಥ ಆಶೀರ್ವಾದಗಳ ಪ್ರಯೋಜನ ಪಡೆಯಬಹುದು.

ಉದ್ದೇಶಪೂರ್ವಕ ಅಭ್ಯಾಸ

ಕೀರ್ತನೆಗಳು 119:148

ಇರುಳಿನ ಒಂದೊಂದು ಜಾವವನ್ನು ಮುಂಗೊಂಡು ನಿನ್ನ ನುಡಿಯನ್ನು ಧ್ಯಾನಿಸುತ್ತೇನೆ.

ದೇವರ ವಾಕ್ಯವನ್ನು ಧ್ಯಾನಿಸುವದು ಅರ್ಥಹೀನವಾದ ಅಭ್ಯಾಸವಲ್ಲ, ಹಾಗೆಯೇ ತುಂಬಾ ಆತ್ಮೀಕರಾಗಿರುವವರಿಗೆ ಮಾತ್ರವಲ್ಲ. ನಾವೆಲ್ಲರೂ ಅದನ್ನು ಅಭ್ಯಾಸ ಮಾಡಬೇಕು. ತಕ್ಷಣದ ಪರಿಹಾರಗಳು ಮತ್ತು ತಕ್ಷಣದ ಅದ್ಭುತಗಳಿಗೆ ಪ್ರಾಮುಖ್ಯತೆ ಹೆಚ್ಚಿರುವ ಈ ಲೋಕದಲ್ಲಿ (ಕ್ರಿಸ್ತೀಯ ಲೋಕದಲ್ಲಿಯೂ ಸಹ), ಆತ್ಮೀಕ ಕ್ರಮಶಿಕ್ಷಣವನ್ನು ಅಭಿವೃದ್ಧಿಪಡಿಸಿಕೊಳ್ಳುವ ವಿಷಯವು ಪ್ರಸಿದ್ಧವಲ್ಲದಿರಬಹುದು. ಆದರೂ, ನಾವು ನಮ್ಮನ್ನು ಆತ್ಮೀಕ ಕಾರ್ಯಗಳ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳಬೇಕು ಎಂಬದಾಗಿ ನಮಗೆ ಪ್ರೋತ್ಸಾಹಪಡಿಸಲಾಗಿದೆ (1 ತಿಮೊಥೆಯನಿಗೆ 4:7). ಅಭ್ಯಾಸವು ಕ್ರಮಶಿಕ್ಷಣವಾಗಿದೆ. ಕ್ರಮಶಿಕ್ಷಣವು (ಸ್ವಯಂ-ಶಿಸ್ತು) ಸುಲಭವಾದ ಕಾರ್ಯವಾಗಿರದ ಸಮಯಗಳು ಇರಬಹುದು. ಕೆಲವೊಮ್ಮೆ ಕೆಲವು ತ್ಯಾಗದ ಅವಶ್ಯಕತೆ ಇರಬಹುದು. ಆದರೂ, ಕ್ರಮಶಿಕ್ಷಣದ ಬಹುಮಾನಗಳು ಶ್ರೀಮಂತವಾಗಿರುತ್ತವೆ ಮತ್ತು ನಿರಂತರವಾಗಿರುತ್ತವೆ. ದೇವರ ವಾಕ್ಯದ ಧ್ಯಾನದಲ್ಲಿ ಸಂತೋಷಿಸುವವರು ಮತ್ತು ಅದರಿಂದ ಘನವಾದ ಬಹುಮಾನಗಳನ್ನು ಹೊಂದುವವರಲ್ಲಿ ನೀವೂ ಒಬ್ಬರಾಗಿರಿ!

ಪ್ರಾಯೋಗಿಕ ಆಲೋಚನೆಗಳು

ದೇವರ ವಾಕ್ಯ ಧ್ಯಾನದ ಕ್ರಮಶಿಕ್ಷಣವನ್ನು ಅಭಿವೃದ್ಧಿಪಡಿಸಿಕೊಳ್ಳಲು

ನಮಗೆ ಸಹಾಯ ಮಾಡುವಂಥ ಕೆಲವು ಪ್ರಾಯೋಗಿಕವಾದ ಸಲಹೆಗಳನ್ನು ಈಗ ಹಂಚಿಕೊಳ್ಳಲು ನಾನು ಬಯಸುತ್ತೇನೆ. ಇವು ಕಾನೂನು ಕ್ರಮಗಳು ಅಥವಾ ನಿಯಮಗಳಲ್ಲ, ಮತ್ತು ನಮ್ಮನ್ನು ನಾವು ಯಾವುದೇ ಪ್ರಕ್ರಿಯೆ, ವಿಧಾನ ಅಥವಾ ವ್ಯವಸ್ಥೆಯ ಬಂಧನಗಳಿಗೆ ಒಳಪಡಿಸಿಕೊಳ್ಳಬಾರದು. ನನ್ನ ಜೀವಿತದಲ್ಲಿ ಉಪಯುಕ್ತವೆನಿಸಿದ ಕಾರ್ಯಗಳನ್ನು ನಾನು ಹಂಚಿಕೊಳ್ಳುತ್ತಾ ಇದ್ದೇನೆ; ನಾನು ನನ್ನ ಹದಿಹರೆಯದ ಪ್ರಾರಂಭದ ದಿನಗಳಲ್ಲಿ ಇವುಗಳನ್ನು ಮಾಡುತ್ತಿದ್ದೆನು. ಈ ಸಲಹೆಗಳು ನಿಮಗೂ ಉಪಯುಕ್ತವೆನಿಸಬಹುದು ಮತ್ತು ನಿಮ್ಮ ಸ್ವಂತ ಆತ್ಮೀಕ ಜೀವಿತಕ್ಕೂ ನೀವು ಅಳವಡಿಸಿಕೊಳ್ಳಬಹುದು. ನಿಮಗೆ ಉತ್ತಮವಾಗಿ ಹೊಂದಿಕೆಯಾಗುವ ರೀತಿಯಲ್ಲಿ ಆತನ ವಾಕ್ಯವನ್ನು ಧ್ಯಾನಿಸುವ ಅಭ್ಯಾಸಕ್ಕಾಗಿ ಕರ್ತನು ನಿಮಗೆ ಇನ್ನೂ ಹೆಚ್ಚಿನ ಆಲೋಚನೆಗಳನ್ನು ಕೊಡಲಿ.

ನಾನು ಇಲ್ಲಿ ಮೂರು ಪ್ರಾಯೋಗಿಕವಾದ ಆಲೋಚನೆಗಳನ್ನು ಹಂಚಿಕೊಳ್ಳುತ್ತಾ ಇದ್ದೇನೆ.

1) ವಾಕ್ಯದ ಬೀಜಗಳು

2) ಅನುದಿನ ವಾಕ್ಯವನ್ನು ಧ್ಯಾನಿಸುವ ನಿತ್ಯಕ್ರಮ

3) ಚಿಂತನಶೀಲ ಸತ್ಯವೇದ ಪಾರಾಯಣ

ವಾಕ್ಯದ ಬೀಜಗಳು

ನನ್ನ ಆತ್ಮೀಕ ಪ್ರಯಾಣದ ಪ್ರಾರಂಭದಲ್ಲಿ, ನನ್ನ ಹದಿಹರೆಯದ ಪ್ರಾರಂಭದ ದಿನಗಳಲ್ಲಿ, ಶಾಸ್ತ್ರದ ವಚನಗಳನ್ನು ಧ್ಯೇಯಗಳು ಅಥವಾ ವಿಷಯಗಳಾಗಿ ವರ್ಗೀಕರಿಸುವದನ್ನು ನಾನು ಕಲಿತುಕೊಂಡೆನು. ಇದು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ವರ್ಗೀಕರಿಸಿ ಕಪಾಟಿನಲ್ಲಿ ಇಡುವದಕ್ಕೆ ಸಮಾನವಾಗಿದೆ. ಅಂಥ ವಿಷಯಗಳು / ಧ್ಯೇಯಗಳ ಮಾದರಿ ಪಟ್ಟಿಯನ್ನು ಈ ಪುಸ್ತಕದ ಕಡೇ ಅಧ್ಯಾಯನದಲ್ಲಿ ಕೊಡಲಾಗಿದೆ. ನಾನು ನಿರ್ದಿಷ್ಟವಾದ ವಿಷಯ ಅಥವಾ ಧ್ಯೇಯದ ಕುರಿತು ದೇವರ ವಾಕ್ಯವನ್ನು ಧ್ಯಾನಿಸಲು ಬಯಸುವಾಗ, ನಾನು ಸುಲಭವಾಗಿ ನೆನಪಿಸಿಕೊಳ್ಳಬಹುದಾಗಿತ್ತು ಮತ್ತು ಸಂಬಂಧಿತ ಶಾಸ್ತ್ರಗಳನ್ನು ನೋಡಿಕೊಳ್ಳಬಹುದಾಗಿತ್ತು. ಆದ್ದರಿಂದ, ಒಂದುವೇಳೆ ನಾನು ನಂಬಿಕೆಯ ವಿಷಯದಲ್ಲಿ ಧ್ಯಾನ ಮಾಡಬೇಕೆಂದು ನನಗೆ ಅನ್ನಿಸಿದರೆ, ನಂಬಿಕೆಯ ವಿಷಯವಾಗಿ ನಾನು ಸಂಗ್ರಹಿಸಿರುವ ವಚನಗಳನ್ನು ನೋಡಿಕೊಳ್ಳುತ್ತಿದ್ದೆನು.

ಇದು ಬೀಜವನ್ನು ಬಿತ್ತುವದಕ್ಕೆ ಸಮಾನವಾಗಿರುತ್ತದೆ. ಪ್ರಾಕೃತ ರಂಗದಲ್ಲಿ, ನಾವು ಬಯಸುವ ಸುಗ್ಗಿಯ ಪ್ರಕಾರ ಬೀಜವನ್ನು ಬಿತ್ತುತ್ತೇವೆ ಎಂದು ನಮಗೆ ಅರ್ಥವಾಗುತ್ತದೆ ಯಾಕಂದರೆ ಪ್ರತಿಯೊಂದು ಬೀಜವು ತನ್ನ ಜಾತಿಗನುಸಾರ ಬೆಳೆಯನ್ನು ಕೊಡುತ್ತದೆ ಎಂದು ನಮಗೆ ಗೊತ್ತಿದೆ. ಇದೇಪ್ರಕಾರ, ನಿರ್ದಿಷ್ಟವಾದ ವಿಷಯಗಳು ಅಥವಾ ಧ್ಯೇಯಾನುಸಾರ ವಾಕ್ಯಗಳನ್ನು ಧ್ಯಾನಿಸುವ ಮೂಲಕ, ನಮ್ಮ ಅವಶ್ಯಕತೆಗನುಸಾರವಾಗಿ ನಾವು ಬೀಜಗಳನ್ನು ಬಿತ್ತುವವರಾಗಿರುತ್ತೇವೆ. ಇದು ಕಂಠಪಾಠದ ಪ್ರಕ್ರಿಯೆಯಲ್ಲಿಯೂ ಸಹಾಯ ಮಾಡುತ್ತದೆ ಯಾಕಂದರೆ ನೀವು ಈ ವಚನಗಳ ಬಗ್ಗೆ ಮತ್ತೆಮತ್ತೆ ಧ್ಯಾನ ಮಾಡುವಾಗ, ಅವು ನಿಮ್ಮ ನೆನಪಿನಲ್ಲಿ ಅಚ್ಚಳಿಯದಂತೆ ಮುದ್ರಣಗೊಳ್ಳುತ್ತವೆ.

ನಿರ್ದಿಷ್ಟವಾಗಿರುವ ಉದ್ದೇಶದನುಸಾರ ಬೋಧನೆ ಮಾಡಲು ಸಿದ್ಧವಾಗುವ ಸಮಯದಲ್ಲಿಯೂ ನಾನು ಇದನ್ನು ಉಪಯೋಗಿಸುತ್ತೇನೆ. ಪ್ರತಿಬಾರಿ ವಾಕ್ಯವನ್ನು ಬೋಧಿಸುವಾಗ ನಾವು ಸೂಚಕಕಾರ್ಯಗಳು, ಅದ್ಭುತಕಾರ್ಯಗಳು, ಮಹತ್ಕಾರ್ಯಗಳು ಮತ್ತು ಸ್ವಸ್ಥತೆಗಳ ಮೂಲಕವಾದ ಪವಿತ್ರಾತ್ಮನ ಪ್ರದರ್ಶನಗಳಿಗೆ ಮುಕ್ತರಾಗಿದ್ದೇವಾದರೂ, ಅಸಾಧಾರಣವಾದ ಪ್ರದರ್ಶನಗಳನ್ನು ನಿರ್ದಿಷ್ಟವಾಗಿ ನಿರೀಕ್ಷಿಸುವ ಸೇವೆಗಳನ್ನೂ ನಾವು ಹೊಂದಿದ್ದೇವೆ. ನಾವು ಸುವಾರ್ತಾ ಪ್ರಚಾರ ಕೂಟಗಳನ್ನು, ವಿಶೇಷವಾದ ಸ್ವಸ್ಥತೆ ಮತ್ತು ಅದ್ಭುತಗಳ ಆರಾಧನೆ ಹಾಗೂ ಇನ್ನಿತರ ಕೂಟಗಳನ್ನು ನಡೆಸಬಹುದು ಜನರು ಅದ್ಭುತಗಳನ್ನು ಮತ್ತು ಸ್ವಸ್ಥತೆಗಳನ್ನು ಹೊಂದಬೇಕು ಎಂಬದೇ ಅವುಗಳ ಉದ್ದೇಶವಾಗಿರುತ್ತದೆ. ಅಂತಹ ಆರಾಧನೆಗಳಲ್ಲಿ ಬೋಧನೆ ಮಾಡುವ ಸಿದ್ಧತೆಯ ಭಾಗವಾಗಿ, ಅನ್ಯಭಾಷೆಗಳಲ್ಲಿ ಹೆಚ್ಚಾಗಿ ಮಾತನಾಡುವದರೊಂದಿಗೆ, ಆತ್ಮನ ಅಭಿಷೇಕ, ವಿಶ್ವಾಸಿಯ ಅಧಿಕಾರ, ಆತ್ಮನ ವರಗಳು, ಸ್ವಸ್ಥತೆ, ಯೇಸು ಕ್ರಿಸ್ತನ ಅದ್ಭುತಕಾರ್ಯಗಳು, ನಂಬಿಕೆ, ಪ್ರವಾದನೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ವಚನಗಳನ್ನು ಧ್ಯಾನ ಮಾಡಲು ಸಹ ನಾನು ಸಮಯ ತೆಗೆದುಕೊಳ್ಳುತ್ತೇನೆ. ಇದು ನನ್ನ ಆತ್ಮವನ್ನು ತೀಕ್ಷ್ಣಗೊಳಿಸುತ್ತದೆ ಮತ್ತು ಬೋಧನೆಗೆ ನನ್ನನ್ನು ಸಿದ್ಧಮಾಡುತ್ತದೆ.

ಅನುದಿನ ವಾಕ್ಯ ಧ್ಯಾನದ ನಿತ್ಯಕ್ರಮ

ನಿರ್ದಿಷ್ಟವಾದ ಕ್ರೀಡೆಗಾಗಿ ತರಬೇತಿ ನಡೆಸುವ ಕ್ರೀಡಾಪಟುಗಳು ವಾರದ ನಿತ್ಯಕ್ರಮವನ್ನು ಪಾಲಿಸುತ್ತಾರೆ. ಅವರು ಒಂದೇ ತರಹದ ವ್ಯಾಯಾಮದ

ಕ್ರಮಗಳನ್ನು ಮತ್ತೆಮತ್ತೆ ಮಾಡುತ್ತಾ ಪ್ರತಿಬಾರಿ ಮತ್ತಷ್ಟು ಹೆಚ್ಚಿಗೆ ಮಾಡುತ್ತಾರೆ. ನನ್ನ ಆತ್ಮೀಕ ಪ್ರಯಾಣದ ಪ್ರಾರಂಭದ ವರ್ಷಗಳಲ್ಲಿ, ಅನುದಿನ ವಾಕ್ಯ ಧ್ಯಾನದ ನಿತ್ಯಕ್ರಮವನ್ನು ಪಾಲಿಸುತ್ತಿದ್ದೆನು. ನಾನು ಪ್ರತಿದಿನ ನಿರ್ದಿಷ್ಟವಾದ ವಿಷಯಗಳು / ಧ್ಯೇಯಗಳನ್ನು ಧ್ಯಾನಿಸುತ್ತಿದ್ದೆನು. ನಾನು ವಾಕ್ಯ ಬೀಜಗಳಿಂದ ವಚನಗಳನ್ನು ಉಪಯೋಗಿಸುತ್ತಿದ್ದೆನು ಮತ್ತು ಪ್ರತಿಯೊಂದು ವಚನವನ್ನು- ಓದುತ್ತಾ, ಅರಿಕೆಮಾಡಿಕೊಳ್ಳುತ್ತಾ, ಅದರಿಂದ ದೇವರನ್ನು ಆರಾಧನೆ ಮಾಡುತ್ತಾ, ಪ್ರತಿಯೊಂದು ವಚನವನ್ನೂ ಧ್ಯಾನಿಸುತ್ತಿದ್ದೆನು. ಪರಿಣಾಮವಾಗಿ, ಅವಶ್ಯವಿದ್ದಂತೆ ಧ್ಯೇಯಗಳು / ವಿಷಯಗಳನ್ನು ಧ್ಯಾನಿಸುವಂಥ ಸ್ವಾಭಾವಿಕ ಕಾರ್ಯಕ್ಕೆ ನಾನು ಒಳಗಾದೆನು. ನಿಮ್ಮ ಸದ್ಯದ ಪರಿಸ್ಥಿತಿ / ಅವಶ್ಯಕತೆಗಳ ಆಧಾರದಲ್ಲಿ ಇದೇ ರೀತಿಯ ಅನುದಿನದ ನಿತ್ಯಕ್ರಮವನ್ನು ನೀವು ಸೃಷ್ಟಿಸಿಕೊಳ್ಳಬಹುದು.

ಒಂದು ಸಮಯದಲ್ಲಿ ನಾನು ಉಪಯೋಗಿಸುತ್ತಿದ್ದ ಅನುದಿನ ವಾಕ್ಯ ಧ್ಯಾನದ ನಿತ್ಯಕ್ರಮದ ಮಾದರಿ ಹೀಗಿತ್ತು

ಭಾನುವಾರ	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ
ಪ್ರಾರ್ಥನೆ ಔದಾರ್ಯ	ನಂಬಿಕೆ	ದೈವೀಕ ಆರೋಗ್ಯ	ಕುಟುಂಬ	ಜ್ಞಾನ ಮತ್ತು ತಿಳುವಳಿಕೆ	ಯಶಸ್ಸು ಮತ್ತು ಸಮೃದ್ಧಿ	ಸೇವೆ ಮತ್ತು ಅದ್ಭುತಗಳು

ಚಿಂತನಶೀಲ ಸತ್ಯವೇದ ಪಾರಾಯಣ

ನನ್ನ ಆತ್ಮೀಕ ಪ್ರಯಾಣದಾದ್ಯಂತ ನನಗೆ ಅಪಾರವಾಗಿ ಸಹಾಯಮಾಡಿರುವ ಒಂದು ಅಭ್ಯಾಸ ಅಂದರೆ ಚಿಂತನಶೀಲ ಸತ್ಯವೇದ ಪಾರಾಯಣವಾಗಿದೆ. ಬಹಳಷ್ಟು ಸತ್ಯವೇದ ಪಾರಾಯಣ ಯೋಜನೆಗಳು ನಿರ್ದಿಷ್ಟವಾದ ಸಮಯಾವಧಿಯೊಳಗೆ ಇಂತಿಷ್ಟು ಸಂಖ್ಯೆಯ ಅಧ್ಯಾಯಗಳನ್ನು ಮತ್ತು ಪುಸ್ತಕಗಳನ್ನು ಪೂರ್ತಿಗೊಳಿಸುವ ಕಡೆಗೆ ಗಮನ ಕೊಡುತ್ತವೆ. ಅದು ಒಳ್ಳೆಯದು ಮತ್ತು ಪ್ರಯೋಜನಗಳನ್ನು ಹೊಂದಿರುತ್ತದೆಯಾದರೂ, ನಾನು ಓದುತ್ತಿರುವಂಥದ್ದನ್ನು ಓದಲು ಮತ್ತು ಧ್ಯಾನಿಸಲು ಸಮಯ ತೆಗೆದುಕೊಳ್ಳುವದಕ್ಕೆ ಆದ್ಯತೆಯನ್ನು ಕೊಡುತ್ತೇನೆ. ಆದ್ದರಿಂದ, ವಾಕ್ಯದಲ್ಲಿನ ನನ್ನ ಎಂದಿನ ಸಮಯ ಇಷ್ಟು ಅಧ್ಯಾಯಗಳನ್ನು ಮುಗಿಸಬೇಕು ಎಂಬದಲ್ಲ ಬದಲಾಗಿ, ವಾಕ್ಯದಿಂದ ವಿಷಯಗಳನ್ನು ತಿಳಿದುಕೊಳ್ಳುವದರ ಕಡೆಗೆ ಗಮನ ಕೊಡುವದಾಗಿದೆ. ಆದ್ದರಿಂದ, ನಾನು ಒಂದು ಅಧ್ಯಾಯದಲ್ಲಿ ಕೆಲವು

ವಚನಗಳನ್ನು ಓದುತ್ತೇನೆ ಮತ್ತು ಆ ಕೆಲವು ವಚನಗಳನ್ನು ಧ್ಯಾನಿಸಲು ಮತ್ತು ದೇವರನ್ನು ಭೇಟಿಮಾಡಲು, ಪ್ರಕಟನೆಯನ್ನು ಹೊಂದಲು, ಅದನ್ನು ಆಂತರಿಕವಾಗಿಸಿಕೊಳ್ಳಲು ಸಮಯ ತೆಗೆದುಕೊಳ್ಳುತ್ತೇನೆ ಆಮೇಲೆ ನಾನು ಮುಂದುವರೆಯಬೇಕು ಅನ್ನಿಸುವಾಗ ಮುಂದಿನ ವಚನಗಳಿಗೆ ಹೋಗುತ್ತೇನೆ. ಸಾಮಾನ್ಯವಾಗಿ, ಕೆಲವು ದಿನಗಳು ಒಂದೇ ರೀತಿಯ ವಚನಗಳಲ್ಲಿದ್ದು, 30 ಅಥವಾ ಹೆಚ್ಚು ನಿಮಿಷಗಳು ಓದುತ್ತಾ, ಚಿಂತಿಸುತ್ತಾ, ಧ್ಯಾನಿಸುತ್ತಾ ಮತ್ತು ಆ ವಚನಗಳ ಮೂಲಕ ದೇವರನ್ನು ಭೇಟಿಮಾಡುತ್ತಾ ಇರುತ್ತೇನೆ. ಅತ್ಯಂತ ಸಾಮಾನ್ಯವಾಗಿ, ದೇವರ ಪ್ರಸನ್ನತೆಯು ನನ್ನನ್ನು ಆವರಿಸಿಕೊಳ್ಳುತ್ತದೆ, ಪ್ರಕಟನೆಗಳು ಹರಿದು ಬರುತ್ತವೆ ಮತ್ತು ನನಗೆ ಕಾಣಿಸುವ ಹಾಗೂ ಅರ್ಥವಾಗುವ ವಿಷಯಗಳನ್ನು ನಾನು ಬರೆದಿಟ್ಟುಕೊಳ್ಳುತ್ತೇನೆ. ನನ್ನ ಜೀವನವು ಮಾರ್ಪಡುತ್ತದೆ. ಇದಲ್ಲದೆ, ಅನೇಕ ಪ್ರಸಂಗಗಳು ಅಂಥ ಸಮಯಗಳಲ್ಲಿಯೇ ಹುಟ್ಟುಕೊಂಡಿವೆ.

ಉದಾಹರಣೆಗೆ, 2019ರ ಸೆಪ್ಟೆಂಬರ್ ತಿಂಗಳಿನಲ್ಲಿ, ನಾನು ಮಾರ್ಕನ ಸುವಾರ್ತೆಯನ್ನು ಮತ್ತೆ ಓದಲು ಪ್ರಾರಂಭಿಸಿದೆನು. ನಾನು ಮಾರ್ಕ 1:1 ಓದಿದೆನು, *"ದೇವಕುಮಾರನಾದ ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆಯ ಪ್ರಾರಂಭವು"* ಮತ್ತು ಆ ಒಂದು ವಚನವನ್ನು ದಾಟಿಹೋಗಲು ನನಗೆ ಆಗಲಿಲ್ಲ. ನಾನು ನಾಲ್ಕು ದಿನಗಳ ತನಕ ಮಾರ್ಕ 1:1ರಲ್ಲಿಯೇ ಇದ್ದೆನು, ಪ್ರತಿದಿನ 30ಕ್ಕೂ ಹೆಚ್ಚು ನಿಮಿಷಗಳು, ಆ ವಚನದಲ್ಲಿ, ಮುಳುಗಿಹೋಗಿದ್ದೆನು. ನಾನು ಆ ವಾಕ್ಯವನ್ನು ಪ್ರತಿಬಾರಿ ಓದುವಾಗಲೂ ದೇವರ ಪ್ರಸನ್ನತೆ ನನ್ನನ್ನು ಆವರಿಸಿಕೊಳ್ಳುತ್ತಾ ಇತ್ತು. *"ದೇವಕುಮಾರನು"* ಎಂಬ ಪದಗಳು ಆ ಪುಟದಲ್ಲಿ ಎದ್ದು ಕಾಣುತ್ತಿದ್ದವು. ಮಾರ್ಕ 1:1ರಲ್ಲಿ ಆ ಭಾಗವನ್ನು ನಾನು ಧ್ಯಾನಿಸುತ್ತಾ ಇದ್ದಾಗ, ನನ್ನ ಕಲ್ಪನೆಯಲ್ಲಿ, ನಾನು ಅನಾದಿ ಕಾಲಕ್ಕೆ, ಕಾಲವು ಪ್ರಾರಂಭವಾಗುವದಕ್ಕಿಂತ ಮುಂಚೆ ನಿತ್ಯವಾದ ವಾಕ್ಯವು ತಂದೆ ಮತ್ತು ಆತ್ಮನೊಂದಿಗೆ ಇದ್ದ ಸಮಯಕ್ಕೆ ಹೋದೆನು ನಂತರ ಕಾಲದೊಂದಿಗೆ ಪ್ರಯಾಣಿಸಿ, ನಮಗೆ ಗೊತ್ತಿರುವ ಪ್ರಕಾರ ನಿತ್ಯವಾದ ವಾಕ್ಯವು ತನ್ನನ್ನು ಪ್ರಕಟಪಡಿಸಿಕೊಂಡದ್ದು ಮತ್ತು ತನ್ನ ಮರಣ, ಹೂಣಲ್ಪಡುವಿಕೆ, ಪುನರುತ್ಥಾನ, ಆರೋಹಣ ಮತ್ತು ಉನ್ನತ ಸ್ಥಾನಕ್ಕೆ ಬಂದದ್ದನ್ನು ನೋಡಿದೆನು. ಸಂಬಂಧಪಟ್ಟ ವಚನಗಳು ಸತ್ಯವೇದದ ಪುಟಗಳಿಂದ ದೊರೆಯುತ್ತಾ ಹೋದವು. ನಾವು ಸಾರುವ ಸುವಾರ್ತೆಯು ಈ ದೇವಕುಮಾರನ ಕುರಿತಾದ ಸುವಾರ್ತೆಯಾಗಿದೆ ಎಂಬ ಸತ್ಯವನ್ನು ಅರ್ಥಮಾಡಿಕೊಳ್ಳುವದು

ನಿಜವಾಗಿಯೂ ಅಗಾಧವಾದದ್ದಾಗಿತ್ತು. ಮಾರ್ಕ 1:1 ಧ್ಯಾನಿಸುತ್ತಿದ್ದ ಆ ನಾಲ್ಕು ದಿನಗಳು ದೇವಕುಮಾರನನ್ನು ಭೇಟಿಮಾಡಿದ ಘನವಾದ ಅನುಭವವಾಗಿತ್ತು. ನನ್ನಿಂದಾಗುವ ಎಲ್ಲವನ್ನೂ ನಾನು ಬರೆದುಕೊಂಡೆನು. ಆ ವಾಕ್ಯವನ್ನು ನನ್ನ ಆತ್ಮದಲ್ಲಿ ಬಿಗಿಯಾಗಿ ಹಿಡಿದುಕೊಂಡು ಅದು ಆಳವಾಗಿ ನೆಲೆಗೊಳ್ಳುವಂತೆ ಮಾಡಿದೆನು. ಅಂತಿಮವಾಗಿ ನಾನು ಆ ವಿಷಯಗಳನ್ನು 2019ರ ಕ್ರಿಸ್ ಮಸ್ ದಿನದಂದು ಬೋಧನೆ ಮಾಡಿದೆನು ಮತ್ತು ಬಂದಿದ್ದಂಥವರೊಂದಿಗೆ ಹಂಚಿಕೊಂಡೆನು (**apcwo.org/sermons** ನಲ್ಲಿ ಆ ಸಂದೇಶವನ್ನು ನೀವು ಕೇಳಬಹುದು).

ಬಹುಶಃ ನೀವು ಸಹ ಈ ಅಭ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು ಮತ್ತು ದೇವರ ವಾಕ್ಯವನ್ನು ಧ್ಯಾನಿಸುತ್ತಾ ಸಂತೋಷಿಸಬಹುದು.

7

ಬೀಜವನ್ನು ಕಾಪಾಡಬೇಕು ಮತ್ತು ಪೋಷಿಸಬೇಕು

ಸೈತಾನನು ಬೀಜದ ಹಿಂದೆ ಬಿದ್ದಿದ್ದಾನೆ

ಮತ್ತಾಯ 13:19

ಯಾವನಾದರೂ ಪರಲೋಕರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಆ ಮನುಷ್ಯನೇ ಬೀಜ ಬಿದ್ದ ದಾರೀ ಮಗ್ಗುಲಾಗಿರುವವನು.

ಮಾರ್ಕ 4:14,15

14 ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ.

15 ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು ತೆಗೆದುಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವವರು.

ಲೂಕ 8:11,12

11 ಈ ಸಾಮ್ಯದ ಅರ್ಥವೇನಂದರೆ–ಆ ಬೀಜವೆಂದರೆ ದೇವರ ವಾಕ್ಯ.

12 ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸೈತಾನನು ಬಂದು ಅವರು ನಂಬಿ ರಕ್ಷಣೆ ಹೊಂದಬಾರದೆಂದು ವಾಕ್ಯವನ್ನು ಅವರ ಹೃದಯದಿಂದ ತೆಗೆದುಬಿಡುತ್ತಾನೆ; ಇವರೇ ದಾರಿಯ ಮಗ್ಗುಲಾಗಿರುವವರು.

ಬಿತ್ತುವವನ ಸಾಮ್ಯವು ನಮಗೆ ಪ್ರಾಮುಖ್ಯವಾದ ಒಳನೋಟವನ್ನು ಕೊಡುತ್ತದೆ–ಸೈತಾನನು ವಾಕ್ಯದ ಹಿಂದೆ ಬಿದ್ದಿದ್ದಾನೆ. ದೇವರ ವಾಕ್ಯವನ್ನು ಕೇಳಿಸಿಕೊಳ್ಳುವದು, ಅಂಗೀಕರಿಸಿಕೊಳ್ಳುವದು ಮತ್ತು ನಮ್ಮ ಹೃದಯಗಳಲ್ಲಿ ಪೋಷಿಸುವದು ಎಷ್ಟು ಪ್ರಾಮುಖ್ಯ ಎಂಬದನ್ನು ಇದು ತೋರಿಸುತ್ತದೆ! ಒಂದುವೇಳೆ ನಾವು ವಾಕ್ಯವನ್ನು ಅಂಗೀಕರಿಸಿಕೊಂಡರೆ, ಅದು ನಮ್ಮ ಜೀವಿತದಲ್ಲಿ ಫಲವನ್ನು ಉಂಟುಮಾಡುತ್ತದೆ ಮತ್ತು ನಾವು ಜಯದಲ್ಲಿ, ಅಧಿಕಾರದಲ್ಲಿ ಮತ್ತು ದೊರೆತನದಲ್ಲಿ ನಡೆಯುವವರಾಗುವಂತೆ ಮಾಡುತ್ತದೆ ಎಂಬದು ಸೈತಾನನಿಗೆ ಗೊತ್ತಿದೆ. ಅಪೊಸ್ತಲನಾದ ಯೋಹಾನನು 1 ಯೋಹಾನ 2:14ರಲ್ಲಿ ಬರೆದಿರುವದೇನೆಂದರೆ, " ... *ಯೌವನಸ್ಥರೇ, ನೀವು ಶಕ್ತರಾಗಿರುವದರಿಂದಲೂ ದೇವರ ವಾಕ್ಯವು ನಿಮ್ಮಲ್ಲಿ ನೆಲೆಗೊಂಡಿರುವದರಿಂದಲೂ ನೀವು ಕೆಡುಕನನ್ನು ಜಯಿಸಿರುವದರಿಂದಲೂ*

ನಿಮಗೆ ಬರೆದಿದ್ದೇನೆ."

ಆದಕಾರಣ, ನಮ್ಮನ್ನು ದೇವರ ವಾಕ್ಯದಿಂದ ದೂರವಿಡುವದಕ್ಕಾಗಿ, ಸೈತಾನನು ಕೆಳಗೆ ಕೊಡಲಾಗಿರುವ ಕಾರ್ಯಗಳನ್ನು ಪ್ರಯತ್ನಿಸುತ್ತಾ ತನ್ನ ಶಕ್ತಿಯನ್ನು ಉಪಯೋಗಿಸುತ್ತಾನೆ, ಅವು ಯಾವುವೆಂದರೆ ...

- ನಿರಾಸಕ್ತಿ, ಆಲಸ್ಯ, ಕಾರ್ಯನಿರತವಾಗಿರುವುದು, ಸದಾ ಚಟುವಟಿಕೆಯಲ್ಲಿರುವಂಥದ್ದು, ತಡೆಗಳು, ಇತ್ಯಾದಿಗಳ ಮೂಲಕ ನಾವು ವಾಕ್ಯವನ್ನು ಕೇಳಿಸಿಕೊಳ್ಳದಂತೆ ತಡೆಯುವದು.
- ಗೊಂದಲಗಳು, ಸುಳ್ಳುಗಳು, ವಂಚನೆಗಳು, ಇತ್ಯಾದಿಗಳ ಮೂಲಕ ನಾವು ಅದನ್ನು ಅರ್ಥಮಾಡಿಕೊಳ್ಳದಂತೆ ತಡೆಯುವದು.
- ಸಂದೇಹಗಳು, ಅಪನಂಬಿಕೆ, ಹೆದರಿಕೆ, ಇತ್ಯಾದಿಗಳ ಮೂಲಕ ನಾವು ಅದನ್ನು ನಂಬದಂತೆ ತಡೆಯುವದು.

ಆದರೂ, ಕರ್ತನಾದ ಯೇಸು ಸೈತಾನನ ತಂತ್ರಗಳನ್ನು ನಮಗಾಗಿ ಬಯಲು ಮಾಡಿರುವದರಿಂದ, ನಾವು ಪ್ರತಿಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ನಮ್ಮ ಹೃದಯಗಳಲ್ಲಿ ದೇವರ ವಾಕ್ಯದ ಸಮೃದ್ಧವಾದ ಹೂಡಿಕೆಯನ್ನು ಮಾಡಿಕೊಳ್ಳಲು ನಮ್ಮ ಕಾರ್ಯವನ್ನು ದೃಢಪಡಿಸಿಕೊಳ್ಳಬೇಕು. ದೇವರ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ!

ವಾಕ್ಯವನ್ನು ಕಾಪಾಡಿಕೊಳ್ಳಿರಿ ಮತ್ತು ಪೋಷಿಸಿರಿ

ಬಿತ್ತುವವನ ಸಾಮ್ಯದಿಂದ ನಾವು ತಿಳಿದುಕೊಳ್ಳುವ ಮತ್ತೊಂದು ಪ್ರಾಮುಖ್ಯವಾದ ಒಳನೋಟ ಏನೆಂದರೆ ಬೀಜವು ಫಲ ಕೊಡಬೇಕಾದರೆ ಕಾಲ ಕ್ರಮೇಣ ಅದನ್ನು ಕಾಪಾಡಿಕೊಳ್ಳಬೇಕು ಮತ್ತು ಪೋಷಿಸಬೇಕು. ತೋಟಗಾರಿಕೆ ಅಥವಾ ವ್ಯವಸಾಯದ ತಿಳುವಳಿಕೆಯಿದ್ದರೆ ಇದನ್ನು ನಾವು ಬೇಗ ಅರ್ಥಮಾಡಿಕೊಳ್ಳುತ್ತೇವೆ.

ಬೀಜವು ಫಲ ಕೊಡದಂತೆ ಮಾಡುವ ಅಥವಾ ನಮ್ಮ ಸುಗ್ಗಿಯನ್ನು ಕದ್ದುಕೊಳ್ಳುವಂತೆ ಮಾಡುವ ಎರಡು ಪ್ರಾಮುಖ್ಯವಾದ ಕ್ಷೇತ್ರದಲ್ಲಿನ ಅಪಾಯದ ಬಗ್ಗೆ ಕರ್ತನಾದ ಯೇಸು ಕ್ರಿಸ್ತನು ಒತ್ತಿ ಹೇಳಿದ್ದಾನೆ. ಆತನು

ಹೇಳಿರುವದೇನೆಂದರೆ ...

- ವಾಕ್ಯಕ್ಕೆ ವಿರುದ್ಧವಾದ ಹಿಂಸೆಗಳು ಮತ್ತು ಸಂಕಟಗಳು ಹಾಗೂ
- ಈ ಲೋಕದ ಚಿಂತೆಗಳು, ಐಶ್ವರ್ಯದಿಂದಾಗುವ ವಂಚನೆ, ಇತರೆ ವಿಷಯಗಳ ಮತ್ತು ಜೀವನದ ಸುಖಭೋಗಗಳ ಮೇಲಣ ಆಶೆಗಳು.

ಪ್ರತ್ಯೇಕವಾದ ಅಧ್ಯಾಯಗಳಲ್ಲಿ ನಾವು ಸುಗ್ಗಿಗೆ ತಡೆಯನ್ನುಂಟು ಮಾಡುವ ಈ ಎರಡು ವಿಷಯಗಳನ್ನು ನಾವು ನೋಡಿಕೊಳ್ಳೋಣ.

ಮತ್ತೊಂದು ಪ್ರಾಮುಖ್ಯವಾದ ಅಂಶ ಬೀಜವನ್ನು ಪೋಷಿಸುವದು. ಸಹಜವಾಗಿ, ಬೀಜವು ಮೊಳಕೆಯೊಡೆದು, ಬೆಳೆದು, ಫಲ ಕೊಡಬೇಕಾದರೆ ಅದಕ್ಕೆ ಬೇಕಿರುವಷ್ಟು ಸೂರ್ಯನ ಬೆಳಕು, ನೀರು ಮತ್ತು ಪೌಷ್ಟಿಕಾಂಶಗಳು ಸಿಗುತ್ತಿವೆಯೇ ಎಂದು ನೋಡಿಕೊಳ್ಳುತ್ತೇವೆ. ಇದೇ ಪ್ರಕಾರ, ಬೀಜವೆಂಬ ದೇವರ ವಾಕ್ಯವು ಪೋಷಿಸಲ್ಪಡಲು ನಮ್ಮ ಹೃದಯಗಳಲ್ಲಿ ನಾವು ಸೂಕ್ತವಾದ ವಾತಾವರಣವನ್ನು ಕಾಪಾಡಿಕೊಳ್ಳಬೇಕು. ದೇವರ ವಾಕ್ಯವನ್ನು ನೀರು (ಎಫೆಸದವರಿಗೆ 5:26) ಮತ್ತು ಬೆಳಕು (ಕೀರ್ತನೆಗಳು 119:105) ಎಂಬದಾಗಿಯೂ ಕರೆಯಲಾಗಿದೆ. ಆದ್ದರಿಂದ, ನಾವು ಯಾವಾಗಲೂ ಧ್ಯಾನ ಮಾಡುತ್ತಾ (ನೀರು ಮತ್ತು ಬೆಳಕು ಕೊಟ್ಟು), ನಿರಂತರವಾಗಿ ಪ್ರಕಟನೆಗಳನ್ನು ಹೊಂದುತ್ತಾ (ಬಹುಶಃ ಪೌಷ್ಠಿಕಾಂಶಗಳ ಹಾಗೆ) ಮತ್ತು ಆತ್ಮಭರಿತರಾಗಿ ನಡೆಯುತ್ತಾ ವಾಕ್ಯದ ಬೀಜವನ್ನು ಪೋಷಿಸುತ್ತೇವೆ (ಕೊಲೊಸ್ಸೆಯವರಿಗೆ 3:15; ಎಫೆಸದವರಿಗೆ 5:18,19).

ದೇವರ ರಾಜ್ಯದ ಬೀಜ-ತತ್ವ

ಮಾರ್ಕ 4:26-29

26 ಇನ್ನೂ ಆತನು ಅವರಿಗೆ ಹೇಳಿದ್ದು-ಒಬ್ಬನು ಭೂಮಿಯಲ್ಲಿ ಬೀಜವನ್ನು ಹಾಕಿ ರಾತ್ರಿ
ಮಲಗುತ್ತಾ ಹಗಲು ಎದ್ದಿರುತ್ತಾ ಇರಲು,
27 ಅವನಿಗೆ ತಿಳಿಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯುವದು. ಇದರಂತೆ ದೇವರ ರಾಜ್ಯ.
28 ಭೂಮಿಯು ಮೊದಲು ಗರಿಯನ್ನೂ, ಆಮೇಲೆ ಹೊಡೆಯನ್ನೂ, ತರುವಾಯ ತೆನೆಯಲ್ಲಿ
ತುಂಬಾ ಕಾಳನ್ನೂ ತನ್ನಷ್ಟಕ್ಕೆ ತಾನೇ ಹುಟ್ಟಿಸುತ್ತದೆ.
29 ಆದರೆ ಫಲಮಾಗಿದ ಕೂಡಲೆ ಅವನು ಸುಗ್ಗಿ ಕಾಲ ಬಂತೆಂದು ಕೊಯಿಸುತ್ತಾನೆ.

ಬೀಜದ ಮೊಳಕೆಯೊಡೆಯುವಿಕೆಯು ಸಹಜವಾಗಿ ಮಣ್ಣಿನೊಳಗೆ

ಆಗುತ್ತದೆ. ಅದು ನಮಗೆ ಕಾಣಿಸದೆ ಇದ್ದರೂ ಅದು ಆಗುತ್ತಿದೆ ಎಂದು ನಮಗೆ ಗೊತ್ತಿರುತ್ತದೆ. ಅದಕ್ಕೆ ಸಮಯ ಹಿಡಿಯುತ್ತದೆ. ಸಮಯ ಬಂದಾಗ, ಮಣ್ಣಿನ ಮೇಲೆ ಮೊಳಕೆ ಕಾಣಿಸಿಕೊಳ್ಳುವಾಗ ಬೆಳವಣಿಗೆಯ ಗುರುತು ನಮಗೆ ಸಿಗುತ್ತದೆ. ಮತ್ತು ಅದು ಗಿಡವಾಗಿ ಅಥವಾ ಮರವಾಗಿ ಬೆಳೆಯಲು ಹಾಗೂ ಫಲವನ್ನು ಕೊಡಲು ಮತ್ತಷ್ಟು ಸಮಯ ಹಿಡಿಯುತ್ತದೆ.

ಬಿತ್ತುವವನ ಸಾಮ್ಯದ ನಂತರ, ಕರ್ತನಾದ ಯೇಸು ಕ್ರಿಸ್ತನು ಮತ್ತೊಂದು ಸಾಮ್ಯವನ್ನು ಹೇಳಿದನು, ಮತ್ತೊಮ್ಮೆ ಬೀಜದ ಉದಾಹರಣೆಯಿಂದ, ದೇವರ ರಾಜ್ಯದ ಬಗ್ಗೆ ಕಲಿಸಿದನು (ಮಾರ್ಕ 4:26-29). ಈ ಸಾಮ್ಯದಲ್ಲಿ, ಕರ್ತನಾದ ಯೇಸು ಕ್ರಿಸ್ತನು ದೇವರ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಸಾಮಾನ್ಯವಾಗಿರುವ ಬೀಜ-ತತ್ವವನ್ನು ಪ್ರಕಟಪಡಿಸಿದನು. ಈ ಬೀಜ-ತತ್ವವು ದೇವರ ರಾಜ್ಯದಲ್ಲಿನ ನಮ್ಮ ಜೀವಿತದ ಅನೇಕ ವಿವಿಧ ಅಂಶಗಳಿಗೆ ಅನ್ವಯವಾಗುತ್ತದೆ. ಬೀಜ-ತತ್ವವು ಅದ್ಭುತ ಬೀಜವಾಗಿರುವ ದೇವರ ವಾಕ್ಯ ನಮ್ಮ ಜೀವಿತಗಳಲ್ಲಿ ಕಾರ್ಯಗಳನ್ನುಂಟು ಮಾಡುವ ಪ್ರಕ್ರಿಯೆಗೂ ಅನ್ವಯವಾಗುತ್ತದೆ.

ದೇವರ ರಾಜ್ಯದ ಬೀಜ-ತತ್ವದ ಕುರಿತಾಗಿರುವ ಪ್ರಮುಖ ಒಳನೋಟಗಳು ಯಾವುವೆಂದರೆ:

1) ಬೀಜವನ್ನು ಬಿತ್ತಬೇಕು.

2) ಬೆಳವಣಿಗೆಯ ಗುರುತು ಕಾಣಿಸಿಕೊಳ್ಳುವ ಮೊದಲು ಸಮಯದ ಅಂತರ ಇರುತ್ತದೆ.

3) ನಮಗೆ ಹೇಗೆಂದು ಗೊತ್ತಾಗದಿದ್ದರೂ ಬೀಜವು ಫಲವನ್ನು ಉಂಟುಮಾಡುತ್ತದೆ.

4) ಸುಗ್ಗಿಯು ಬರುವಾಗ, ನಾವು ಕುಡುಗೋಲು ಹಾಕಿ ಅದನ್ನು ಕೂಡಿಸಿಕೊಳ್ಳಬೇಕು (ಬೇರೆ ಮಾತುಗಳಲ್ಲಿ ಹೇಳುವದಾದರೆ, ಸುಗ್ಗಿಯನ್ನು ಕೂಡಿಸಿಕೊಳ್ಳುವದರಲ್ಲಿ ನಮ್ಮ ಪಾತ್ರವೂ ಇರುತ್ತದೆ).

ನಾವು ಅರ್ಥಮಾಡಿಕೊಳ್ಳಬೇಕಾಗಿರುವ ಪ್ರಾಮುಖ್ಯವಾದ ಸತ್ಯ ಏನೆಂದರೆ ಬೀಜವು ಫಲಕೊಡುವ ಮುನ್ನ ಸಮಯ ಹಿಡಿಯುತ್ತದೆ. ನಮ್ಮ

ಹೃದಯದಲ್ಲಿ ಬಿತ್ತಲ್ಪಟ್ಟ (ಮತ್ತು ಬಿತ್ತಲ್ಪಡುವಂಥ) ದೇವರ ವಾಕ್ಯದ ಬೀಜಗಳು ರಾತ್ರಿ ಬೆಳಗಾಗುವದರೊಳಗೆ ಅಪಾರವಾದ ಬೆಳೆಯನ್ನೇನೂ ಕೊಡುವದಿಲ್ಲ. ಸಾಮಾನ್ಯವಾಗಿ, ನಮ್ಮ ಹೃದಯಗಳಲ್ಲಿ ಬಿತ್ತಲ್ಪಟ್ಟಿರುವ ಬೀಜಗಳ ಪರಿಣಾಮಗಳನ್ನು ಮತ್ತು ಫಲಿತಾಂಶಗಳನ್ನು ನೋಡುವ ಮುನ್ನ ಸಮಯ ಹಿಡಿಯುತ್ತದೆ.

ಪ್ರಾರಂಭದಲ್ಲಿ, ನಾವು ಕೇವಲ ಮೂವತ್ತರಷ್ಟು ಬೆಳೆಯನ್ನು ಕಾಣಬಹುದು. ಆದರೆ ಬೀಜವು ಚಿಗುರೊಡೆಯಲು ಮತ್ತು ಬೆಳೆಯಲು ಸಮಯವು ಅವಶ್ಯವಾಗಿದೆ ಎಂಬದು ನಮಗೆ ಗೊತ್ತಿರುತ್ತದೆ. ಸುಗ್ಗಿಕಾಲವು ಬೇಗ ಬರುತ್ತದೆ ಎಂಬದನ್ನು ತಿಳಿದವರಾಗಿ ನಾವು ನಮ್ಮ ಹೃದಯಗಳಲ್ಲಿ ವಾಕ್ಯ ಬಿತ್ತುವದನ್ನು ಮುಂದುವರೆಸುತ್ತೇವೆ. ನಂತರ, ನಾವು ವಾಕ್ಯವೆಂಬ ಬೀಜ ಬಿತ್ತುವದನ್ನು ಮುಂದುವರೆಸುವಾಗ, ವಾಕ್ಯವು ಉಂಟುಮಾಡುವ ಇನ್ನೂ ಅನೇಕ ಸಮೃದ್ಧವಾದ ಹಾಗೂ ಧಾರಾಳವಾದ ಸುಗ್ಗಿಗಳಲ್ಲಿ ಆನಂದಿಸುತ್ತೇವೆ.

ದೇವರ ವಾಕ್ಯದ ಬೀಜವನ್ನು ನಮ್ಮ ಹೃದಯಗಳಲ್ಲಿ ಬಿತ್ತುವದರಿಂದ ಆ ವಾಕ್ಯವು ನಮ್ಮ ಜೀವಿತಗಳಲ್ಲಿ ಹೇಗೆ ಫಲವನ್ನು ಉಂಟುಮಾಡುತ್ತದೆ ಎಂಬದನ್ನು ಪೂರ್ತಿಯಾಗಿ ವಿವರಿಸಲು ನಮ್ಮಿಂದ ಆಗದೆ ಇರಬಹುದು. ಉದಾಹರಣೆಗೆ, ಯಶಸ್ಸು ಮತ್ತು ಸಮೃದ್ಧಿಯ ವಿಷಯವಾಗಿರುವ ವಾಕ್ಯದ ಬೀಜವನ್ನು ಬಿತ್ತುವ ವ್ಯಕ್ತಿ ಅವನು / ಅವಳು ಮಾಡುವ ಎಲ್ಲಾ ಕಾರ್ಯಗಳಲ್ಲಿ ಹೇಗೆ ಯಶಸ್ಸು ಮತ್ತು ಸಮೃದ್ಧಿಯನ್ನು ಅನುಭವಿಸುವನು / ಅನುಭವಿಸುವಳು ಎಂಬದನ್ನು ಪೂರ್ತಿಯಾಗಿ ವಿವರಿಸಲು ನಮ್ಮಿಂದ ಆಗುವದಿಲ್ಲ. ಇದೇಪ್ರಕಾರ, ಸ್ವಸ್ಥತೆ ಮತ್ತು ಆರೋಗ್ಯದ ವಿಷಯವಾಗಿರುವ ದೇವರ ವಾಕ್ಯದ ಬೀಜವನ್ನು ಬಿತ್ತುವವನು ತನ್ನ ಅನಾರೋಗ್ಯ ಮತ್ತು ಕಾಯಿಲೆಯನ್ನು ಗುಣಪಡಿಸುವ ಹಾಗೂ ಅವನಿಗೆ ಒಳ್ಳೆಯ ಆರೋಗ್ಯವನ್ನು ಕೊಡುವ ದೇವರ ಶಕ್ತಿಯನ್ನು ಹೇಗೆ ಅನುಭವಿಸುವನು ಎಂಬದನ್ನು ಪೂರ್ತಿಯಾಗಿ ವಿವರಿಸಲು ನಮ್ಮಿಂದ ಆಗುವದಿಲ್ಲ. ವಾಕ್ಯವು ಬೀಜದಂತಿದೆ, ಮತ್ತು ಹೇಗೆ ಎಂಬದು ನಮಗೆ ಗೊತ್ತಿಲ್ಲದಿದ್ದರೂ ಬೀಜವು ಫಲವನ್ನು ಕೊಡುತ್ತದೆ ಎಂಬದಾಗಿ ಮಾತ್ರವೇ ನಾವು ಹೇಳಬಹುದು. ವಾಕ್ಯವು ಒಳ್ಳೆಯ ನೆಲದಲ್ಲಿ ಬಿತ್ತಲ್ಪಟ್ಟು ಪೋಷಿಸಲ್ಪಡುವಾಗ, ಅದು ಏನನ್ನು ಉಂಟುಮಾಡುವದಕ್ಕಾಗಿ ರೂಪಿಸಲ್ಪಟ್ಟಿದೆಯೋ ಅದನ್ನು ಉಂಟುಮಾಡುತ್ತದೆ.

8

ಪ್ರಕಟನೆ: ಆತ್ಮೀಕ ತಿಳುವಳಿಕೆಯನ್ನು ಹೊಂದುವದು

ನಾವು ವಾಕ್ಯವನ್ನು ತಿಳುಕೊಳ್ಳದೆ ಇರುವಾಗ

ಮತ್ತಾಯ 13:19

ಯಾವನಾದರೂ ಪರಲೋಕರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಆ ಮನುಷ್ಯನೇ ಬೀಜ ಬಿದ್ದ ದಾರೀ ಮಗ್ಗುಲಾಗಿರುವವನು.

ಕರ್ತನಾದ ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾವು ವಾಕ್ಯವನ್ನು ತಿಳುಕೊಳ್ಳದೆ ಇರುವಾಗ, ಸೈತಾನನು ವಾಕ್ಯವನ್ನು ತೆಗೆದುಬಿಡುವ ಮೂಲಕ, ಅದು ನಮ್ಮ ಜೀವಿತಗಳಲ್ಲಿ ಬೇರೂರದಂತೆ ಮತ್ತು ಫಲ ಕೊಡದಂತೆ ಮಾಡುತ್ತಾನೆ. ಸೈತಾನನು ವಾಕ್ಯವನ್ನು ಕದ್ದುಕೊಳ್ಳದಂತೆ ತಡೆಯಲು ನಾವು ವಾಕ್ಯವನ್ನು ತಿಳುಕೊಳ್ಳಬೇಕು (ಆತ್ಮೀಕ ಸತ್ಯದ ತಿಳುವಳಿಕೆಯನ್ನು ಪಡೆದುಕೊಳ್ಳಬೇಕು). ವಾದಗಳು, ಗೊಂದಲಗಳು, ಸುಳ್ಳುಗಳು, ವಂಚನೆಗಳು ಇತ್ಯಾದಿಗಳ ಮೂಲಕ ನಾವು ವಾಕ್ಯದ ತಿಳುವಳಿಕೆಯನ್ನು ಹೊಂದದಂತೆ ತಡೆಯಲು ಸೈತಾನನು ಬಹಳವಾಗಿ ಪ್ರಯತ್ನಿಸುತ್ತಾನೆ.

"ತಿಳುಕೊಳ್ಳುವದು" ಪದಕ್ಕೆ ಉಪಯೋಗಿಸಲಾಗಿರುವ ಗ್ರೀಕ್ ಪದದ ಅರ್ಥವೇನೆಂದರೆ "ಒಟ್ಟುಮಾಡುವದು, ಗ್ರಹಿಸಿಕೊಳ್ಳುವದು, ಅರಿತುಕೊಳ್ಳುವದು." ನಾವು ವಾಕ್ಯವನ್ನು ಬುದ್ಧಿವಂತಿಕೆಯಿಂದ ಮತ್ತು ಬುದ್ಧಿಶಕ್ತಿಯಿಂದ ತಿಳಿದುಕೊಳ್ಳಬೇಕಾಗಿದೆಯಾದರೂ, ಆತ್ಮೀಕ ಸತ್ಯದ ತಿಳುವಳಿಕೆಯನ್ನು ಅಂಗೀಕರಿಸಿಕೊಳ್ಳುವ ಮತ್ತೊಂದು ಕಾರ್ಯವೂ ಇದ್ದು ಅದನ್ನು "ಪ್ರಕಟನೆ" ಎಂದು ಕರೆಯಲಾಗುತ್ತದೆ.

ಲೂಕ 8:12

ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸೈತಾನನು ಬಂದು ಅವರು ನಂಬಿ ರಕ್ಷಣೆ ಹೊಂದಬಾರದೆಂದು ವಾಕ್ಯವನ್ನು ಅವರ ಹೃದಯದಿಂದ ತೆಗೆದು ಬಿಡುತ್ತಾನೆ; ಇವರೇ ದಾರಿಯ ಮಗ್ಗುಲಾಗಿರುವವರು.

ನಾವು ವಾಕ್ಯವನ್ನು ನಂಬುವ ಸ್ಥಾನಕ್ಕೆ ಬರಬಾರದೆಂದು ಸೈತಾನನು ಬಯಸುತ್ತಾನೆ. ಆದ್ದರಿಂದ, ನಾವು ಅದರ ಪ್ರಕಟನೆಯನ್ನು ಪಡೆದು ಅದನ್ನು ನಂಬುವ ಮೊದಲೇ ವಾಕ್ಯವನ್ನು ನಮ್ಮಿಂದ ತೆಗೆದುಹಾಕಲು ಅವನು ಪ್ರಯತ್ನಿಸುತ್ತಾನೆ. ಆದರೂ, ಒಮ್ಮೆ ನಾವು ವಾಕ್ಯವನ್ನು ತಿಳುಕೊಂಡರೆ ಅಥವಾ ಪ್ರಕಟನೆಯನ್ನು ಹೊಂದಿದರೆ, ವಾಕ್ಯವನ್ನು ನಂಬಬಹುದು ಮತ್ತು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುವ ವಾಕ್ಯದ ಶಕ್ತಿಯನ್ನು ಅನುಭವಿಸಬಹುದು.

ಶಾಸ್ತ್ರಗಳು ಮತ್ತು ಮಾನವನ ಬುದ್ಧಿಶಕ್ತಿ

1 ಕೊರಿಂಥದವರಿಗೆ 2:14

ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.

ನಮ್ಮ ಬುದ್ಧಿಶಕ್ತಿಯ ಸಾಮರ್ಥ್ಯದಿಂದ ನಾವು ಶಾಸ್ತ್ರದ ಮಾತುಗಳನ್ನು ಓದುತ್ತೇವೆ ಮತ್ತು ಅರ್ಥಮಾಡಿಕೊಳ್ಳುತ್ತೇವೆ. ಇಬ್ರಿಯರಿಗೆ ಮತ್ತು ಗ್ರೀಕ್ ಭಾಷೆಗಳಲ್ಲಿ ಬರೆಯಲ್ಪಟ್ಟಿರುವ ಶಾಸ್ತ್ರಗಳ ಚಾರಿತ್ರಿಕ ಹಿನ್ನಲೆ ಮತ್ತು ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ನಾವು ನಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸುತ್ತೇವೆ. ದೇವರು ನಮಗೆ ನಮ್ಮ ಬುದ್ಧಿಶಕ್ತಿಯನ್ನು ಕೊಟ್ಟಿದ್ದಾನೆ, ಮತ್ತು ನಾವು ಅದನ್ನು ಸರಿಯಾಗಿ ಉಪಯೋಗಮಾಡಿಕೊಳ್ಳಬೇಕು.

ಆದರೂ, ಪ್ರಾಕೃತ ಮನುಷ್ಯನು ತನ್ನ ಪ್ರಾಕೃತ ಮನಸ್ಸಿನಿಂದ ದೇವರಾತ್ಮನು ತನ್ನ ವಾಕ್ಯದ ಮೂಲಕ ತಿಳಿಯಪಡಿಸುವ ದೈವೀಕ ಸತ್ಯಗಳನ್ನು ಗುರುತಿಸಲು ಅಶಕ್ತವಾಗಿದ್ದಾನೆ. ಆತ್ಮನ ಕಾರ್ಯಗಳನ್ನು ಹೊಂದಿಕೊಳ್ಳಲು ಆತ್ಮೀಕ ವಿವೇಚನೆಯ (ಅಥವಾ ಆತ್ಮೀಕ ಒಳನೋಟದ) ಅವಶ್ಯಕತೆ ಇರುತ್ತದೆ. ಮಾನವನ ಬುದ್ಧಿಶಕ್ತಿಯ ಸಾಮರ್ಥ್ಯವು ಇಲ್ಲಿ ಕೊನೆಗೊಳ್ಳುತ್ತದೆ ಮತ್ತು ಪವಿತ್ರಾತ್ಮನ ಕಾರ್ಯದ ಮೇಲಿನ ಆತುಕೊಳ್ಳುವಿಕೆಯು ಪ್ರಾರಂಭವಾಗುತ್ತದೆ.

1 ಕೊರಿಂಥದವರಿಗೆ 2:9-12

9 ಆದರೆ ಬರೆದಿರುವ ಪ್ರಕಾರ
ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನು
ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು
ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.

10 ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.
11 ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ.
12 ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು.

ದೇವರು ತನ್ನ ಪವಿತ್ರಾತ್ಮನ ಮೂಲಕ ಆತ್ಮೀಕ ಸತ್ಯ ಮತ್ತು ಆತ್ಮೀಕ ವಾಸ್ತವಗಳನ್ನು ಪ್ರಕಟಿಸುತ್ತಾನೆ (ಅನಾವರಣಗೊಳಿಸುತ್ತಾನೆ, ಬಯಲು ಮಾಡುತ್ತಾನೆ). ದೇವರು ನಮಗೆ ಉಚಿತವಾಗಿ ಕೊಟ್ಟಿರುವ ಕಾರ್ಯಗಳನ್ನು ತಿಳಿದುಕೊಳ್ಳಲು (ಅರ್ಥಮಾಡಿಕೊಳ್ಳಲು, ದೃಢತೆಯನ್ನು ಹೊಂದಲು, ನೋಡಲು, ಗ್ರಹಿಸಿಕೊಳ್ಳಲು) ಇದು ನಮ್ಮನ್ನು ಬಲಪಡಿಸುತ್ತದೆ.

ಪವಿತ್ರಾತ್ಮನು ಪ್ರಕಟನೆಯ ಆತ್ಮನಾಗಿದ್ದಾನೆ. ಶಾಸ್ತ್ರಗಳಲ್ಲಿರುವ ದೈವೀಕ ಸತ್ಯಗಳನ್ನು ನೋಡಲು ಆತನು ನಮ್ಮನ್ನು ಬಲಪಡಿಸುತ್ತಾನೆ. ಹಳೆಯ ಪ್ರವಾದಿಗಳು ಬರೆದಿರುವ ಮಾತುಗಳ ಅರ್ಥವನ್ನೂ ದಾಟಿ ದೇವರು ವ್ಯಕ್ತಪಡಿಸಿರುವ ಮೂಲ ಆಲೋಚನೆಗಳೊಳಗೆ ಆತನು ನಮ್ಮನ್ನು ಕರೆದೊಯ್ಯುತ್ತಾನೆ. ದೇವರ ಆಲೋಚನೆಗಳು ಮತ್ತು ಮನುಷ್ಯನ ಆಲೋಚನೆಗಳ ನಡುವೆ ಬಹಳ ದೊಡ್ಡ ವ್ಯತ್ಯಾಸವಿದೆ. ಕರ್ತನಾದ ದೇವರು ಹೇಳಿದ್ದೇನೆಂದರೆ, *"ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ"* (ಯೆಶಾಯ 55:9).

ಪ್ರಕಟನೆ ಅಂದರೆ ಬುದ್ಧಿಶಕ್ತಿಯ ತಿಳುವಳಿಕೆಯಿಂದ ಆತ್ಮೀಕ ತಿಳುವಳಿಕೆಗೆ ಸಾಗುವದಾಗಿದೆ. ಪ್ರಕಟನೆಯ ಮೂಲಕ ನಾವು ದೇವರ ಆಲೋಚನೆಗಳನ್ನು ಹೊಂದಿಕೊಳ್ಳುತ್ತೇವೆ. ನಾವು ಆತ್ಮೀಕ ಸತ್ಯಗಳನ್ನು ಅರ್ಥಮಾಡಿಕೊಳ್ಳಬಹುದು. ಒಬ್ಬ ವ್ಯಕ್ತಿಯು ಆತ್ಮೀಕ ಸತ್ಯದ ಪ್ರಕಟನೆಯನ್ನು ಹೊಂದದೆ ಇರುವಾಗ (ಅಂದರೆ, ವಾಕ್ಯದ ಆತ್ಮೀಕ ತಿಳುವಳಿಕೆಯನ್ನು ಹೊಂದದೆ ಇರುವಾಗ), ಯೇಸು ಹೇಳಿದ್ದೇನೆಂದರೆ, *" ... ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ"* (ಮತ್ತಾಯ 13:19).

ಪ್ರಕಟನೆಗಾಗಿ ಪ್ರಾರ್ಥನೆ ಮಾಡುವದು

ಎಫೆಸದವರಿಗೆ 1:17-19

17 ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ.

18 ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ

19 ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ.

ಎಫೆಸದಲ್ಲಿರುವ ವಿಶ್ವಾಸಿಗಳಿಗಾಗಿ ಪೌಲನು ಮಾಡಿದ ಪ್ರಾರ್ಥನೆಯಲ್ಲಿ, ಅವರು ದೇವರನ್ನು ತಿಳುಕೊಳ್ಳಲು, ದೇವರ ಕರೆಯುವಿಕೆಯ ಉದ್ದೇಶವನ್ನು ತಿಳುಕೊಳ್ಳಲು, ದೇವರು ತನ್ನ ಜನರಿಗಾಗಿ ಇಟ್ಟಿರುವ ಮಹಿಮೆಯ ಸ್ವಾಸ್ಥ್ಯವನ್ನು ತಿಳುಕೊಳ್ಳಲು ಮತ್ತು ದೇವರು ತನ್ನ ಜನರಿಗೆ ಲಭ್ಯವಾಗುವಂತೆ ಮಾಡಿರುವ ಮಹಿಮಾತಿಶಯವನ್ನು ತಿಳುಕೊಳ್ಳಲು ಜ್ಞಾನ ಮತ್ತು ಉಪ್ರಕಟನೆಯ ಆತ್ಮವನ್ನು ಕೊಡುವಂತೆ ಹಾಗೂ ಅವರ ಮನೋನೇತ್ರಗಳನ್ನು ಬೆಳಗಿಸುವಂತೆ ಬೇಡಿಕೊಳ್ಳುತ್ತಾ ಇದ್ದಾನೆ. ಆದ್ದರಿಂದ, ಅಂಥ ಆತ್ಮೀಕ ಸತ್ಯದ ತಿಳುವಳಿಕೆ ಮತ್ತು ಜ್ಞಾನ ಪವಿತ್ರಾತ್ಮನ ಪ್ರಕಟನೆ ಹಾಗೂ ಬೆಳಗಿಸುವಿಕೆಯಿಂದ ಬರುತ್ತದೆ. ನಾವು ಆತ್ಮೀಕ ಸತ್ಯವನ್ನು ತಿಳಿದುಕೊಳ್ಳುವಂತೆ ಪವಿತ್ರಾತ್ಮನು ನಮ್ಮ ಮನೋನೇತ್ರಗಳನ್ನು ಬೆಳಗಿಸುತ್ತಾನೆ ಅಥವಾ ಜ್ಞಾನೋದಯವಾಗುವಂತೆ ಮಾಡುತ್ತಾನೆ.

ಪ್ರಕಟನೆಯ ಪ್ರಕ್ರಿಯೆಯ ಮೂಲಕ ನಾವು ಆತ್ಮೀಕ ತಿಳುವಳಿಕೆಯನ್ನು ಹೊಂದಿಕೊಳ್ಳುವಾಗ, ಪ್ರಾಕೃತವಾಗಿರುವ ತಲೆಯ ಜ್ಞಾನದಿಂದ ಆತ್ಮೀಕ ತಿಳುವಳಿಕೆಯ ಕಡೆಗೆ ಹೋಗುತ್ತೇವೆ. ಇದುವೇ ಪ್ರಾಕೃತ ತಿಳುವಳಿಕೆ ಮತ್ತು ಆತ್ಮೀಕ ತಿಳುವಳಿಕೆ ಅಥವಾ ತಲೆಯ ತಿಳುವಳಿಕೆ ಮತ್ತು ಹೃದಯದ ತಿಳುವಳಿಕೆಯ ನಡುವೆ ಇರುವ ವ್ಯತ್ಯಾಸವಾಗಿದೆ. ನಮ್ಮ ಹೃದಯದಲ್ಲಿ (ಆತ್ಮದಲ್ಲಿ) ನಾವು ಏನಾದರೂ ತಿಳಿದುಕೊಳ್ಳುವಾಗ, ಅದನ್ನು ಅರ್ಥಮಾಡಿಕೊಳ್ಳುವಂತೆ ನಮ್ಮ ಮನೋನೇತ್ರಗಳು ಬೆಳಗಿಸಲ್ಪಡುತ್ತವೆ. ಹೀಗೆ, ನಾವು ನಮ್ಮ ಆಂತರ್ಯದಿಂದ ತಿಳಿದುಕೊಳ್ಳುತ್ತೇವೆ ಮತ್ತು

ನಂಬುತ್ತೇವೆ. ನಾವು ಆತ್ಮೀಕ ಸತ್ಯವನ್ನು ಅಪ್ಪಿಕೊಳ್ಳುತ್ತೇವೆ, ನಂಬುತ್ತೇವೆ, ಅದಕ್ಕನುಸಾರ ನಡೆಯುತ್ತೇವೆ ಮತ್ತು ಅದನ್ನು ಅನುಭವಿಸುತ್ತೇವೆ.

ಆದ್ದರಿಂದ, ನಾವು ವಾಕ್ಯವನ್ನು ಕೇಳಿಸಿಕೊಳ್ಳುವಾಗ ಅಥವಾ ವಾಕ್ಯವನ್ನು ಓದುವಾಗ, ನಾವು ಪ್ರಕಟನೆಗಾಗಿ ಮತ್ತು ಆತ್ಮೀಕ ಸತ್ಯದ ತಿಳುವಳಿಕೆಗಾಗಿ ಪ್ರಾರ್ಥನೆ ಮಾಡಬೇಕು. ನಾವು ವಾಕ್ಯದ ಪ್ರಕಟನೆಯನ್ನು ಹೊಂದಿಕೊಂಡು ಅದನ್ನು ನಂಬುವಾಗ, ನಮ್ಮೊಳಗಿರುವ ವಾಕ್ಯವನ್ನು ಕದ್ದುಕೊಳ್ಳಲು ಅಥವಾ ತೆಗೆದುಹಾಕಲು ಸೈತಾನನಿಗೆ ಆಗುವದಿಲ್ಲ. ನಾವು ಅದನ್ನು ನೋಡುತ್ತೇವೆ. ನಾವು ಅದನ್ನು ನಂಬುತ್ತೇವೆ. ಅದು ಈಗ ನಮ್ಮದಾಗಿದೆ!

9
ಸುಗ್ಗಿಗೆ ತೊಡಕುಗಳು: ವಾಕ್ಯಕ್ಕೆ ವಿರೋಧ

ಮತ್ತಾಯ 13:20,21

20 ಒಬ್ಬನು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಸ್ವೀಕರಿಸುತ್ತಾನೆ;

21 ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪ ಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾನೆ; ಇವನೇ ಬೀಜ ಬಿದ್ದ ಬಂಡೆಯ ನೆಲವಾಗಿರುವವನು.

ಮಾರ್ಕ 4:16,17

16 ಅದೇ ಪ್ರಕಾರ ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ;

17 ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿಬೀಳುತ್ತಾರೆ; ಇವರೇ ಬೀಜಬಿದ್ದ ಬಂಡೆಯ ನೆಲವಾಗಿರುವವರು.

ಲೂಕ 8:13

ಕೆಲವರು ವಾಕ್ಯವನ್ನು ಕೇಳಿದಾಗಲೇ ಅದನ್ನು ಸಂತೋಷದಿಂದ ಅಂಗೀಕರಿಸುತ್ತಾರೆ; ಇವರಿಗೆ ಬೇರಿಲ್ಲದ ಕಾರಣ ಸ್ವಲ್ಪಕಾಲ ಮಾತ್ರವೇ ನಂಬಿಕೊಂಡಿದ್ದು ಶೋಧನೆಯ ಕಾಲದಲ್ಲಿ ಬಿದ್ದುಹೋಗುತ್ತಾರೆ; ಇವರೇ ಬಂಡೆಯ ನೆಲವಾಗಿರುವವರು.

ಯೇಸು ಕ್ರಿಸ್ತನು ತಿಳಿಸಿರುವಂತೆ ಬೀಜವು ಫಲ ಕೊಡದಂತೆ ತಡೆಯುವ ವಿಷಯಗಳನ್ನು ಈಗ ನಾವು ಪರೀಕ್ಷಿಸಿಕೊಳ್ಳೋಣ. ಬೀಜದಲ್ಲಿ ಯಾವುದೇ ಸಮಸ್ಯೆ ಇಲ್ಲ. ಬೀಜವು ದೇವರ ವಾಕ್ಯವಾಗಿದೆ ಆದ್ದರಿಂದ, ಅದು ಪರಿಪೂರ್ಣವಾಗಿದೆ. ಆದರೆ ಹೊರಗಿನ ವಿಷಯಗಳು ವಾಕ್ಯದ ಬೀಜವು ಫಲಕೊಡದಂತೆ ಮಾಡುತ್ತದೆ.

ಯೇಸು ಕ್ರಿಸ್ತನು ಹೇಳಿದಂತೆ ಸುಗ್ಗಿಗೆ ಅಡ್ಡಿಪಡಿಸುವ ಒಂದು ರೀತಿಯ ಹೊರಗಿನ ವಿಷಯ ಅಂದರೆ ವಾಕ್ಯದ ನಿಮಿತ್ತ ಉಂಟಾಗುವ ಹಿಂಸೆ ಅಥವಾ ಸಂಕಟ ಮತ್ತು ಶೋಧನೆಯ ಸಮಯವಾಗಿದೆ.

ವಾಕ್ಯಕ್ಕೆ ಎದುರಾಗುವ ವಿರೋಧವನ್ನು ಎದುರಿಸಿ ನಿಲ್ಲಿರಿ

ನಾವು ದೇವರ ವಾಕ್ಯವನ್ನು ಕೇಳಿ ಅಂಗೀಕರಿಸಿಕೊಳ್ಳುವಾಗ, ಸಂಕಟ (ಸಂಕಷ್ಟ, ಒತ್ತಡ), ಹಿಂಸೆ (ಮಾನವರಿಂದ ವಿರೋಧ) ಮತ್ತು ಶೋಧನೆ (ಕಷ್ಟಗಳು, ಪಾಪಕ್ಕೆ ಪ್ರೇರಣೆಗಳು) ಆ ವಾಕ್ಯದ ನಿಮಿತ್ತ ಎದುರಾಗುತ್ತವೆ. ನಾವು ಕೇಳಿಸಿಕೊಳ್ಳುತ್ತಿರುವ ಮತ್ತು ಅಂಗೀಕರಿಸಿಕೊಳ್ಳುತ್ತಿರುವ ವಾಕ್ಯದ ಕ್ಷೇತ್ರದಲ್ಲಿಯೇ ಈ ವಿರೋಧಗಳು ಸಹಜವಾಗಿರುತ್ತವೆ. ಕೆಲವೊಮ್ಮೆ, ಸೈತಾನನ ಶೋಧನೆಗಳು ದೇವರ ವಾಕ್ಯದ ಸತ್ಯದ ವಿಷಯದಲ್ಲಿ ಸಂದೇಹಪಡುವಂತೆ, ಪ್ರಶ್ನೆ ಮಾಡುವಂತೆ ಮತ್ತು ದೇವರ ವಾಕ್ಯಕ್ಕೆ ದೂರವಾದ ವಿಮರ್ಶೆ ಮಾಡುವಂತೆ ಪ್ರಚೋದನೆಗಳಾಗಿರುತ್ತವೆ ಹಾಗೂ ನಮ್ಮನ್ನು ಹೆದರಿಕೆ ಅಥವಾ ಅಪನಂಬಿಕೆಯ ಸ್ಥಾನಕ್ಕೆ ನಡೆಸುತ್ತದೆ. ವಿರೋಧದ ಸ್ವಭಾವ ಮತ್ತು ಮೂಲ ಸಂಕಟ, ಹಿಂಸೆ ಅಥವಾ ಶೋಧನೆ ಏನೇ ಆಗಿದ್ದರೂ, ನಾವು ಅಂಗೀಕರಿಸಿಕೊಂಡಿರುವ ವಾಕ್ಯದಲ್ಲಿ ನಂಬಿಕೆಯುಳ್ಳವರಾಗಿ ದೃಢವಾಗಿ ನಿಂತುಕೊಳ್ಳಬೇಕು. ನಾವು ವಾಕ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು ಮತ್ತು ನಮ್ಮ ಹೃದಯಗಳಲ್ಲಿ ಬೇರೂರಲು ಅನುಮತಿಸಬೇಕು ಆಗ ಅದು ನಮ್ಮ ಜೀವಿತಗಳಲ್ಲಿ ಫಲವನ್ನು ಉಂಟುಮಾಡುತ್ತದೆ.

ಉದಾಹರಣೆಗೆ, ನಾವು ದೈವೀಕ ಸ್ವಸ್ಥತೆಯ ಬಗ್ಗೆ ವಾಕ್ಯವನ್ನು ಕೇಳಿಸಿಕೊಳ್ಳುತ್ತಾ ಇದ್ದೇವೆ ಅಂದುಕೊಳ್ಳೋಣ. ದೈವೀಕ ಸ್ವಸ್ಥತೆಯ ಪ್ರಕಟನೆಯು ನಮ್ಮನ್ನು ಸಂತೋಷ ಮತ್ತು ದೊಡ್ಡ ಉತ್ಸಾಹದಿಂದ ತುಂಬಿಸುತ್ತದೆ. ಅದಾದ ಸ್ವಲ್ಪ ಸಮಯದ ನಂತರ, ನಾವು ಯಾವುದೋ ರೀತಿಯ ಕಾಯಿಲೆಗೆ ಒಳಗಾಗುತ್ತೇವೆ. ನಾವೇನು ಮಾಡುವೆವು? "ಇದು, ಎಲ್ಲರಿಗೂ ಅಲ್ಲ," ಅಥವಾ "ಬಹುಶಃ ದೈವೀಕ ಸ್ವಸ್ಥತೆಯು ಆದಿ ಸಭೆಗೆ ಮಾತ್ರವೇ, ಇಂದು ನಮಗಲ್ಲ" ಎಂದು ಹೇಳಿ ದೈವೀಕ ಸ್ವಸ್ಥತೆಯ ಕುರಿತಾದ ವಾಕ್ಯವನ್ನು ಅಲಕ್ಷ್ಯ ಮಾಡುತ್ತೇವೆಯೇ? ಅಥವಾ ಇದೇ ರೀತಿಯ ಬೇರೆ ಯಾವುದಾದರೂ ವಾದ ಮಾಡುತ್ತೇವೆಯೇ? ಅಥವಾ ನಾವು ಉದ್ದೇಶಪೂರ್ವಕವಾಗಿಯೇ ವಾಕ್ಯವನ್ನು ತೆಗೆದು, ಮತ್ತೊಮ್ಮೆ ಓದಿ, ಮತ್ತೊಮ್ಮೆ ಕೇಳಿಸಿಕೊಂಡು, ದೈವೀಕ ಸ್ವಸ್ಥತೆಯ ವಿಷಯವಾಗಿರುವ ವಾಕ್ಯವನ್ನು ಧ್ಯಾನ ಮಾಡುತ್ತಾ ನಮ್ಮ ಆತ್ಮಗಳನ್ನು ಪೋಷಿಸಿಕೊಳ್ಳುತ್ತೇವೆಯೇ? ಎರಡನೆಯ ಕಾರ್ಯವನ್ನು ಮಾಡುವದು ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ ದೈವೀಕ ಸ್ವಸ್ಥತೆಯ ಬಗ್ಗೆ ನಾವು ಕೇಳಿಸಿಕೊಂಡಿರುವ ವಾಕ್ಯವು ನಮ್ಮೊಳಗೆ ಆಳಕ್ಕೆ ಹೋಗುತ್ತದೆ.

ವಾಕ್ಯವು ನಿಮ್ಮೊಳಗೆ ಆಳವಾಗಿ ಬೇರೂರಲಿ

ನಾವು ವಾಕ್ಯವನ್ನು ಬಹಳ ಉಲ್ಲಾಸದಿಂದ, ಸಂತೋಷದಿಂದ ಮತ್ತು ಉತ್ಸಾಹದಿಂದ ಅಂಗೀಕರಿಸಿಕೊಳ್ಳಬಹುದು. ಆದರೂ, ವಾಕ್ಯವು ನಿಜವಾಗಿಯೂ *"ಬೇರೂರಲು,"* ಅಂದರೆ ನಮ್ಮ ಹೃದಯದ ಆಳಕ್ಕೆ ಹೋಗಲು ಮತ್ತು ನಮ್ಮೊಳಗೆ ಬಿಗಿಯಾದ ಹಿಡಿತವನ್ನು ಸಾಧಿಸಲು ನಾವು ವಾಕ್ಯದಲ್ಲಿ ಹೆಚ್ಚು ಕಾಲ ಉಳಿಯುತ್ತೇವೆಯೇ ಎಂಬದೇ ನಿಜವಾದ ಪರೀಕ್ಷೆಯಾಗಿದೆ. ಒಂದುವೇಳೆ ವಾಕ್ಯವು ನಮ್ಮೊಳಗೆ ಆಳವಾಗಿ ಬೇರೂರಿಲ್ಲವೆಂದರೆ, ನಾವು ಎಡವಿಬೀಳಬಹುದು (ಬೇಸರಗೊಳ್ಳಬಹುದು, ತಪ್ಪಾದ ಹೆಜ್ಜೆಯನ್ನಿಡಬಹುದು) ಮತ್ತು ವಾಕ್ಯದಿಂದ ಬಿದ್ದುಹೋಗಬಹುದು (ಹಿಂದೆ ಸರಿಯಬಹುದು, ನಿರ್ಗಮಿಸಬಹುದು).

ವಾಕ್ಯವು ನಮ್ಮೊಳಗೆ ಆಳವಾಗಿ ಬೇರೂರಬೇಕೆಂದರೆ, ನಾವು ಸತತವಾಗಿ ವಾಕ್ಯವನ್ನು ಸೇವಿಸಬೇಕು ಮತ್ತು ವಾಕ್ಯದ ಕುರಿತಾಗಿರುವ ನಮ್ಮ ಪ್ರಕಟನೆಯನ್ನು ಬಲಪಡಿಸಿಕೊಳ್ಳಬೇಕು. ಪರಿಸ್ಥಿತಿಗಳು ಹಿತವಾಗಿರುವಾಗ ಮತ್ತು ವಾಕ್ಯಕ್ಕೆ ನಿಜವಾದ ವಿರೋಧವು ಇಲ್ಲದೆ ಇರುವಾಗ ನಾವು ಇದನ್ನು ಮಾಡಬೇಕು. ಸಾಮಾನ್ಯವಾಗಿ, ನಾವು ಒಂದೇ ಸಂದೇಶವನ್ನು ಮತ್ತೆಮತ್ತೆ ಕೇಳಿಸಿಕೊಳ್ಳುತ್ತಾ ಇರುವದಾದರೆ-ಒಂದೇ ವಾಕ್ಯವನ್ನು ಮತ್ತೆಮತ್ತೆ ನಮಗೆ ಹೇಳುತ್ತಾ ಇರುವದಾದರೆ ನಾವು ಬೇಸರಗೊಳ್ಳುತ್ತೇವೆ. ಆದರೆ ನಾವು ವಾಕ್ಯವನ್ನು ಕೇಳಿಸಿಕೊಳ್ಳಬೇಕು ಮತ್ತು ಕೇಳಿಸಿಕೊಳ್ಳುವದನ್ನು ಮುಂದುವರೆಸಬೇಕು ಆಗ ಅದು ನಮ್ಮೊಳಗೆ ಆಳವಾಗಿ ಬೇರೂರುತ್ತದೆ ಹಾಗೂ ವಾಕ್ಯಕ್ಕೆ ವಿರೋಧವು ಎದುರಾಗುವಾಗ ನಾವು ಅದನ್ನು ಎದುರಿಸಿ ನಿಲ್ಲಲು ಸಾಧ್ಯವಾಗುತ್ತದೆ. ಇಬ್ರಿಯರಿಗೆ 2:1 ಹೇಳುವ ಪ್ರಕಾರ, *"ಆದದರಿಂದ ನಾವು ಕೇಳಿದ ಸಂಗತಿಗಳಿಗೆ ತಪ್ಪಿಹೋದೇವೆಂದು ಭಯಪಟ್ಟು ಅವುಗಳಿಗೆ ಹೆಚ್ಚಾಗಿ ಲಕ್ಷ್ಯ ಕೊಡುವವರಾಗಿರಬೇಕು."*

ನೀವು ಹೊಂದಿರುವ ಪ್ರಕಟನೆ ಮತ್ತು ಸತ್ಯದಿಂದ ನಿಮ್ಮ ಆತ್ಮವನ್ನು ತಪ್ಪದೆ ಪೋಷಿಸಿಕೊಳ್ಳುತ್ತಾ ಇರಿ ಆಗ ಅದು ನಿಮ್ಮೊಳಗೆ ಆಳವಾಗಿ ಬೇರೂರುವದು. ಕಷ್ಟದ ಸಮಯಗಳಲ್ಲಿ ನೀವು ಹಿಂದೆ ಸರಿಯುವದಿಲ್ಲ ಎಂಬದನ್ನು ಇದು ದೃಢಪಡಿಸುತ್ತದೆ.

10

ಸುಗ್ಗಿಗೆ ತೊಡಕುಗಳು: ವಾಕ್ಯವನ್ನು ಅಡಗಿಸುವ ಮುಳ್ಳುಗಳು

ಮತ್ತಾಯ 13:22

ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ; ಇವನೇ ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವನು.

ಮಾರ್ಕ 4:18,19

18 ಇನ್ನು ಕೆಲವರು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ

19 ಆ ವಾಕ್ಯವನ್ನು ಅಡಗಿಸಿಬಿಡುವದರಿಂದ ಫಲವನ್ನು ಕೊಡದೆ ಇರುತ್ತಾರೆ; ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು.

ಲೂಕ 8:14

ಬೇರೆ ಕೆಲವರು ವಾಕ್ಯವನ್ನು ಕೇಳಿದ ಮೇಲೆ ಬರಬರುತ್ತಾ ಈ ಜೀವಮಾನದಲ್ಲಿ ಆಗುವ ಚಿಂತೆ ಐಶ್ವರ್ಯ ಭೋಗಗಳಿಂದ ಅಡಗಿಸಲ್ಪಟ್ಟು ಫಲವನ್ನು ಮಾಗಿಸುವದಿಲ್ಲ; ಇವರೇ ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವರು.

ಯೇಸು ಕ್ರಿಸ್ತನು ಹೇಳಿದಂತೆ ಸುಗ್ಗಿಗೆ ಅಡ್ಡಿಪಡಿಸುವ ವಿಷಯ ಯಾವುದೆಂದರೆ ವಾಕ್ಯವನ್ನು ಅಡಗಿಸಿಬಿಡುವ ಮುಳ್ಳುಗಳು. ಮುಳ್ಳುಗಳು ಈ ಲೋಕದ ಚಿಂತೆಗಳನ್ನು, ಐಶ್ವರ್ಯದಿಂದುಂಟಾಗುವ ಮೋಸವನ್ನು,ಇತರೆ ವಿಷಯಗಳ ಮೇಲಣ ಆಶೆಗಳನ್ನು ಮತ್ತು ಜೀವಿತದ ಭೋಗಗಳನ್ನು ಪ್ರತಿನಿಧಿಸುತ್ತವೆ. ಇವೆಲ್ಲವುಗಳಿಂದ ಆಗುವ ಒಂದು ಸಾಮಾನ್ಯವಾದ ಪರಿಣಾಮ ಅಂದರೆ ಅಡಚಣೆ. ಇವು ನಮ್ಮ ಗಮನವನ್ನು ವಾಕ್ಯದ ಕಡೆಯಿಂದ ಇತರೆ ವಿಷಯಗಳ ಕಡೆಗೆ ತಿರುಗಿಸುತ್ತವೆ. ಆದ್ದರಿಂದ, ಇವು ಚಿಕ್ಕ ಗಿಡಗಳಿಗೆ ಸೂರ್ಯನ ಬೆಳಕು, ನೀರು ಮತ್ತು ಪೌಷ್ಠಿಕಾಂಶಗಳು ಸಿಗದಂತೆ ಮಾಡುವ ಮುಳ್ಳುಗಳ ಹಾಗೆ ಕಾರ್ಯಮಾಡುವದರಿಂದ, ಅಂತಿಮವಾಗಿ ಅದನ್ನು ನಾಶಮಾಡುತ್ತವೆ. ನಮಗೂ ಹೀಗೆಯೇ ಆಗುತ್ತದೆ. ನಾವು ವಿಚಲಿತರಾಗುತ್ತೇವೆ

ಮತ್ತು ಇತರೆ ಕಾರ್ಯಗಳಲ್ಲಿ ನಿರತರಾಗುತ್ತೇವೆ, ಹಾಗೂ ನಮ್ಮ ಹೃದಯಗಳಲ್ಲಿ ವಾಕ್ಯವನ್ನು ಸಂರಕ್ಷಿಸುವ ಮತ್ತು ಪೋಷಿಸುವ ಕಾರ್ಯವನ್ನು ನಿರ್ಲಕ್ಷಿಸುತ್ತೇವೆ. ಅಂತಿಮವಾಗಿ, ವಾಕ್ಯವು ನಮ್ಮ ಜೀವಿತಗಳಲ್ಲಿ ಫಲರಹಿತವಾಗುತ್ತದೆ.

ವಾಕ್ಯವನ್ನು ಅಡಗಿಸಿಬಿಡುವ ಮುಳ್ಳುಗಳಿಗೆ ವಿರುದ್ಧವಾಗಿ ಎಚ್ಚರವಾಗಿರಬೇಕು

ಈ ಲೋಕದ ಚಿಂತೆಗಳು, ಐಶ್ವರ್ಯದಿಂದುಂಟಾಗುವ ಮೋಸ, ಇತರೆ ವಿಷಯಗಳ ಮೇಲಣ ಆಶೆ ಮತ್ತು ಜೀವನದ ಭೋಗಗಳಿಂದ ನಮ್ಮ ಹೃದಯಗಳನ್ನು ನಾವು ಕಾಪಾಡಿಕೊಳ್ಳಬೇಕು. ನಮ್ಮೆಲ್ಲರಿಗೂ ಚಿಂತೆಗಳಿವೆ (ನೆರವೇರಿಸಬೇಕಾದ ಜವಾಬ್ದಾರಿಕೆಗಳಿವೆ), ನಾವು ಸಂಪತ್ತನ್ನು ನಿಭಾಯಿಸುತ್ತೇವೆ (ಆಸ್ತಿ ಅಂತಸ್ತು, ಹಣ), ನಮಗೆ ಬೇರೆ ಆಸಕ್ತಿಗಳಿಗೆ ಮತ್ತು ನ್ಯಾಯಸಮ್ಮತವಾದ ಸುಖಗಳನ್ನು ಬಯಸುತ್ತೇವೆ (ಒಳ್ಳೆಯ ಸಂಗತಿಗಳು), ಆದರೆ ನಮ್ಮ ಹೃದಯಗಳನ್ನು ದೇವರಿಂದ ಮತ್ತು ಆತನ ವಾಕ್ಯಗಳಿಂದ ದೂರಮಾಡುವದಕ್ಕೆ ಇವುಗಳಿಗೆ ಅವಕಾಶ ಕೊಡದಂತೆ ನಾವು ನೋಡಿಕೊಳ್ಳಬೇಕು.

ಮುಳ್ಳುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಪ್ರಾಯೋಗಿಕ ಮಾರ್ಗಗಳನ್ನು ಇಲ್ಲಿವೆ.

1) ದೇವರು ಮತ್ತು ಆತನ ವಾಕ್ಯದ ಮೇಲೆ ನಿಮಗಿರುವ ಪ್ರೀತಿಯನ್ನು ದೃಢಪಡಿಸಿರಿ.

2) ನಿಮ್ಮ ಸ್ವಂತ ಹೃದಯವನ್ನು ಕಾಪಾಡಿಕೊಳ್ಳಿರಿ.

ದೇವರು ಮತ್ತು ಆತನ ವಾಕ್ಯದ ಮೇಲೆ ನಿಮಗಿರುವ ಪ್ರೀತಿಯನ್ನು ದೃಢಪಡಿಸಿರಿ

ಕೀರ್ತನೆಗಾರನು 119ನೇ ಕೀರ್ತನೆಯಲ್ಲಿ ಮಾಡಿರುವಂತೆ ದೇವರು ಮತ್ತು ಆತನ ವಾಕ್ಯದ ಮೇಲೆ ನಿಮಗಿರುವ ಪ್ರೀತಿ ಹಾಗೂ ಆಸಕ್ತಿಯನ್ನು ದೃಢಪಡಿಸುವದು ನಿಜವಾಗಿಯೂ ಅದ್ಭುತವಾಗಿರುತ್ತದೆ.

ದೇವರ ವಾಕ್ಯದ ಮೇಲೆ ನಮಗಿರುವ ಪ್ರೀತಿಯನ್ನು ದೃಢಪಡಿಸುವದು ಹೇಗೆ ಎಂಬದನ್ನು ಕಲಿಸುವಂಥ ಕೆಲವು ವಚನಗಳನ್ನು 119ನೇ ಕೀರ್ತನೆಯಿಂದ ಆರಿಸಲಾಗಿದೆ.

ಕೀರ್ತನೆಗಳು 119:16,36,37,47,72,97,127,162

16 ನಿನ್ನ ನಿಬಂಧನೆಗಳಲ್ಲಿ ಉಲ್ಲಾಸಪಡುವೆನು; ನಿನ್ನ ವಾಕ್ಯವನ್ನು ಮರೆಯುವದಿಲ್ಲ.

36 ನನ್ನ ಮನಸ್ಸನ್ನು ದ್ರವ್ಯಾಶೆಗಲ್ಲ, ನಿನ್ನ ಕಟ್ಟಳೆಗಳಿಗೆ ತಿರುಗಿಸು.

37 ವ್ಯರ್ಥಕಾರ್ಯಗಳಲ್ಲಿ ದೃಷ್ಟಿಯಿಡದಂತೆ ನನ್ನನ್ನು ಕಾಪಾಡು; ನಿನ್ನ ಮಾರ್ಗದಲ್ಲಿ ನಡೆಯುವಂತೆ ನನ್ನನ್ನು ಚೈತನ್ಯಗೊಳಿಸು.

47 ನಿನ್ನ ಆಜ್ಞೆಗಳಲ್ಲಿ ಆನಂದಪಡುತ್ತೇನೆ; ಅವು ನನಗೆ ಇಷ್ಟವಾಗಿವೆ.

72 ನೀನು ಉಸಿರಿದ ಧರ್ಮಶಾಸ್ತ್ರವು ಸಾವಿರಾರು ಚಿನ್ನಬೆಳ್ಳಿಯ ನಾಣ್ಯಗಳಿಗಿಂತಲೂ ನನಗೆ ಅತಿಪ್ರಿಯವಾಗಿದೆ.

97 ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ.

127 ನಿಜವಾಗಿ ನಿನ್ನ ಆಜ್ಞೆಗಳು ಬಂಗಾರಕ್ಕಿಂತಲೂ ಅಪರಂಜಿಗಿಂತಲೂ ನನಗೆ ಬಹುಪ್ರಿಯವಾಗಿವೆ.

162 ಒಬ್ಬನು ತಾನು ಸಂಪಾದಿಸಿದ ದೊಡ್ಡ ಕೊಳ್ಳೆಯಲ್ಲಿ ಹೇಗೋ ಹಾಗೆಯೇ ನಾನು ನಿನ್ನ ನುಡಿಯಲ್ಲಿ ಆನಂದಿಸುತ್ತೇನೆ.

ನಿಮ್ಮ ಹೃದಯವನ್ನು ಕಾಪಾಡಿಕೊಳ್ಳಿರಿ

ನಮ್ಮ ಹೃದಯಗಳ ಬಯಕೆಗಳು ಮತ್ತು ಆಸಕ್ತಿಗಳ ಮೇಲೆ ನಾವು ಯಾವಾಗಲೂ ಕಣ್ಣಿಟ್ಟಿರಬೇಕು. ನಮ್ಮ ಆಸಕ್ತಿಗಳು ಎಲ್ಲಿ ಮತ್ತು ಯಾವುವುಗಳ ಮೇಲಿವೆ ಎಂಬದನ್ನು ನಾವು ಯಾವಾಗಲೂ ಪರೀಕ್ಷಿಸಿಕೊಳ್ಳುತ್ತಿರಬೇಕು. ನಾವು ನಮಗಿದ್ದ ಮೊದಲ ಪ್ರೀತಿಯನ್ನು ಬಿಟ್ಟು ಅತ್ತಿತ್ತ ಅಲೆದಾಡುತ್ತಿದ್ದೇವೆ ಅಥವಾ ಚಂಚಲರಾಗುತ್ತಿದ್ದೇವೆ ಎಂಬದಾಗಿ ನಮಗೆ ಅನ್ನಿಸಿದ ಕೂಡಲೇ, ನಾವು ಅರಿಕೆಮಾಡಿಕೊಳ್ಳುತ್ತೇವೆ ಮತ್ತು ನಮ್ಮ ಹೃದಯಗಳನ್ನು ಆತನ ಕಡೆಗೆ ತಿರಿಗಿಸಿ, ನಮ್ಮನ್ನು ಆತನ ಕಡೆಗೆ ಸೆಳೆದುಕೊಳ್ಳುವಂತೆ ಬೇಡಿಕೊಳ್ಳುತ್ತೇವೆ. ಆತನಿಗಾಗಿ ತವಕಿಸುತ್ತಾ (ಮತ್ತಾಯ 6:33) ನಾವು ಉದ್ದೇಶಪೂರ್ವಕವಾಗಿ ಮತ್ತು ಪ್ರಾಯೋಗಿಕವಾಗಿ ನಮ್ಮ ಜೀವಿತಗಳಲ್ಲಿ ದೇವರಿಗೆ ಪ್ರಥಮ ಸ್ಥಾನ ಕೊಡುತ್ತೇವೆ ಎಂಬದನ್ನು ದೃಢಪಡಿಸಿಕೊಳ್ಳಬೇಕು. ಆರಾಧನೆ, ಪ್ರಾರ್ಥನೆ ಮತ್ತು ಆತನ ವಾಕ್ಯದ ಮೂಲಕ ನಾವು ದೇವರೊಂದಿಗೆ ಆತನ ಪ್ರಸನ್ನತೆಯಲ್ಲಿರಲು ಸಮಯ ಹಾಗೂ ಸ್ಥಳವನ್ನು ಮಾಡಿಕೊಳ್ಳಬೇಕು. *“ … ಹೆಚ್ಚಿದ ಆಸ್ತಿಯಲ್ಲಿ ಮನಸ್ಸಿಡಬೇಡಿರಿ”* (ಕೀರ್ತನೆಗಳು 62:10).

11

ಮೂರು ಕೀಲಿಗಳು: ತಿಳುಕೊಳ್ಳುವದು, ಕೈಗೊಳ್ಳುವದು, ಇಟ್ಟುಕೊಳ್ಳುವದು

ವಾಕ್ಯವೆಂಬ ಬೀಜವು ನಮ್ಮ ಜೀವಿತಗಳಲ್ಲಿ ಕ್ರಮೇಣವಾಗಿ ಫಲ ಉಂಟುಮಾಡುವಂಥದ್ದಕ್ಕೆ ಕಾರಣ ಏನು ಎಂಬದನ್ನು ಕರ್ತನಾದ ಯೇಸು ಕ್ರಿಸ್ತನು ನಮಗೆ ಪ್ರಕಟಪಡಿಸಿದ್ದಾನೆ. ಮೂರು ಸುವಾರ್ತೆಗಳಲ್ಲಿ ಇವುಗಳನ್ನು ಹೇಗೆ ಬರೆದಿವೆ ಎಂಬದನ್ನು ನೋಡುವಾಗ, ನಾವು ಕಲಿತುಕೊಳ್ಳುವದೇನೆಂದರೆ ನಾವು ನಮ್ಮ ಹೃದಯಗಳಲ್ಲಿ ದೇವರ ವಾಕ್ಯವನ್ನು ತಿಳುಕೊಳ್ಳುವಾಗ (ಮತ್ತಾಯ 13:23), ಕೈಗೊಳ್ಳುವಾಗ (ಮಾರ್ಕ 4:20) ಮತ್ತು ಇಟ್ಟುಕೊಳ್ಳುವಾಗ (ಲೂಕ 8:15) ನಮ್ಮ ಜೀವಿತಗಳಲ್ಲಿ ಫಲಕೊಡುವವರಾಗುತ್ತೇವೆ.

ತಿಳುಕೊಳ್ಳಬೇಕು

ಮತ್ತಾಯ 13:23

ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ, ಅರುವತ್ತರಷ್ಟಾಗಲಿ, ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು.

ಆತ್ಮೀಕ ಸತ್ಯವನ್ನು ತಿಳಿದುಕೊಳ್ಳುವ ಮತ್ತು ಪ್ರಕಟನೆಯನ್ನು ಹೊಂದಿಕೊಳ್ಳುವ ಪ್ರಾಮುಖ್ಯತೆಯ ಬಗ್ಗೆ ನಾವು ಹಿಂದಿನ ಅಧ್ಯಾಯದಲ್ಲಿ ಪರೀಕ್ಷೆ ಮಾಡಿಕೊಂಡಿದ್ದೇವೆ. ನಮ್ಮ ಹೃದಯಗಳಿಗೆ ಆತ್ಮೀಕ ಸತ್ಯವನ್ನು ಅನಾವರಣಗೊಳಿಸುವದು ಪ್ರಗತಿಪರವಾಗಿದೆ. ಪವಿತ್ರಾತ್ಮನು ನಮ್ಮ ಹೃದಯಗಳ ಮೇಲೆ ಹೆಚ್ಚೆಚ್ಚು ಬೆಳಕು ಚೆಲ್ಲುವಾಗ ನಾವು ಆತ್ಮೀಕ ಸತ್ಯವನ್ನು ಪ್ರಗಪರ ರೀತಿಯಲ್ಲಿ ಸ್ಪಷ್ಟವಾಗಿ ನೋಡುತ್ತೇವೆ. ಆತನ ವಾಕ್ಯದಲ್ಲಿ ನಮಗೆ ಕೊಡಲಾಗಿರುವ ಪ್ರಕಾರ ಸತ್ಯದ ವಿವಿಧ ಕ್ಷೇತ್ರಗಳಲ್ಲಿ ಪ್ರಕಟನೆ ಹೊಂದುವದನ್ನು ಮುಂದುವರೆಸಬೇಕು. ನಮ್ಮ ಕರ್ತನ ಕುರಿತಾದ ತಿಳುವಳಿಕೆಯಲ್ಲಿ ನಾವು ಸ್ಥಿರವಾಗಿ ಅಭಿವೃದ್ಧಿಯಾಗಬೇಕು (ಕೊಲೊಸ್ಸೆಯವರಿಗೆ 1:10), ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಅಭಿವೃದ್ಧಿಯಾಗುವದನ್ನು ಮುಂದುವರೆಸಬೇಕು (2 ಪೇತ್ರನು 3:18), ನಮ್ಮ ತಿಳುವಳಿಕೆಯಲ್ಲಿ ನೂತನರಾಗಬೇಕು (ಕೊಲೊಸ್ಸೆಯವರಿಗೆ

3:10) ಕ್ರಿಸ್ತನ ಪ್ರೀತಿಯನ್ನು ಗ್ರಹಿಸಿಕೊಳ್ಳಬೇಕು ಮತ್ತು ತಿಳಿದುಕೊಳ್ಳಬೇಕು (ಎಫೆಸದವರಿಗೆ 3:18,19) ಮತ್ತು ದೇವಕುಮಾರನ ವಿಷಯವಾದ ತಿಳುವಳಿಕೆಗೆ ಬರಬೇಕು (ಎಫೆಸದವರಿಗೆ 4:13). ನಮ್ಮ ಆತ್ಮಿಕ ಪ್ರಯಾಣವು ನಮ್ಮ ದೇವರ ಪ್ರಕಟನೆ, ಆತನ ಉದ್ದೇಶಗಳು, ಆತನು ನಮಗಾಗಿ ಇಟ್ಟಿರುವ ಸ್ವಾಸ್ಥ್ಯ ಮತ್ತು ನಮಗೆ ದೊರೆಯುವಂತೆ ಆತನು ಮಾಡಿರುವ ಅಧಿಕಾರದಲ್ಲಿ ಮುಂದುವರೆಯುವ ಬೆಳವಣಿಗೆಯಾಗಿದೆ. ಆದ್ದರಿಂದ, ವಾಕ್ಯವನ್ನು ಕೇಳಿಸಿಕೊಳ್ಳುತ್ತಲೇ ಇರಿ. ವಾಕ್ಯವನ್ನು ಧ್ಯಾನಿಸುತ್ತಲೇ ಇರಿ. ಶಾಸ್ತ್ರವಚನಗಳನ್ನು ಓದುತ್ತಲೇ ಇರಿ.

ಕ್ರೈಸ್ತ ನಂಬಿಕೆ ಮತ್ತು ಪ್ರಯಾಣದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಕಟನೆ ಹಾಗೂ ಹೊಸದಾದ ಒಳನೋಟ ಹೊಂದಿಕೊಳ್ಳುವದನ್ನು ಮುಂದುವರೆಸಿರಿ. ಕೀರ್ತನೆಗಾರನ ಹಾಗೆ, ನಾವು ಯಾವಾಗಲೂ ಪ್ರಾರ್ಥನೆ ಮಾಡುವದೇನೆಂದರೆ, *"ನನ್ನ ಕಣ್ಣು ತೆರೆ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು"* (ಕೀರ್ತನೆಗಳು 119:18).

ಕೈಗೊಳ್ಳಬೇಕು

ಮಾರ್ಕ 4:20

ಮತ್ತೆ ಕೆಲವರು ವಾಕ್ಯವನ್ನು ಕೇಳಿ ಕೈಗೊಂಡು ಮೂವತ್ತರಷ್ಟಾಗಲಿ, ಅರುವತ್ತರಷ್ಟಾಗಲಿ, ನೂರರಷ್ಟಾಗಲಿ ಫಲವನ್ನು ಕೊಡುತ್ತಾರೆ; ಇವರೇ ಬೀಜಬಿದ್ದ ಒಳ್ಳೆಯ ನೆಲವಾಗಿರುವವರು.

ನಾವು ಕೈಗೊಳ್ಳಬೇಕು, ಅಂಗೀಕರಿಸಿಕೊಳ್ಳಬೇಕು ಮತ್ತು ಅಪ್ಪಿಕೊಳ್ಳಬೇಕು, ಅಂದರೆ, ನಮ್ಮ ಹೃದಯದಿಂದ ವಾಕ್ಯವನ್ನು ನಂಬಬೇಕು. ವಾಕ್ಯವು ನಮ್ಮ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ಕಾರ್ಯಮಾಡಬೇಕಾದರೆ ನಾವು ಅದನ್ನು ಪೂರ್ಣಹೃದಯದಿಂದ ನಂಬಬೇಕು. ಇಬ್ರಿಯರಿಗೆ 4:2 ನಮಗೆ ಹೇಳುವದನ್ನು ನಾವು ಗಮನಿಸಬೇಕಾದದ್ದು ಆಸಕ್ತಿಕರವಾದ ವಿಷಯವಾಗಿದೆ, *"ಅವರಿಗೆ ಶುಭವರ್ತಮಾನವು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು; ಆದರೆ ಆ ಕಾಲದಲ್ಲಿ ಕೇಳಿದವರು ನಂಬದೆಹೋದ ಕಾರಣ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ."* ನಾವು ವಾಕ್ಯದೊಂದಿಗೆ ನಂಬಿಕೆಯನ್ನು ಬೆರೆಸಲು (ವಾಕ್ಯವನ್ನು ನಂಬಲು) ವಿಫಲರಾಗುವಾಗ, ವಾಕ್ಯದಿಂದ ನಮಗೆ ಲಾಭ ಅಥವಾ ಪ್ರಯೋಜನ ಆಗುವದಿಲ್ಲ. ಮತ್ತೊಂದು ಕಡೆಯಲ್ಲಿ, ನಾವು ವಾಕ್ಯವನ್ನು ನಂಬುವಾಗ,

ಅದು ಫಲ ಕೊಡುವದನ್ನು ಮತ್ತು ನಮ್ಮ ಜೀವಿತಗಳಲ್ಲಿ ನೆರವೇರುವದನ್ನು ನೋಡಬಹುದು. *"ನಂಬಿದವಳಾದ ನೀನು ಧನ್ಯಳೇ; ಕರ್ತನು ನಿನಗೆ ಹೇಳಿದ ಮಾತುಗಳು ನೆರವೇರುವವು ಅಂದಳು"* (ಲೂಕ 1:45).

ನಾವು ಈಗಾಗಲೇ ಹೇಳಿರುವಂತೆ, ಸಂದೇಹಗಳು, ಅಪನಂಬಿಕೆ, ಭಯ ಇತ್ಯಾದಿಗಳ ಮೂಲಕ ನಾವು ವಾಕ್ಯವನ್ನು ನಂಬದಂತೆ ಮಾಡಲು ಸೈತಾನನು ಮತ್ತು ಅವನ ದುರಾತ್ಮಗಳು ಎಲ್ಲಾ ರೀತಿಯಲ್ಲಿಯೂ ಪ್ರಯತ್ನಿಸುವರು, ಆದರೆ ನಾವು ನಂಬಿಕೆಯಲ್ಲಿ ದೃಢವಾಗಿರಬೇಕು. ವಾಕ್ಯವನ್ನು ನಂಬುತ್ತಲೇ ಇರಬೇಕು. ಆತನ ವಾಕ್ಯವೇ ಸತ್ಯವಾಗಿದೆ (ಯೋಹಾನ 17:17).

ಇಟ್ಟುಕೊಳ್ಳಬೇಕು

ಲೂಕ 8:15

ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು.

ಮೇಲಿನ ವಚನದಲ್ಲಿ ಇರುವ "ಇಟ್ಟುಕೊಂಡು" ಎಂಬ ಪದದ ಅರ್ಥ, ಗ್ರೀಕ್ ಭಾಷೆಯಲ್ಲಿ ಬಿಗಿಯಾಗಿ ಹಿಡಿದುಕೊಳ್ಳುವದು, ಉಳಿಸಿಕೊಳ್ಳುವದು, ಅದರಲ್ಲಿಯೇ ಮುಂದುವರೆಯುವದು, ಅದಕ್ಕೆ ಅಂಟಿಕೊಂಡಿರುವದು ಮತ್ತು ಹೊಂದಿಕೊಂಡಿರುವದು ಎಂಬ ಆಲೋಚನೆಯುಳ್ಳದ್ದಾಗಿದೆ. ಆದ್ದರಿಂದ, ನಮ್ಮ ಮಾರ್ಗದಲ್ಲಿ ಮತ್ತು ಆಗಾಗ ಎದುರಾಗುವ ಎಲ್ಲಾ ವಿಷಯಗಳಲ್ಲಿ ನಾವು ತಾಳ್ಮೆಯುಳ್ಳವರಾಗಿದ್ದು ವಾಕ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು. ಇದು ನಮ್ಮ ಜೀವಿತಗಳಲ್ಲಿ ಫಲವನ್ನು ಉಂಟುಮಾಡುವ ವಾಕ್ಯವಾಗಿದೆ.

ಈ ಮೂರು ಕೀಲಿಗಳು-ವಾಕ್ಯವನ್ನು ತಿಳುಕೊಳ್ಳುವದು, ವಾಕ್ಯವನ್ನು ಕೈಗೊಳ್ಳುವದು ಮತ್ತು ವಾಕ್ಯವನ್ನು ಇಟ್ಟುಕೊಳ್ಳುವದು-ವಾಕ್ಯ ನಮ್ಮ ಜೀವಿತಗಳಲ್ಲಿ ಫಲ ಕೊಡಬೇಕಾದರೆ ಬಹಳ ಪ್ರಾಮುಖ್ಯವಾಗಿವೆ. ಪ್ರಾರಂಭದಲ್ಲಿ, ನಾವು ವಾಕ್ಯವನ್ನು ಧ್ಯಾನಿಸುವಾಗ ಮತ್ತು ಕೈಗೊಳ್ಳುವಾಗ, ಅದು ಸ್ವಲ್ಪವೇ ಫಲ (ಮೂವತ್ತರಷ್ಟು) ಕೊಡುವದನ್ನು ಬಹುಶಃ ನೋಡಬಹುದು. ನಾವು ಇದರಲ್ಲಿಯೇ ಮುಂದುವರೆಯಬೇಕು ಮತ್ತು ವಾಕ್ಯದಲ್ಲಿ ಉಳಿಯಬೇಕು. ಪ್ರಕಟನೆ ಹೊಂದಿಕೊಳ್ಳುವದನ್ನು ಮುಂದುವರೆಸಬೇಕು, ವಾಕ್ಯವನ್ನು ನಂಬುತ್ತಾ, ನಮ್ಮ ಜೀವಿತಗಳಲ್ಲಿ ವಾಕ್ಯಗಳನ್ನು ಕಾಪಾಡಿಕೊಳ್ಳಬೇಕು.

ಬಹಳ ಬೇಗ, ಫಲದ ಅಳತೆ, ಅರುವತ್ತರಷ್ಟಾಗುವದನ್ನು, ನಂತರ ನೂರರಷ್ಟಾಗುವದನ್ನು ನೋಡಬಹುದು.

ವಾಕ್ಯಾನುಸಾರವಾಗಿ ಜೀವಿಸುವದನ್ನು ಮುಂದುವರೆಸಿರಿ

ಯಾಕೋಬನು 1:22,25

22 ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ.

25 ಆದರೆ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು.

